॥ ಶ್ರೀ ಗಣೇಶಾಯ ನಮಃ ॥

# ಹಾಟಿ ಬಿಂದು



ಆಧ್ಯಾತ್ಮಿಕ ಸಾಂಸ್ಕತಿಕ ದ್ವೈಮಾಸಿಕ

ಸಂಪುಟ : 18 ಸಂಚಿಕೆ : 3 ಮೇ-ಜೂನ್ 2013

# ಒಳಗಿನ ಪುಟಗಳಲ್ಲಿ


| | | ಪುಟಸಂಖ್ಯೆ |
|---|---|---|
| 1. | ಪ್ರಾರ್ಥನೆ | 1 |
| 2. | ಅಧ್ಯಕ್ಷರ ಸಂದೇಶ | 7 |
| 3. | ಸಂಪಾದಕೀಯ | 8 |
| 4. | ವಿಶೇಷ ಲೇಖನ | 10 |
| 5. | ಬಾಳು ಬೆಳಗಲು ಚಿಂತನ | 12 |
| 6. | ಸಂಸ್ಮರಣೆ | 14 |
| 7. | ಗೀತಾ ಚಿಂತನೆ | 19 |
| 8. | ಪುಸ್ತಕ ಪರಿಚಯ | 21 |
| 9. | ಸ್ಪಂದನ | 22 |
| 10. | ವಾರ್ತಾ ಸಂಚಯ | 23 |
| 11. | ದೇವಸ್ಥಾನದ ವಾರ್ತೆಗಳು | 45 |
| 12. | ದೇಣಿಗೆ ನೀಡಿದ ಭಕ್ತರ ವಿವರ | 48 |
| 13. | ಬಿಲಿಯನ್ ಫೌಂಡೇಶನ್ ವಾರ್ತೆಗಳು | 51 |



'ಕೂಟಬಂಧು' ಪತ್ರಿಕೆಗೆ ಲೇಖನ ಹಾಗೂ ಮಾಹಿತಿಗಳಿಗೆ
ಡಾ। ನಿಟಲಾಪುರ ಕೃಷ್ಣಮೂರ್ತಿ ಕಾರಂತ
ಗೌರವ ಸಂಪಾದಕರು, 'ಕೂಟಬಂಧು'
ಯೋಗಾನಂದ
ಇಂದ್ರಾಣಿ ದೇವಸ್ಥಾನದ ಬಳಿ
ಅಂಚೆ : ಉಡುಪಿ – 576 102
Email : nitilapurakm@yahoo.co.uk
ದೂ. ವಾ. (0820)2573443 (ಮ)



'ಕೂಟಬಂಧು' ಪತ್ರಿಕೆಗೆ ಸಂಬಂಧಿಸಿದ ವ್ಯವಹಾರಗಳಿಗೆ
ಬಿ. ನಾರಾಯಣ ಸೋಮಯಾಜಿ
ಕಾರ್ಯನಿರ್ವಹಣಾಧಿಕಾರಿ, ಕೂಟಬಂಧು ಟ್ರಸ್ಟ್
ಗಜಾನನ ಇಂಡಸ್ಟ್ರಿಯಲ್ ಎಂಟರ್‌ಪ್ರೈಸಸ್
ಅಂಚೆ ಜೋಡುಮಾರ್ಗ – 574 219
ದೂ. ವಾ. (08255) 233268 (ಆ)
232468 (ಮ) ಮೊಬೈಲ್ : 9448858868
Email : narayana.somayaji@gmail.com



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅಭಿಪ್ರಾಯಕ್ಕೆ ಆಯಾ ಲೇಖಕರೇ ಜವಾಬ್ದಾರರು. ಅದಕ್ಕೆ ಸಂಪಾದಕರು ಅಥವಾ ಕೂಟ ಮಹಾಜಗತ್ತು ಹೊಣೆಯಲ್ಲ

ಸಂಪಾದಕ



**ಶ್ರೀ ಗುರು ನರಸಿಂಹ ದೇವಸ್ಥಾನ**
**ಸಾಲಿಗ್ರಾಮ, ಉಡುಪಿ ಜಿಲ್ಲೆ**
**ದೂರವಾಣಿ : 2564544, 3204544**
**ಮೊಬೈಲ್ : 9449545714**
**ಅಂಜನೇಯ ದೇವಸ್ಥಾನ : 2564004**

# ವಿದ್ಯಾರ್ಥಿ ವೇತನ ಅರ್ಜಿ ಆಹ್ವಾನ

## ಕೂಟಮಹಾಜಗತ್ತು ಸಾಲಿಗ್ರಾಮ (ರಿ.)

ಇದರ ಸಮಸ್ತ ಸದಸ್ಯ ಭಾಂದವರ ತಿಳುವಳಿಕೆಗಾಗಿ ಸಮಾಜದ ಅರ್ಹ ಪ್ರತಿಭಾನ್ವಿತ, ಆರ್ಥಿಕ ನಿಶ್ಯಕ್ತ ವಿದ್ಯಾರ್ಥಿಗಳಿಗೆ ಬೇರೆ ಬೇರೆ ದತ್ತಿಮಂಡಳಿಗಳಿಂದ ಅರ್ಜಿಯನ್ನು ಆಹ್ವಾನಿಸಿರುತ್ತಾರೆ.

1. ಶ್ರೀ ಗುರುನರಸಿಂಹ ಬಿಲಿಯನ್ ಫೌಂಡೇಶನ್ ಟ್ರಸ್ಟ್ (ರಿ.), ನಂ. 83, 2ನೇ ಹಂತ, 2ನೇ ಘಟ್ಟ, ಪಶ್ಚಿಮ ಕಾರ್ಡು ರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು – 560086
   ಅಥವಾ ಶ್ರೀ ಸಾಲಿಗ್ರಾಮ ಗುರುನರಸಿಂಹ ದೇವಸ್ಥಾನ, ಉಡುಪಿ ಜಿಲ್ಲೆ.

2. ಶ್ರೀ ಗುರು ಗಾಯತ್ರಿ ಬಿಲಿಯನ್ ಫೌಂಡೇಶನ್ ಟ್ರಸ್ಟ್ (ರಿ.), C/o ಪರಮೇಶ್ವರ ಐತಾಳ್, ಅಧ್ಯಕ್ಷರು, ಕೂಟ ಮಹಾಜಗತ್ತು (ರಿ.) ಬಂಟ್ವಾಳ ಅಂಗಸಂಸ್ಥೆ – 2-7/1, ಶ್ರೇಯಸ್ ಕಂದೂರು, ಅಂಚೆ : ಸಜೀಪಮುನ್ನೂರು – 574 231, ಬಂಟ್ವಾಳ ತಾಲೂಕು, ಫೋನ್ : 08255-280063

3. ಶ್ರೀ ಗುರುನರಸಿಂಹ ಪ್ರತಿಷ್ಠಾನ
   ನಂ. 6, 5ನೇ ಕ್ರಾಸ್, ಎನ್. ಎಸ್. ಪಾಳ್ಯ, ಬನ್ನೇರು ಘಟ್ಟ ರಸ್ತೆ, ಬೆಂಗಳೂರು –76
   ಫೋನ್ : 080 – 26688323

ಅರ್ಜಿ ನಮೂನೆಗಾಗಿ ಯಾವುದಾದರೂ ಒಂದು ಸಂಸ್ಥೆಯನ್ನು ಸ್ವವಿಳಾಸದ ಅಂಚೆ ಕವರನ್ನು ಕಳುಹಿಸಿ ಸಂಪರ್ಕಿಸಿರಿ.

(ಮೂರೂ ಸಂಸ್ಥೆಗಳಿಂದ ಏಕಕಾಲಕ್ಕೆ ವಿದ್ಯಾರ್ಥಿ ವೇತನ ದೊರೆಯುವುದಿಲ್ಲ)

Kootabandhu Bimonthly digest Regd. with the registrar of news papers for India under No. 65915 / 96 dt. 12-5-97


# ಕೆಬಿಎಲ್ ಅಪ್ನಾ ಘರ್

## ನಿಮ್ಮ ಕನಸಿನ ಮನೆ ನಿಮ್ಮದಾಗುವ ಸಮಯ



- ಗೃಹ ನಿರ್ಮಾಣ
- ನಿವೇಶನ ಖರೀದಿ + ಗೃಹ ನಿರ್ಮಾಣ
- ಪೂರ್ವನಿರ್ಮಿತವಾದ ಗೃಹ ಅಥವಾ ಫ್ಲಾಟ್ ಖರೀದಿಗೆ
- ವಾಸವಿರುವ ಗೃಹ / ಫ್ಲಾಟ್ - ನವೀಕರಣ / ದುರಸ್ತಿ / ವಿಸ್ತರಣಾ ಕಾರ್ಯ / ಪುನರ್ ನಿರ್ಮಾಣಕ್ಕೆ

ಸಿ.ಡಿ. ಖಾತೆ ತೆರೆಯಿರಿ –ನಿಯಮಿತ ಉಳಿತಾಯ ಮಾಡಿರಿ

## ನಿಮ್ಮ ಮಗುವನ್ನು ಲಕ್ಷಾಧೀಶರನ್ನಾಗಿಸಿರಿ

| ಮಾಸಿಕ ಕಂತು | ಅವಧಿ | ಪಡೆಯಿರಿ |
|---|---|---|
| ₹ 1,350 | 60 ತಿಂಗಳು | ₹ 1,02,401 |
| ₹ 1,100 | 72 ತಿಂಗಳು | ₹ 1,04,216 |
| ₹ 900 | 84 ತಿಂಗಳು | ₹ 1,04,299 |
| ₹ 750 | 96 ತಿಂಗಳು | ₹ 1,04,209 |
| ₹ 650 | 108 ತಿಂಗಳು | ₹ 1,06,657 |
| ₹ 550 | 120 ತಿಂಗಳು | ₹ 1,05,327 |

# ಕರ್ಣಾಟಕ ಬ್ಯಾಂಕ್ ಲಿ.


Published by B. Narayana Somayaji on behalf of Koota Maha Jagattu Saligrama (R.) at Bantwal
Editor: Dr. Krishnamoorthy Nitalapura. ₹. 7.50

॥ ಶ್ರೀಮದ್ ಯೋಗಾನಂದ ಗುರುನರಸಿಂಹಾಯ ನಮಃ ॥

# ಕೂಟಬಂಧು

ಅಧ್ಯಾತ್ಮಿಕ, ಸಾಂಸ್ಕೃತಿಕ, ಹಾಗೂ ಸಾಮಾಜಿಕ ಔನ್ನತ್ಯಕ್ಕೆ ಮೀಸಲಾದ ದ್ವೈಮಾಸಿಕ.

ಬ್ರಾಹ್ಮಣ ಸಮಾಜ ಬಾಂಧವರಲ್ಲಿ ಖಾಸಗಿ ಪ್ರಸಾರಕ್ಕಾಗಿ ಮಾತ್ರ.

ಸಂಪುಟ ೧೮ ಸಂಚಿಕೆ ೩ ಮೇ – ಜೂನ್ 2013

**ಪ್ರಾರ್ಥನೆ**

## ಶ್ರೀ ನರಸಿಂಹ ಸಹಸ್ರನಾಮ ಸ್ತೋತ್ರ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

**ವಿಬುಧಾಯ ವಿಭಾವಾಯ ನಮೋ ವಿಶ್ವಂಭರಾಯ ಚ ।**
**ವೀತ ರೋಗಾಯ ವಿಪ್ರಾಯ ವಿಕಟಾಂಗಧರಾಯ ಚ ॥ ೩೦ ॥**

194 **ವಿಬುಧಾಯ ನಮಃ :** ಬುಧ ಎಂದರೆ ಪಂಡಿತ. ವಿಶೇಷವಾದ ಬುಧನೇ ವಿಬುಧ. ಎಂದರೆ ಚೆನ್ನಾಗಿ ತಿಳಿದವನು. ಹಾಗೆಯೇ ಬುಧ್ಯತೇ ಇತಿ ಬುಧಃ ಎಂಬುದರಿಂದ ತಿಳಿಯಲ್ಪಡುವವನು ಬುಧ. ಆದ್ದರಿಂದ ಚೆನ್ನಾಗಿ ತಿಳಿಯಲ್ಪಡುವವನು ವಿಬುಧ. ವಿಬುಧ ಎಂದರೆ ದೇವತೆ ಎಂಬ ಅರ್ಥವೂ ಇದೆ (ತ್ರಿದಶಾ ವಿಬುಧಾಃ ಸುರಾಃ – ಅಮರಕೋಶ 1–1–6)

ಪಾರಮಾರ್ಥಿಕ ಕ್ಷೇತ್ರದಲ್ಲಿ ಮುಂದುವರಿದು ಸಾಧನೆ ಮಾಡಿ ಜೀವನ್ಮುಕ್ತರಾದವರು ಇತರರಿಗೆ ದಾರಿದೀಪದಂತಿದ್ದಾರೆ. ಉದಾ : ಸಾಧು ಸಂತರು, ಸಂನ್ಯಾಸಿಗಳು, ಜೀವನ್ಮುಕ್ತರು ಇತ್ಯಾದಿ. ಇಂತಹ ಸತ್ಪುರುಷರ ಆವಶ್ಯಕತೆ ಪ್ರಪಂಚಕ್ಕೆ ಇದೆ. ವಿಬುಧನಿಗೆ ನಮಸ್ಕಾರ.

195 **ವಿಭಾವಾಯ ನಮಃ :** ವಿಶೇಷವಾಗಿ ಉಂಟುಮಾಡುವಂಥದ್ದು ವಿಭಾವ (ವಿಶೇಷೇಣ ಭಾವಯತಿ ಅಥವಾ ಭಾವ್ಯತೇ). ಭಾವ ಎಂದರೆ ಉತ್ಪತ್ತಿ, ಹುಟ್ಟು. ಅದಿಲ್ಲದವನು ವಿಭಾವ (ವಿಗತೋಭಾವಃ ಯಸ್ಮಾತ್)

'ಭಾವ' ಎಂಬುದು ಕಾವ್ಯ, ನಾಟಕಗಳಲ್ಲಿ ಮನೋವಿಕಾರ. ('ವಿಕಾರೋ ಮಾನಸೋ ಭಾವಃ' – ಅಮರಕೋಶ 1–224). ಸುಖ, ದುಃಖಾದಿ ಮನಸ್ಸಿನ ಸ್ಥಿತಿಗಳಿಂದ ಪಾತ್ರಗಳ ಪರಿಸ್ಥಿತಿಗಳನ್ನು ಊಹಿಸಿಕೊಳ್ಳುವುದು. (ಸುಖ ದುಃಖಾದಿಕೈರ್ಭಾವೈಃ ಭಾವಃ ತದ್ಭಾವ ಭಾವನಮ್–ದಶರೂಪಕಂ 4–5). ಭಾವವು ಸ್ಥಾಯಿ ಆದಾಗ ರಸ ಎನಿಸುತ್ತದೆ. (ಸ್ಥಾಯೀ ಭಾವೋ ರಸಃ ಸ್ಮೃತಃ – ದಶರೂಪಕ 4–1) ವಿಜ್ಞಾತವಾಗುವುದು ವಿಭಾವ. ಇದು ರಸಕ್ಕೆ ಪೋಷಕ. (ಜ್ಞಾಯಮಾನತಯಾ ತತ್ರ ವಿಭಾವೋ ಭಾವಪೋಷಕೃತ್–ದಶರೂಪಕ 4–2). ವಿಭಾವವು ಆಲಂಬನ ಮತ್ತು ಉದ್ದೀಪನ ಎಂದು ಎರಡು ವಿಧ. ಶೃಂಗಾರ ರಸಕ್ಕೆ ರತಿ ಎಂಬುದು ಭಾವ, ಕಾಂತೆ ಆಲಂಬನ ವಿಭಾವ ಮತ್ತು ಉದ್ಯಾನ ಉದ್ದೀಪನ ವಿಭಾವ. ಇಂತಹ ವಿಭಾವ ಸ್ವರೂಪನಿಗೆ ನಮಸ್ಕಾರ.

## ಕೂಟಮಹಾಜಗತ್ತು ಸಾಲಿಗ್ರಾಮ (ರಿ.) ಇದರ ಪದಾಧಿಕಾರಿಗಳು

**ಅಧ್ಯಕ್ಷರು :**
ಶ್ರೀ ಪಿ. ವೆಂಕಟ್ರಾವ್
ಮೊ : 09845186732
ಈಮೈಲ್ : pvr9555@yahoo.com

**ಉಪಾಧ್ಯಕ್ಷರು :**
ಶ್ರೀ ಪಿ. ಶೇಷಗಿರಿ ರಾವ್
ಮೊ : 9342658854
ಈಮೈಲ್ : ksm221122@yahoo.com

**ಪ್ರಧಾನ ಕಾರ್ಯದರ್ಶಿ**
ಜಿ. ರಾಮಕೃಷ್ಣ ಐತಾಳ
ದೂರವಾಣಿ : 0820-2564276
9343573922
Email : rg-aithal@rediffmail.com

**ಉಪಾಧ್ಯಕ್ಷರು :**
ಕೆ. ಶ್ರೀಧರ ಮಯ್ಯ
ಬೆಂಗಳೂರು
ಮೊ : 9845130456

**ಕೋಶಾಧಿಕಾರಿ :**
ಕೆ. ತಾರಾನಾಥ ಹೊಳ್ಳ
ದೂ : 0824-2494479
ಮೊ : 09449034479

**ಜೊತೆ ಕಾರ್ಯದರ್ಶಿ**
ಎ. ರಮೇಶ ಮಯ್ಯ, ಬೆಂಗಳೂರು
ಮೊ : 9448949951
ಕೆ. ಸುಬ್ರಹ್ಮಣ್ಯ ಕಾರಂತ, ಉಡುಪಿ
ಮೊ : 9342424439

## ಕೂಟಬಂಧು ಟ್ರಸ್ಟ್ (ರಿ) ಇದರ ಪದಾಧಿಕಾರಿಗಳು ಮತ್ತು ಸದಸ್ಯರು

**ಅಧ್ಯಕ್ಷರು :**
ಶ್ರೀ ಪಿ. ವೆಂಕಟ್ರಾವ್
ಮೊ : 09845186732
ಈಮೈಲ್ : pvr9555@yahoo.com

**ಕಾರ್ಯದರ್ಶಿ**
ಜಿ. ರಾಮಕೃಷ್ಣ ಐತಾಳ

**ಕಾರ್ಯನಿರ್ವಹಣಾಧಿಕಾರಿ :**
ಬಿ. ನಾರಾಯಣ ಸೋಮಯಾಜಿ
ಮೊ : 9448858868

**ಸಂಪಾದಕ :**
ಡಾ। ಕೃಷ್ಣಮೂರ್ತಿ ನಿಟಿಲಾಪುರ
ಮೊ : 9480228495

**ಕೋಶಾಧಿಕಾರಿ :**
ಕೆ. ತಾರಾನಾಥ ಹೊಳ್ಳ
ದೂ : 0824-2494479
ಮೊ : 09449034479

**ಕಾರ್ಯಕಾರಿ ಸದಸ್ಯರು :**
ಡಾ। ಕೆ. ಪ್ರಭಾಕರ ಹೊಳ್ಳ
ಮೊ : 0-9495895854

**: ಸದಸ್ಯರು :**

ಶ್ರೀ ಪಿ. ಎನ್. ಶ್ರೀನಿವಾಸ ಹೆಬ್ಬಾರ್
ಬೆಂಗಳೂರು
ಮೊ : 09945421106

ಶ್ರೀ ಶಂಕರನಾರಾಯಣ ರಾವ್
ಬಂಟ್ವಾಳ ತಾಲೂಕು
ಮೊ : 09449081024

**ನಾಮ ನಿರ್ದೇಶಿತರು :**
ಶ್ರೀ ಚಂದ್ರಶೇಖರ ಕಾರಂತ
ಬೆಂಗಳೂರು
ದೂ : 080-23439750
ಮೊ : 09448686862

ಶ್ರೀ ಬಿ. ವೆಂಕಟರಮಣ ರಾವ್
ಬೆಳ್ತಂಗಡಿ ತಾಲೂಕು
ಮೊ : 094488890571
09481381438

ಶ್ರೀ ಶಿರಿಯ ಸುಬ್ರಾಯ ಕಾರಂತ
ಕಾಸರಗೋಡು
ದೂ : 04998231945
ಮೊ : 09497230766

## ಶ್ರೀ ಗುರುನರಸಿಂಹ ಬಿಲಿಯನ್ ಫೌಂಡೇಶನ್ ಟ್ರಸ್ಟ್(ರಿ)ಇದರ ಪದಾಧಿಕಾರಿಗಳು

**ಅಧ್ಯಕ್ಷರು :**
ಎಚ್. ಪರಮೇಶ್ವರ ಶಾಸ್ತ್ರಿ
ದೂ : 080-23492916
ಮೊ : 9980194952

**ಕಾರ್ಯದರ್ಶಿ :**
ಕೆ. ವಾಸುದೇವ ಮಧ್ಯಸ್ಥ
ದೂ : 080-23600926

**ಸಹಕಾರ್ಯದರ್ಶಿ :**
ಕೆ. ಶ್ರೀನಿವಾಸ ಉರಾಳ
ಮೊ : 9448483768

## ಶ್ರೀ ಗುರುನರಸಿಂಹ ದೇವಸ್ಥಾನದ ಪದಾಧಿಕಾರಿಗಳು ಹಾಗೂ ಸದಸ್ಯರು

**ಅಧ್ಯಕ್ಷರು :**
ಶ್ರೀ ಎ. ಜಗದೀಶ ಕಾರಂತ
ಮೊ : 9972095779

**ಉಪಾಧ್ಯಕ್ಷರು :**
ಶ್ರೀ ಭಾಸ್ಕರ ನಾವಡ

**ಕಾರ್ಯದರ್ಶಿ :**
ಶ್ರೀ ಆನಂದರಾಮ ಮಧ್ಯಸ್ಥ

**ಕೋಶಾಧಿಕಾರಿ :**
ಶ್ರೀ ಸದಾರಾಮ ಹೇರ್ಳೆ ವೈ.

**ಸದಸ್ಯರು :**
ಸರ್ವಶ್ರೀ ಧರ್ಮರಾಯ ಹಂದೆ ಎಚ್., ನಾಗರಾಜ ಬಿ., ಯಜ್ಞನಾರಾಯಣ ಹೇರ್ಳೆ ಕೆ., ಕೃಷ್ಣ ಹೊಳ್ಳ ಎನ್., ವೇ। ಮೂ। ಅನಂತಪದ್ಮನಾಭ ಐತಾಳ

196 **ವಿಶ್ವಂಭರಾಯ ನಮಃ :** ವಿಶ್ವಂಭರ ಎಂದರೆ ಜಗತ್ತನ್ನು ಧರಿಸಿದವನು (ವಿಶ್ವಂಬಿಭರ್ತಿ) ಅಂತಹ ವಿಶ್ವಂಭರನಿಗೆ ನಮಸ್ಕಾರ.

197 **ವೀತರೋಗಾಯ ನಮಃ :** ವೀತರೋಗ ಎಂದರೆ ರೋಗಗಳಿಂದ ಮುಕ್ತನಾದವನು ಅಂಥವನಿಗೆ ನಮಸ್ಕಾರ.

198 **ವಿಪ್ರಾಯ ನಮಃ :** ವಿಪ್ರ ಎಂದರೆ ವೇದಾಧ್ಯಯನ ಮಾಡಿದ ದ್ವಿಜ –

**ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾದ್ ದ್ವಿಜ ಉಚ್ಯತೇ ।**
**ವೇದಾಧ್ಯಯನತೋ ವಿಪ್ರಃ ಬ್ರಹ್ಮಜ್ಞಾನೇನ ಬ್ರಾಹ್ಮಣಃ ॥**

ಹುಟ್ಟಿನಿಂದ ಶೂದ್ರನಾಗಿರುತ್ತಾನೆ. ಉಪನಯನಾದಿ ಸಂಸ್ಕಾರದಿಂದ 'ದ್ವಿಜ' ಎನಿಸುತ್ತಾನೆ. ದ್ವಿಜನಾದವನು ವೇದಾಧ್ಯಯನ ಮಾಡಿದಾಗ ವಿಪ್ರ ಎಂದು ಕರೆಯಲ್ಪಡುತ್ತಾನೆ. ಬ್ರಹ್ಮ ಜ್ಞಾನದಿಂದ ಬ್ರಾಹ್ಮಣನಾಗುತ್ತಾನೆ. ಹೀಗೆ ದ್ವಿಜ – ವಿಪ್ರ – ಬ್ರಾಹ್ಮಣ ಎಂಬ ಶ್ರೇಣಿಯಲ್ಲಿ ವಿಪ್ರನು ಮಧ್ಯಮನಾಗುತ್ತಾನೆ. ಅಂತಹ ವಿಪ್ರಸ್ವರೂಪನಿಗೆ ನಮಸ್ಕಾರ.

199 **ವಿಕಟಾಂಗಧರಾಯ ನಮಃ :** ವಿಕಟ ಎಂದರೆ ಅಸಹಜ. ಅಂಗ ಎಂದರೆ ಶರೀರ. ವಿಕಟಾಂಗಧರ ಎಂದರೆ ಅಸಹಜವಾದ ಶರೀರವನ್ನು ಧರಿಸಿದವನು. ಮಾನವ ದೇಹಕ್ಕೆ ಮಾನವ ಮುಖ ಎಂಬುದು ಸಹಜ. ಹಾಗೆಯೇ ಸಿಂಹದ ಮುಖಕ್ಕೆ ಸಿಂಹದ ದೇಹ ಎಂಬುದು ಸಹಜ. ಆದರೆ, ಮಾನವ ದೇಹಕ್ಕೆ ಸಿಂಹದ ಮುಖ ಎಂಬುದು ಸಹಜವಲ್ಲ. ವಿಕಟ.

ಧಾರಾ ನಗರದ ಭೋಜರಾಜ ತನ್ನ ಚಂಪೂ ರಾಮಾಯಣದ ಬಾಲಕಾಂಡದಲ್ಲಿ ನರಸಿಂಹಾವರತಾರವನ್ನು ಹೀಗೆ ವರ್ಣಿಸಿದ್ದಾನೆ –

**ಪ್ರಹ್ಲಾದಸ್ಯ ವ್ಯಸನಮಮಿತಂ ದೈತ್ಯವರ್ಗಸ್ಯ ದಂಭಂ**
**ಸ್ತಂಭಂ ವಕ್ಷಃಸ್ಥಲಮಪಿ ರಿಪೋರ್ಯೌಗಪದ್ಯೇನ ಭೇತ್ತುಮ್ ।**
**ಬದ್ಧಶ್ರದ್ಧಂ ಪುರುಷವಪುಷಾ ಮಿಶ್ರಿತೇ ವಿಶ್ವದೃಷ್ಟೇ**
**ದಂಷ್ಟ್ರಾರೋಚಿರ್ವಿಶದ ಭುವನೇ ರಂಹಸಾ ಸಿಂಹವೇಷೇ ॥ (ಚ. ರಾ. 1-15)**

ಭಕ್ತಾಗ್ರೇಸರನಾದ ಪ್ರಹ್ಲಾದನ ಅಪಾರವಾದ ಕಷ್ಟವನ್ನು, ದೈತ್ಯವರ್ಗದ ಆಡಂಬರವನ್ನು, ಸಭಾ ಸ್ಥಾನದ ಕಂಬವನ್ನು ಹಾಗೂ ಶತ್ರುವಾದ ಹಿರಣ್ಯಕಶಿಪುವಿನ ಎದೆಯನ್ನು ಒಮ್ಮೆಗೇ ಮುರಿದಿಕ್ಕಲು ಆಶ್ಚರ್ಯಕರವಾದ ನರಶರೀರದ ಸಿಂಹವೇಷದಲ್ಲಿ ಕೋರೆಹಲ್ಲುಗಳ ಕಾಂತಿಯಿಂದ ಲೋಕವನ್ನು ಬೆಳಗುತ್ತ ಪಕ್ಕನೆ ಪ್ರಕಟವಾದನು. ಇಂತಹ ವಿಚಿತ್ರ ದೇಹವನ್ನು ಧರಿಸಿದವನಿಗೆ ನಮಸ್ಕಾರ.

**ವಿಪುಲಾಯ ವಿನೀತಾಯ ನಮಸ್ತೇ ವಿಶ್ವಯೋನಯೇ ।**
**ದಿಗಂಬರಾಯ ದೀಪ್ತಾಯ ವಿಶ್ರುತಾಯ ವಿಯೋನಯೇ ॥ ೩೧ ॥**

200 **ವಿಪುಲಾಯ ನಮಃ :** ವಿಪುಲ ಎಂದರೆ ಸಮೃದ್ಧ. ಅಂಥವನಿಗೆ ನಮಸ್ಕಾರ.

201 **ವಿನೀತಾಯ ನಮಃ :** ವಿನೀತ ಎಂದರೆ ನಮ್ರನಾದವನು ಅಥವಾ ವಿಶೇಷವಾದ ನೀತಿಯುಳ್ಳವನು. ಅವನಿಗೆ ನಮಸ್ಕಾರ.

202 **ವಿಶ್ವಯೋನಯೇ ನಮಃ :** ವಿಶ್ವಯೋನಿ ಎಂದರೆ ಪ್ರಪಂಚದ ಸೃಷ್ಟಿಗೆ ಮೂಲ ಕಾರಣನಾದವ. ಅವನಿಗೆ ನಮಸ್ಕಾರ.

203 **ದಿಗಂಬರಾಯ ನಮಃ :** ಅಂಬರ ಎಂದರೆ ವಸ್ತ್ರ. ದಿಗಂಬರ ಎಂದರೆ ದಿಕ್ಕುಗಳನ್ನೇ ವಸ್ತ್ರವನ್ನಾಗಿ ಧರಿಸಿದವನು. ಬೇರೆ ಬಟ್ಟೆಯನ್ನು ಉಡದವನು. ನಗ್ನ ಎಂದರ್ಥ. ಜೀವಾತ್ಮನು ತೀವ್ರವಾದ ಆಧ್ಯಾತ್ಮಿಕ ಸಾಧನೆಯನ್ನು ಮಾಡಿದಾಗ, ಸ್ಥೂಲ ಶರೀರದ ಎಲ್ಲಾ ಸಂಬಂಧಗಳಿಂದ ಹಾಗೂ ಸೂಕ್ಷ್ಮ ದೇಹದ ಎಲ್ಲ ಬಂಧನಗಳಿಂದ ಬಿಡುಗಡೆ ಹೊಂದುತ್ತಾನೆ. ಹೀಗೆ ಎಲ್ಲ ಸಂಪರ್ಕಗಳಿಂದ ಮುಕ್ತನಾಗಿ ಆತ್ಮನು ಏಕಾಂಗಿಯಾಗಿರುವುದೇ ದಿಗಂಬರ ಸ್ಥಿತಿ. ಪರಮಾತ್ಮನೂ ಇಂತಹ ದಿಗಂಬರನೇ. ಅವನಿಗೆ ನಮಸ್ಕಾರ.

204 **ದೀಪ್ತಾಯ ನಮಃ :** ದೀಪ್ತ ಎಂದರೆ ಹೊಳೆಯುವವನು, ಪ್ರಕಾಶಮಾನನಾದವನು. ಪರಮಾತ್ಮನು ತನ್ನ ತೇಜಸ್ಸಿನಿಂದ ಹೊಳೆಯುತ್ತಿರುತ್ತಾನೆ. ಗುರುವು ಜ್ಞಾನದಿಂದ ದೀಪ್ತನಾಗಿರುತ್ತಾನೆ. ಅವನಿಂದ ಜ್ಞಾನ ಪಡೆದ ಶಿಷ್ಯನು ಕೆಂಡದ ಸಂಪರ್ಕಕ್ಕೆ ಬಂದ ಕಬ್ಬಿಣದ ತುಂಡಿನಂತೆ ತಾನೂ ದೀಪ್ತನಾಗುತ್ತಾನೆ. ಭಕ್ತನು ಭಗವಂತನ ಸಾನ್ನಿಧ್ಯದಲ್ಲಿ ಸಾರೂಪ್ಯವನ್ನು ಹೊಂದುವುದೆಂದರೆ ತಾನೂ ದೀಪ್ತವಾಗುವುದು. ಅಂತಹ ದೀಪ್ತನಿಗೆ ನಮಸ್ಕಾರ.

205 **ವಿಶ್ರುತಾಯ ನಮಃ :** ವಿಶ್ರುತ ಎಂದರೆ ಪ್ರಸಿದ್ಧನಾದವನು. ನರಸಿಂಹನು ತ್ರಿಲೋಕಗಳಲ್ಲೂ ಪ್ರಸಿದ್ಧ. ಅವನಿಗೆ ನಮಸ್ಕಾರ.

206 **ವಿಯೋನಯೇ ನಮಃ :** ಯೋನಿ ಎಂದರೆ ಹುಟ್ಟಿಗೆ ಕಾರಣ. ವಿಯೋನಿ ಎಂದರೆ ತನ್ನ ಹುಟ್ಟಿಗೆ ಬೇರೆ ಕಾರಣ ಇಲ್ಲದವನು. ಪರಮಾತ್ಮನು ಸ್ವಯಂಭು. ಇದನ್ನು ಹೀಗೆ ವಿವರಿಸಬಹುದು. ಇತರ ವಸ್ತುಗಳನ್ನು ಕಾಣಲು ದೀಪದ ಬೆಳಕು ಬೇಕು. ಆ ದೀಪವನ್ನು ಕಾಣಲು ಇನ್ನೊಂದು ದೀಪದ ಬೆಳಕು ಬೇಕಾಗಿಲ್ಲ. ದೀಪವು ಸ್ವಯಂ ವ್ಯಕ್ತ. ಅದೇ ರೀತಿ ಪರಮಾತ್ಮನು ಸ್ವಯಂ ಜಾತ. ಅವನ ಹುಟ್ಟಿಗೆ ಬೇರೆ ಕಾರಣ ಇಲ್ಲ. ಆದ್ದರಿಂದ ಅವನು ವಿಯೋನಿ. ಅಂಥವನಿಗೆ ನಮಸ್ಕಾರ.

**ವಿಹ್ವಲಾಯ ವಿವಾಹಾಯ ನಮೋ ವ್ಯಾಹೃತಯೇ ನಮಃ ।**
**ವಿಲಾಸಾಯ ವಿಕಲ್ಪಾಯ ಮಹಾಕಲ್ಪಾಯ ತೇ ನಮಃ ।। ೩೨ ।।**

207 **ವಿಹ್ವಲಾಯ ನಮಃ :** ವಿಹ್ವಲ ಎಂದರೆ ವ್ಯಾಕುಲಗೊಂಡವ, ದುಃಖಿತ ಎಂದರ್ಥ. ಇದೇನು? ದೇವರಿಗೂ ವ್ಯಾಕುಲತೆಯೇ ದುಃಖವೇ ? ಎಂದರೆ ಹೌದು. ಕೆಲವೊಮ್ಮೆ ಭಕ್ತರ ಕಷ್ಟ ಪರಿಸ್ಥಿತಿಯನ್ನು ನೋಡಿ ದೇವರೂ ಚಿಂತಿತನಾಗುತ್ತಾನಂತೆ –

**ಕ್ವೇದಂ ವಪುಃ ಕ್ವ ಚ ವಯಃ ಸುಕುಮಾರಮೇತತ್**
**ಕ್ವೈತಾಃ ಪ್ರಮತ್ತಕೃತ ದಾರುಣ ಯಾತನಾಸ್ತೆ ।**
**ಆಲೋಚಿತಂ ವಿಷಯಜಾತಮಭೂತಪೂರ್ವಂ**
**ಕ್ಷಂತವ್ಯಂ ಅಂಗ ! ಯದಿ ಮೇ ಸಮಯೇ ವಿಳಂಬಃ ।। (–ಲೀಲಾಶುಕಃ)**

ಪ್ರಹ್ಲಾದ, ನಿನ್ನ ಎಳೆಯ ವಯಸ್ಸೆಲ್ಲಿ, ಅದಕ್ಕೆ ಅನುಗುಣವಾದ ಮೃದು ಶರೀರವೆಲ್ಲಿ, ದುಃಷ್ಟನಾದ ನಿನ್ನ ತಂದೆ ನಿನಗೆ ಕೊಟ್ಟ ಕ್ರೂರ ಯಾತನೆಗಳೆಲ್ಲಿ ? ಅಭೂತಪೂರ್ವವಾದ ಈ ವಿಷಯಗಳನ್ನೆಲ್ಲ ಚಿಂತಿಸಿಕೊಂಡಿದ್ದೆ. ಹಾಗಾಗಿ ನಾನು ಬರುವುದು ಸ್ವಲ್ಪ ತಡವಾಗಿದ್ದರೆ ಕ್ಷಮಿಸು ! – ಇದು ನರಸಿಂಹನು ಪ್ರಹ್ಲಾದನನ್ನು ಸಾಂತ್ವನಗೊಳಿಸುತ್ತ ಆಡಿದ ಮಾತುಗಳು. ಹೀಗೆ ದೇವರು ಕೂಡ ಚಿಂತಿತನಾಗುವುದು ಇದೆ. ಅಂತಹ ವಿಹ್ವಲನಿಗೆ ನಮಸ್ಕಾರ.

208 **ವಿವಾಹಾಯ ನಮಃ :** ವಿಶೇಷವಾಗಿ ಜಗತ್ತನ್ನು ಉದರದಲ್ಲಿ ಹೊತ್ತವನು (ವಿಶೇಷೇಣ ವಹತೀತಿ ವಿವಾಹಃ) ಅಥವಾ ವಿಶೇಷವಾಗಿ ಭಕ್ತರನ್ನು ಸಂಪಾದಿಸುವವನು (ವಹ = ಪ್ರಾಪಣೇ). (ವರನು ವಧುವಿನ ಮನೆಗೆ ಬಂದು ಮದುವೆ ಮಾಡಿಕೊಂಡು ವಧುವನ್ನು ಹೊತ್ತೊಯ್ಯುವುದರಿಂದಲೇ ಮದುವೆಗೆ 'ವಿವಾಹ' ಎಂಬ ಶಬ್ದ ಬಳಕೆಗೆ ಬಂದಿದೆ) ಅಂತಹ ವಿವಾಹನಿಗೆ ನಮಸ್ಕಾರ.

209 **ವ್ಯಾಹೃತಯೇ ನಮಃ :** ವಾಹೃತಿ ಎಂದರೆ ಉಚ್ಚಾರ ಅಥವಾ ಉಚ್ಚರಿಸಿದ್ದು ಎಂದರ್ಥ. ವಿವಿಧ ಮಂತ್ರಗಳ ಜೊತೆಯಲ್ಲಿ 'ಓಂ, ಭೂಃ, ಭುವಃ ಸ್ವಃ' ಮೊದಲಾದವುಗಳನ್ನು ಉಚ್ಚರಿಸಲಾಗುತ್ತದೆ. ಆದ್ದರಿಂದ ಅವೆಲ್ಲ ವ್ಯಾಹೃತಿಗಳು. ಸರ್ವ ಮಂತ್ರಸ್ವರೂಪನಿಗೆ ನಮಸ್ಕಾರ.

210 **ವಿಲಾಸಾಯ ನಮಃ :** ವಿಲಾಸ ಎಂದರೆ ಕ್ರೀಡೆ ಅಥವಾ ವಿಶೇಷವಾದ ಹೊಳಪು. ಅದನ್ನು ಹೊಂದಿದವನೂ ವಿಲಾಸನೇ. ವಿವಿಧ ಅವತಾರಗಳು ಶ್ರೀ ಮನ್ನಾರಾಯಣನ ಲೀಲಾ ವಿಲಾಸಗಳು. ಅಲ್ಲದೆ ಭಗವಂತನು ತನ್ನ ಭಕ್ತರೊಂದಿಗೆ ವಿಲಾಸದಲ್ಲಿ ತೊಡಗಿರುತ್ತಾನೆ.

ನರಸಿಂಹನು ಹಿರಣ್ಯಕಶಿಪುವನ್ನು ಸಂಹರಿಸಿದ ಮೇಲೆ ಶಾಂತನಾಗಿ ತುಂಬ ಸಂತೋಷಪಟ್ಟ. ಅದಕ್ಕೆ ಕಾರಣಗಳು - 1) ಪರಮಭಕ್ತನಾದ ಪ್ರಹ್ಲಾದನನ್ನು ಅವನ ತಂದೆಯ ವಿಚಿತ್ರ ಹಿಂಸೆಗಳಿಂದ ರಕ್ಷಿಸಿದ್ದು. 2) ಲೋಕ ಕಂಟಕನಾದ ಹಿರಣ್ಯಕಶಿಪುವನ್ನು ಸಹರಿಸಿದ್ದು. 3) ಬ್ರಹ್ಮನ ವಿಚಿತ್ರ ವರವನ್ನು ಉಲ್ಲಂಘಿಸದೆ, ಅದಕ್ಕೆ ಅನುಗುಣವಾದ ವಿಚಿತ್ರ ರೂಪವನ್ನು ತಾಳಿ ದುಷ್ಟನನ್ನು ಕೊಂದದ್ದು. 4) ವೈಕುಂಠದ ದ್ವಾರಪಾಲಕರಾದ ಜಯ-ವಿಜಯರನ್ನು ಮುನಿಗಳ ಶಾಪದಿಂದ ಪಡೆದ ದುಷ್ಟರೂಪದಿಂದ ಬಿಡುಗಡೆ ಮಾಡಿದ್ದು ಮತ್ತು 5) ಭಗವಂತ ಸರ್ವವ್ಯಾಪಿ ಹಾಗೂ ಭಕ್ತರ ಕಷ್ಟಪರಿಹಾರಕ್ಕೆ ಓಡಿ ಬರುತ್ತಾನೆ ಎಂಬುದನ್ನು ಲೋಕಕ್ಕೆ ಸ್ಪಷ್ಟ ಪಡಿಸಿದ್ದು. ಅಂತಹ ವಿಲಾಸನಿಗೆ ನಮಸ್ಕಾರ.

211 **ವಿಕಲ್ಪಾಯ ನಮಃ :** ವಿಕಲ್ಪ ಎಂದರೆ ಸಂಶಯ. ನರಸಿಂಹನ ರೂಪವೇ ನರನೋ ಸಿಂಹವೋ ಎಂಬುದಾಗಿ ಸಂಶಯಕ್ಕೆ ಆಸ್ಪದವಾಗಿದೆ. ಹಗಲೋ ರಾತ್ರಿಯೋ, ಒಳಗೋ ಹೊರಗೋ, ಮೇಲೋ ಕೆಳಗೋ, ಆಯುಧ ಉಂಟೋ ಇಲ್ಲವೋ - ಎಂಬೆಲ್ಲ ವಿಕಲ್ಪಗಳಿಗೆ ಇಂಬುಕೊಡುವಂತೆ ನರಸಿಂಹನು ಹಿರಣ್ಯಕಶಿಪುವನ್ನು ಕೊಂದ.

ವಿಕಲ್ಪ ಎಂದರೆ ವಿ = ವಿಚಿತ್ರವಾದ, ಕಲ್ಪ ಎಂದರೆ ಆಯ್ಕೆ. ವಿವಿಧ ಆಯ್ಕೆಗಳಿರುವಾಗ ಭಗವಂತನು ಬ್ರಹ್ಮನ ವರಕ್ಕೆ ಅನುಗುಣವಾಗಿಯೇ ರೂಪ, ಸಮಯ, ಸ್ಥಳ, ಆಯುಧಾದಿಗಳನ್ನು ಆರಿಸಿಕೊಂಡಿದ್ದಾನೆ. ನರ-ಸಿಂಹ ಸ್ವರೂಪದಂತೆಯೇ ಈ ಅವತಾರದ ಕಾರ್ಯವೆಲ್ಲ ವಿಚಿತ್ರವೇ ಆಗಿದೆ.

ವಿಕಲ್ಪ ಎಂಬುದಕ್ಕೆ ವಿಶೇಷ ಕಲ್ಪ ಎಂಬ ಅರ್ಥವೂ ಇದೆ. ಭಗವಂತನ ಕಾರ್ಯ ಎಂದಾದ ಮೇಲೆ ರೂಪಾದಿಗಳ ಆಯ್ಕೆ ಎಲ್ಲ ಸಾಮಾನ್ಯ ಅಥವಾ ಕಳಪೆ ಆಗಲು ಸಾಧ್ಯವೆ ? ಎಲ್ಲವೂ ವಿಶೇಷ ಎನ್ನಲೇಬೇಕು. ಅಂತಹ ವಿಕಲ್ಪನಿಗೆ ನಮಸ್ಕಾರ.

212 **ಮಹಾಕಲ್ಪಾಯ ನಮಃ :** ಕಲ್ಪ ಎಂದರೆ ಪ್ರಳಯ. ಮಹಾಕಲ್ಪ ಎಂದರೆ ಮಹಾಪ್ರಳಯ. ನರಸಿಂಹ ಮಹಾಕಲ್ಪ ಸ್ವರೂಪ. ಕಲ್ಪ ಎಂದರೆ ಬ್ರಹ್ಮನ ಒಂದು ಹಗಲು. ಅದರಲ್ಲಿ ಕೃತ,

ತ್ರೇತಾ, ದ್ವಾಪರ, ಕಲಿ ಎಂಬ ಚತುರ್ಯುಗಗಳು ಒಂದು ಸಾವಿರ ಸಲ ಆವರ್ತನೆ ಹೊಂದುತ್ತವೆ. ಕಲ್ಪ ಎಂದರೆ ಮನುಷ್ಯ ಕಲ್ಪಿಸಿದ್ದನ್ನೆಲ್ಲ ಕೊಡುವ ಕಲ್ಪತರು. ನರಸಿಂಹನಂತೂ ಮಹಾ ಕಲ್ಪನಾಗಿದ್ದಾನೆ. ಅವನಿಗೆ ನಮಸ್ಕಾರ.

**ಬಹುಕಲ್ಪಾಯ ಕಲ್ಪಾಯ ಕಲ್ಪಾತೀತಾಯ ಕಲ್ಪಿನೇ ।**
**ಕಲ್ಪಾನಾಂ ಮುಖರೂಪಾಯ ಹ್ಯನುಕಲ್ಪಾದಯೇ ನಮಃ ॥ ೩೩ ॥**

213 **ಬಹುಕಲ್ಪಾಯ ನಮಃ :** ಅನೇಕ ಕಲ್ಪಗಳುಳ್ಳವನಿಗೆ ನಮಸ್ಕಾರ.

214 **ಕಲ್ಪಾಯ ನಮಃ :** ಕಲ್ಪ ಎಂದರೆ ಬ್ರಹ್ಮನ ಒಂದು ಹಗಲು. ಒಂದು ಸಾವಿರ ಚತುರ್ಯುಗಗಳಷ್ಟು ದೀರ್ಘವಾದ ಕಾಲ. ಅಷ್ಟೇ ಪ್ರಮಾಣವುಳ್ಳದ್ದು ಅವನ ರಾತ್ರಿ. ಅಥವಾ ಕಲ್ಪನೆಯುಳ್ಳವ ಕಲ್ಪ. ಭಗವಂತನ ಕಲ್ಪನೆ ಅಗಾಧ. ಬ್ರಹ್ಮನ ವರಕ್ಕೆ ವಿರೋಧವಾಗದಂತೆ ನರಸಿಂಹ ರೂಪದ ಒಂದು ಅವತಾರವನ್ನೇ ತಾಳಬೇಕಾದರೆ ಅವನ ಕಲ್ಪನೆ ಎಂತಹದಿರಬೇಡ ? ಮಾನವ ಕಲ್ಪನೆಗೆ ನಿಲುಕದ ಕಲ್ಪನೆ ಅವನದು. ಅಂತಹ ಕಲ್ಪರೂಪನಿಗೆ ನಮಸ್ಕಾರ.

215 **ಕಲ್ಪಾತೀತಾಯ ನಮಃ :** ಕಲ್ಪ ಎಂದರೆ ಬ್ರಹ್ಮನ ಹಗಲು. ಒಂದು ಸಾವಿರ ಚತುರ್ಯುಗದಷ್ಟು ದೀರ್ಘ. ಅಷ್ಟೇ ದೀರ್ಘವಾದ ರಾತ್ರಿ. ಇದು ಬ್ರಹ್ಮನ ಒಂದು ದಿವಸ. ಇಂತಹ 360 ದಿವಸಗಳಿಗೆ ಬ್ರಹ್ಮನ ಒಂದು ವರ್ಷ. ಅಂತಹ ನೂರು ವರ್ಷ ಬ್ರಹ್ಮನ ಆಯುಷ್ಯ. ಇದರಿಂದ ಭಗವಂತನು ಕಲ್ಪಾತೀತ ಎಂದರೆ ಕಲ್ಪವನ್ನು ದಾಟಿದವನು ಅಥವಾ ಅನೇಕ ಕಲ್ಪಗಳುಳ್ಳವನು ಎಂಬುದು ಸ್ಪಷ್ಟ. ಕಲ್ಪಾತೀತ ಎಂಬುದರಿಂದ ಪರಮಾತ್ಮನು ಮಾನವ ಕಲ್ಪನೆಯನ್ನು ಮೀರಿದವನು ಎಂದೂ ಅರ್ಥವಾಗುತ್ತದೆ. ಅಂತಹ ಕಲ್ಪಾತೀತನಿಗೆ ನಮಸ್ಕಾರ.

216 **ಕಲ್ಪಿನೇ ನಮಃ :** ಕಲ್ಪವುಳ್ಳವನು ಅಥವಾ ಅನೇಕ ಕಲ್ಪಗಳನ್ನು ಹೊಂದಿದವನು ಕಲ್ಪಿ. 2x360x100 ಕಲ್ಪಗಳಷ್ಟು ಆಯುಷ್ಯವುಳ್ಳ ಬ್ರಹ್ಮನನ್ನು ನೇಮಕ ಮಾಡುವ ಭಗವಂತನು ಎಷ್ಟು ಕಲ್ಪಗಳನ್ನು ಹೊಂದಿರಬೇಡ ? ಕಲ್ಪಾತೀತನಾಗಿ ಬಹುಕಲ್ಪಗಳನ್ನು ಹೊಂದಿದ ಅವನು ಈ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳನ್ನು ಏಕೆ ಮಾಡುತ್ತಾನೆ? ಇದು ಮಾನವನ ಊಹೆಯನ್ನು ಮೀರಿದ ಪ್ರಶ್ನೆ. ಎಲ್ಲವೂ ಲೀಲೆ ! ಭಗವಂತನ ಲೀಲೆ ! ಎಂಬುದೇ ಇದಕ್ಕೆ ಉತ್ತರ. ನಮ್ಮ ಕಲ್ಪನೆಯನ್ನು ಮೀರಿದ ಲೀಲಾವಿನೋದಿಯಾದ ಪರಮಾತ್ಮನಿಗೂ ಒಂದು ಕಲ್ಪನೆ ಇರಲೇಬೇಕಲ್ಲ ? ಅಂತಹ ವಿಶಿಷ್ಟ ಕಲ್ಪನೆಯುಳ್ಳವನಿಗೆ ನಮಸ್ಕಾರ.

217 **ಕಲ್ಪಾನಾಂ ಮುಖರೂಪಾಯ ನಮಃ :** ಮುಖ ಎಂದರೆ ಆರಂಭ. ಎಲ್ಲ ಕಲ್ಪಗಳೂ ಒಂದು ಸಾವಿರ ಚತುರ್ಯಗಗಳನ್ನು ಒಳಗೊಂಡಿರುವುದರಿಂದ ಕಲ್ಪಗಳ ಆರಂಭ ಎಂದರೆ ಮೊದಲನೆಯ ಚತುರ್ಯಗ. ಚತುರ್ಯುಗಗಳಲ್ಲಿ ಮೊದಲನೆಯದು ಕೃತಯುಗ. ಹೀಗೆ ಕಲ್ಪಗಳ ಮುಖರೂಪ ಎಂದರೆ ಕೃತಯುಗ ಸ್ವರೂಪ ಎಂದಾಯಿತು. ಅದೇ ರೀತಿ ಕಲ್ಪನೆಗಳ ಆರಂಭ ಎಂದರೆ, 'ಏಕೋsಹಂ ಬಹು ಸ್ಯಾಮ್' (ಒಬ್ಬನೇ ಇರುವ ನಾನು ಅನೇಕ ರೂಪ ತಾಳಬೇಕು) ಎಂಬ ಭಗವದ್ ವಿಚಾರ. ಅಂಥವನಿಗೆ ನಮಸ್ಕಾರ.

218 **ಅನುಕಲ್ಪಾದಯೇ ನಮಃ :** ಪ್ರಥಮ ಅಥವಾ ಮುಖ್ಯವಾದುದನ್ನು ಅನುಸರಿಸಿ ಬರುವಂತಹದು ಅಥವಾ ಮುಖ್ಯವಾದುದಕ್ಕೆ ಅನುಕೂಲವಾದುದೇ ಅನುಕಲ್ಪ. ಈ ಅನುಕಲ್ಪದ ಆದಿ ಎಂದರೆ ಆರಂಭಕ್ಕೆ ಅಥವಾ ಅನುಕಲ್ಪ ಮೊದಲಾದುದಕ್ಕೆ ನಮಸ್ಕಾರ.

(ಮುಂದುವರಿಯುವುದು)

ಅಧ್ಯಕ್ಷರ ಸಂದೇಶ

# ಕೂಟಬಂಧು ಭವನ ನವೀಕರಣ

ಶ್ರೀ ಗುರುಭ್ಯೋ ನಮಃ । ಇದೇ ಮೇ 23ರಂದು ಗುರುನರಸಿಂಹ ಜಯಂತಿಯನ್ನು ಎಲ್ಲ ಅಂಗಸಂಸ್ಥೆಗಳಲ್ಲಿ ಚೆನ್ನಾಗಿ ಆಚರಿಸಿದ ವರದಿಗಳು ಬಂದಿವೆ. ಸಂತೋಷ. ಈ ನರಸಿಂಹ ಜಯಂತಿಯಿಂದ ಮುಂದಿನ ವರ್ಷದ ನರಸಿಂಹ ಜಯಂತಿಯವರೆಗೆ ಕೂಟ ಬ್ರಾಹ್ಮಣ ಸಮಾಜದಲ್ಲಿ ಧಾರ್ಮಿಕ ಜಾಗೃತಿಯ ಮಹತ್ವಪೂರ್ಣ ಯೋಜನೆಯಲ್ಲಿ ಎಲ್ಲ ಅಂಗಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸದಸ್ಯರು ಮಾತ್ರವಲ್ಲ ನಮ್ಮ ಕೂಟ ಬ್ರಾಹ್ಮಣ ಸಮಾಜದ ಪ್ರತಿಯೊಬ್ಬರೂ ತೊಡಗಿಸಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ.



ಈ ಕುರಿತು ವಿವರವಿರುವ ಪುಸ್ತಿಕೆಯನ್ನು ಎಲ್ಲ ಅಂಗಸಂಸ್ಥೆಗಳಿಗೆ ಈಗಾಗಲೇ ಕಳುಹಿಸಲಾಗಿದೆ. ಅದನ್ನು ಅಂಗಸಂಸ್ಥೆಯ ಸದಸ್ಯರಿಗೆ ಮಾತ್ರವಲ್ಲ ಸದಸ್ಯರ ಮನೆಮಂದಿಗೆ ಕೂಡ ತಲುಪಿಸಬೇಕಾಗಿ ಅಪೇಕ್ಷೆ. ಹತ್ತು ವರ್ಷಕ್ಕಿಂತ ಮೇಲಿನ ಎಲ್ಲ ಮಕ್ಕಳು, ಹೆಂಗಸರು ಮತ್ತು ಮುದುಕರಾದಿಯಾಗಿ ಎಲ್ಲ ಕೂಟ ಬ್ರಾಹ್ಮಣ ಬಾಂಧವರು ಒಂದು ಪುಸ್ತಿಕೆಯನ್ನು ಪಡೆದು ಅದರಲ್ಲಿ ಸೂಚಿಸಿದಂತೆ ಸುಲಭವಾದ ಸಾಧನೆಯನ್ನು ಪ್ರತಿದಿನ ಮಾಡಿದಾಗ ನಮ್ಮ ಇಡೀ ಸಮಾಜದಲ್ಲಿ ಧಾರ್ಮಿಕ ಜಾಗೃತಿಯಾಗುವುದು ನಿಶ್ಚಿತ.

ಪ್ರತಿಯೊಂದು ಅಂಗಸಂಸ್ಥೆಯುವರು ಈ ಸಣ್ಣ ಪುಸ್ತಿಕೆಯ ಇನ್ನೂ ಎಷ್ಟು ಪ್ರತಿಗಳು ಬೇಕೆಂದು ನನಗೆ ಅಥವಾ ಶ್ರೀ ಎ. ರಮೇಶ ಮಯ್ಯರಿಗೆ ತಿಳಿಸಿದಲ್ಲಿ, ಬೇಗನೆ ಕಳುಹಿಸುವ ಏರ್ಪಾಟು ಮಾಡಲಾಗುವುದು.

ನಮ್ಮ ಇನ್ನೊಂದು ಮಹತ್ವಾಕಾಂಕ್ಷೆಯ ಕಾರ್ಯ ಕೂಟಬಂಧು ಭವನದ ನವೀಕರಣ. ಅದರ ಕೆಲಸವನ್ನು ಈಗಾಗಲೇ ಪ್ರಾರಂಭಿಸಿದ್ದು ಪ್ರಗತಿಪಥದಲ್ಲಿದೆ. ಹಳೆಯ ಕಟ್ಟಡವನ್ನು ಕೆಡವಲಾಗಿದೆ. ಕಟ್ಟಲಾಗುವ ಹೊಸ ಕಟ್ಟಡದಲ್ಲಿ ಎರಡು ಅಂತಸ್ತುಗಳು ಇರುತ್ತವೆ. ನೆಲಮಟ್ಟದ ಅಂತಸ್ತಿನಲ್ಲಿ ಒಂದು ಸಭಾಂಗಣ ಮತ್ತು ಎರಡು ಕೋಣೆಗಳನ್ನು ನಿರ್ಮಿಸಲಾಗುವುದು. ಮೊದಲ ಮಾಳಿಗೆಯಲ್ಲಿ ಕೋಣೆಗಳನ್ನು ರಚಿಸಿ, ದೂರದ ಊರುಗಳಿಂದ ಬರುವ ಕೂಟಬಂಧುಗಳ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗುವುದು.

ಈ ಕಟ್ಟಡದ ನೀಲ ನಕಾಶೆಯನ್ನು ಸಿದ್ಧಪಡಿಸಿದ್ದು ವೆಚ್ಚವನ್ನು ಅಂದಾಜಿಸಲಾಗಿದೆ.ನಮ್ಮ ಸಮಾಜದ ದಾನಿಗಳೆಲ್ಲ ಈ ಕಾರ್ಯಕ್ಕೆ ಉದಾರವಾಗಿ ದೇಣಿಗೆಯನ್ನು ನೀಡಬೇಕಾಗಿ ವಿನಂತಿ. ದಾನಿಗಳು ವೈಯಕ್ತಿಕವಾಗಿ ಅಥವಾ ಅಂಗಸಂಸ್ಥೆಗಳ ಮೂಲಕ ಸಾಮೂಹಿಕವಾಗಿ ಧನಸಹಾಯ ಮಾಡಲು ಅವಕಾಶವಿದೆ. ಮನವಿ ಪತ್ರ ಹಾಗೂ ರಸೀತಿ ಪುಸ್ತಕಗಳನ್ನು ಮುದ್ರಿಸಿ ಎಲ್ಲ ಅಂಗಸಂಸ್ಥೆಗಳಿಗೆ ಶೀಘ್ರದಲ್ಲೇ ಕಳುಹಿಸಿ ಕೊಡಲಾಗುವುದು. ಸರ್ವರ ಸಹಕಾರವನ್ನು ಅಪೇಕ್ಷಿಸುವ,

ನಿಮ್ಮವನೇ –

**ಪಿ. ವೆಂಕಟ್ರಾವ್**

ಸಂಪಾದಕೀಯ

# ಮತಕ್ಕಿಂತ ಬೇರೆಯಾದ ಆಧ್ಯಾತ್ಮಿಕತೆ



ಮತ (Religion) ಬೇರೆ, ಧರ್ಮ (righteousness) ಬೇರೆ ಎಂಬುದು ಸರ್ವವಿದಿತ. ಈಗ ಮತ ಮತ್ತು ಆಧ್ಯಾತ್ಮಿಕತೆ (spirituality) ಒಂದೆಯೋ, ಬೇರೆ ಬೇರೆಯೋ ? ಅಥವಾ ಅವುಗಳಿಗೆ ಪರಸ್ಪರ ಸಂಬಂಧವಿದೆಯೋ ? ಎಂಬುದನ್ನು ಪರಿಶೀಲಿಸೋಣ. ನಿಜವಾದ ಒಬ್ಬ ಮತೀಯ ಮನುಷ್ಯನು ಆಧ್ಯಾತ್ಮಿಕನೂ ಆಗಿರುತ್ತಾನಲ್ಲದೆ, ನಿಜವಾದ ಒಬ್ಬ ಆಧ್ಯಾತ್ಮಿಕ ಮನುಷ್ಯನು ಮತೀಯನೂ ಆಗಿರುತ್ತಾನೆ.

ರಿಲಿಜನ್ (Religion) ಎಂಬ ಶಬ್ದವು ಲ್ಯಾಟಿನ್ ಭಾಷೆಯ ಕಟ್ಟುವುದು ಎಂಬ ಅರ್ಥವುಳ್ಳ 'ರಿ-ಲಿಜಿಯೊ / ರಿ-ಲಿಗಾರೆ' ಎಂಬ ಶಬ್ದದಿಂದ ನಿಷ್ಪನ್ನವಾಗಿದೆ. ಮನುಷ್ಯನನ್ನು ಸೃಷ್ಟಿಕರ್ತನಾದ ದೇವರಿಗೆ ಕಟ್ಟು, ಸಂಬಂಧಿಸು ಎಂದರ್ಥ. ದುರದೃಷ್ಟವಶಾತ್ ಮತಬೋಧಕರ ವಿಕೃತ ಮನೋಭಾವದಿಂದಾಗಿ ಈ ಶಬ್ದವು ದೇವರು ಎಂಬುದನ್ನು ಹೊರತು ಬೇರೆ ಏನೇನೋ ಅರ್ಥಗಳನ್ನೆಲ್ಲ ಹೊಂದುವಂತಾಗಿದೆ. ಇಲ್ಲವಾದರೆ, ಯುರೋಪ್ ಖಂಡದಲ್ಲಿ ರಿಲಿಜನ್ (ಮತದ) ಹೆಸರಲ್ಲಿ ನಡೆದ ಘರ್ಷಣೆ, ಜಗಳ, ಹೋರಾಟ ಹಾಗೂ ಯುದ್ಧಗಳನ್ನು ಅಲ್ಲಿಯ ಮತಪಂಡಿತರು ಸಮರ್ಥಿಸುವುದು ಹೇಗೆ ? ಇದೆಲ್ಲ ವಿದೇಶೀಯ ಮತಗಳ ವಿಚಾರ.

ಆತ್ಮ ಚೈತನ್ಯವು ಜಡವಸ್ತುವಿಗಿಂತ ಬೇರೆಯಾಗಿದೆ. ಆತ್ಮವೊಂದೇ ಸತ್ಯ ಎಂಬ ವಿಶ್ವಾಸದ ಮೇಲೆ ಆಧ್ಯಾತ್ಮಿಕತೆ ನಿಂತಿದೆ. ಅದು ಮೌಲ್ಯಾಭಿಮುಖೀ ನೀತಿ ಸಂಹಿತೆಯನ್ನು ಅಪೇಕ್ಷಿಸುತ್ತದೆ. ಯಾವುದೇ ಮತಕ್ಕೆ ಕೂಡ ಇಂತಹ ನೀತಿ ಸಂಹಿತೆ ಅವಶ್ಯ. ಮಾನವ ಜೀವನದಲ್ಲಿ ಮತಕ್ಕೆ ಸರಿಯಾದ ಸ್ಥಾನ ನೀಡಬೇಕಾದರೆ, ಅದನ್ನು ಆಧ್ಯಾತ್ಮಿಕತೆಯ ಮೂಲಕ ಪಡೆದಿರಬೇಕು.

ಇಲ್ಲಿ ಡಾ। ಐನ್‌ಸ್ಟೀನನ ವಿಚಾರವನ್ನು ಜ್ಞಾಪಿಸಿಕೊಳ್ಳಲೇ ಬೇಕು - 'ನನ್ನ ಮತವು ಅನಂತ ಹಾಗೂ ಶ್ರೇಷ್ಠವಾದ ಪರಮಾತ್ಮ ಚೈತನ್ಯದ ಬಗ್ಗೆ ವಿನಮ್ರವಾದ ಮೆಚ್ಚುಗೆಯನ್ನು ಒಳಗೊಂಡಿದೆ. ನಮ್ಮ ಅಶಕ್ತ ಮನಸ್ಸಿನ ಮೂಲಕ ನಾವು ಆ ಪರಮ ಚೈತನ್ಯವನ್ನು ಅರಿಯಲು ಸಾಧ್ಯವಾಗುವಂತೆ ಅದು ತನ್ನ ಸ್ವಲ್ಪ ಸ್ವಲ್ಪವೇ ವಿವರಗಳನ್ನು ಪ್ರಕಟ ಪಡಿಸುತ್ತದೆ. ಗ್ರಹಿಸಲು ನಿಲುಕದ ವಿಶ್ವದಲ್ಲಿ ವ್ಯಕ್ತವಾದ ಶ್ರೇಷ್ಠ ವಿಚಾರ ಶಕ್ತಿಯೊಂದರ ಅಸ್ತಿತ್ವದ ಬಗ್ಗೆ ಗಾಢವಾದ ಭಾವನಾತ್ಮಕ ವಿಶ್ವಾಸವೇ ದೇವರ ಕುರಿತು ನನ್ನ ವಿಚಾರವನ್ನು ರೂಪಿಸುತ್ತದೆ'. (ಲಿಂಕನ್ ಬಾರ್ನೆಟ್ : ವಿಶ್ವ ಹಾಗೂ ಡಾ. ಐನ್‌ಸ್ಟೀನ್ - ಪುಟ 130)

ಮಹಾತ್ಮ ಗಾಂಧೀಜಿ ಹೇಳಿದ್ದಾರೆ - 'ಕೆಲವರು ತಮ್ಮ ವೈಚಾರಿಕತೆಯ ಅಹಂಕಾರದಲ್ಲಿ ಮತಕ್ಕೂ ತಮಗೂ ಯಾವುದೇ ಸಂಬಂಧವಿಲ್ಲವೆಂದು ಘೋಷಿಸುತ್ತಾರೆ. ಇದು ಮನುಷ್ಯನೊಬ್ಬ - ನಾನು

ಉಸಿರಾಡುತ್ತೇನೆ, ಆದರೆ ನನಗೆ ಮೂಗೇ ಇಲ್ಲ – ಎಂದ ಹಾಗೆ ಅಸಂಗತ. ಮನುಷ್ಯ ಒಪ್ಪಲಿ, ಬಿಡಲಿ ಅವನಿಗೆ ಅವರ್ಣನೀಯ ಸಂತೋಷ ಉಕ್ಕಿಬರುವ ದಿವ್ಯತೆಯೊಂದಿಗೆ ಯಾವುದೋ ಸಂಬಂಧ ಇದ್ದೇ ಇದೆ. ಈ ಅರ್ಥದಲ್ಲಿ ಅವನು ಮತವಿಲ್ಲದೆ ಬದುಕುವಂತಿಲ್ಲ' (–ಯಂಗ್ ಇಂಡಿಯಾ 23–1–1930)

**ಆಧ್ಯಾತ್ಮಿಕತೆಯ ಉಪಯೋಗ :**

ಹೀಗೆ ಮತೀಯ ಸಂಸ್ಥೆಗಳಿಂದ ದೂರವಿದ್ದು, ಮತೀಯ ಆಚರಣೆಗಳನ್ನು ಮಾಡದಿರುವ ವ್ಯಕ್ತಿಯು ಕೂಡ ದೇವರೊಡನೆ ಸಂಬಂಧವಿಲ್ಲ ಎನ್ನುವಂತಿಲ್ಲ. ಆನಂದ ಹಾಗೂ ಕಾಂತಿಯ ಚಿಲುಮೆಯಂತಿರುವ ದೇವರೊಂದಿಗೆ ಸಂಪರ್ಕ ಸಾಧಿಸಲು ಆಧ್ಯಾತ್ಮಿಕತೆ ಉಪಯುಕ್ತ.

ಆಧ್ಯಾತ್ಮಿಕತೆಯು ನಮ್ಮ ಬಾಹ್ಯ ಪ್ರಪಂಚವನ್ನು ಹಾಗೂ ಆಂತರಿಕ ಪ್ರಪಂಚವನ್ನು ಬೆಸೆಯುವ ವಿಜ್ಞಾನ. ಇದು ಮನುಷ್ಯನ ಹೊರಗಿನ ಪ್ರಕೃತಿಯ ಅಧ್ಯಯನವನ್ನು ಮತ್ತು ಮನುಷ್ಯನ ಒಳಗಿನ ಪ್ರಕೃತಿ ಎಂದರೆ ಆಲೋಚನೆಗಳು, ಭಾವನೆಗಳು ಮೊದಲಾದುವನ್ನು ಸಂಯೋಜಿಸುವ ಅಗತ್ಯವನ್ನು ತಿಳಿಸುತ್ತದೆ –

**ಕ್ಷೇತ್ರ –ಕ್ಷೇತ್ರಜ್ಞಯೋರ್ಜ್ಞಾನಂ**

**ಯತ್ ತತ್ ಜ್ಞಾನಂ ಮತಂ ಮಮ ॥** (ಭಗವದ್ಗೀತೆ 13–2)

ಈ ಶರೀರವೆಂಬ ಕ್ಷೇತ್ರ ಮತ್ತು ಅದರ ಕುರಿತು ತಿಳಿದಿರುವ ಕ್ಷೇತ್ರಜ್ಞನಾದ ಭಗವಂತನ ಕುರಿತಾದ ಜ್ಞಾನವೇ ಸರಿಯಾದ ತಿಳುವಳಿಕೆ ಎಂದು ನನ್ನ ಅಭಿಪ್ರಾಯ.

**ಈ ಕುರಿತು ಇತರರ ಹೇಳಿಕೆಗಳು** :

ಮನುಷ್ಯನನ್ನು ಕೆಡುಕಿನಿಂದ ಪವಿತ್ರತೆಯ ಕಡೆಗೆ, ಅಸಹಾಯಕತೆಯಿಂದ ನಿರ್ಭಯತೆಯ ಕಡೆಗೆ ಒಯ್ಯುವುದೇ ಆಧ್ಯಾತ್ಮಿಕತೆಯ ಉದ್ದೇಶ.

(–ಸ್ವಾಮಿ ರಂಗನಾಥಾನಂದ)

ಮತಗಳೆಲ್ಲ ಒಂದೇ ಗುರಿಗೆ ಹೋಗಿ ಸೇರುವ ಬೇರೆ ಬೇರೆ ದಾರಿಗಳು.

(–ಮಹಾತ್ಮ ಗಾಂಧೀಜಿ)

ಅಧ್ಯಾತ್ಮವಿಲ್ಲದ ವಿಜ್ಞಾನ ಕುಂಟು ; ವಿಜ್ಞಾನವಿಲ್ಲದ ಅಧ್ಯಾತ್ಮ ಕುರುಡು.

(ಡಾ। ಅಲ್ಬರ್ಟ್ ಐನ್‌ಸ್ಟೀನ್)

ಪ್ರತಿಯೊಬ್ಬನೂ ದುಃಖದ ಸೋಂಕಿಲ್ಲದ ಸುಖವನ್ನು ಬಯಸುತ್ತಾನೆ. ಪ್ರತಿಯೊಬ್ಬನಿಗೂ ತನ್ನ ಬಗ್ಗೆ ಅಪಾರ ಪ್ರೀತಿ ಇದೆ. ಇದು ಏಕೆಂದರೆ, ಸಂತೋಷವೇ ಪ್ರತಿಯೊಬ್ಬನ ಸ್ವಭಾವ. ಅದನ್ನು ಸಾಕ್ಷಾತ್ಕರಿಸಲು ಆಧ್ಯಾತ್ಮಿಕ ಜೀವನ ಸಹಾಯ ಮಾಡುತ್ತದೆ.

**–ಡಾ। ವಿದ್ವಾನ್ ಕೃಷ್ಣಮೂರ್ತಿ ನಿಟಿಲಾಪುರ**

ವಿಶೇಷ ಲೇಖನ

# ಜ್ಯೋತಿರ್ಧ್ಯಾನ

**ಜ್ಯೋತಿಷಾಮಪಿ ತಜ್ಜ್ಯೋತಿಃ, ತಮಸಃ ಪರಮುಚ್ಯತೇ ।**
**ಜ್ಞಾನಂ, ಜ್ಞೇಯಂ, ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಮ್ ॥ (-ಗೀತೆ 13-17)**

ಸೂರ್ಯಾದಿ ಜ್ಯೋತಿಗಳಿಗೂ ಬೆಳಕು ನೀಡುವ ಪರಬ್ರಹ್ಮವೆಂಬ ಜ್ಯೋತಿಯು ಕತ್ತಲೆಗಿಂತ ಆಚೆ ಇದೆ ಎನ್ನಲಾಗಿದೆ. ತಿಳಿಯಬಹುದಾದ, ತಿಳಿವಿನ ಫಲವೂ ಆದ ಆ ಜ್ಞಾನವು ಎಲ್ಲರ ಹೃದಯದಲ್ಲಿ ನೆಲೆಸಿದೆ.

**ನಾರಾಯಣಃ ಪರಂಜ್ಯೋತಿಃ ಆತ್ಮಾ ನಾರಾಯಣಃ ಪರಃ ।**
**ಜ್ಯೋತಿರ್ಜ್ವಲತಿ ಹೃತ್ಪದ್ಮೇ ಸರ್ವೇಷಾಂ ಉಪಕಾರಕಮ್ ॥**

ನಾರಾಯಣನು ಪರಂಜ್ಯೋತಿ. ನಾರಾಯಣನೇ ಪರಮಾತ್ಮ. ಅಂತಹ ಜ್ಯೋತಿಯು ಹೃದಯ ಕಮಲದಲ್ಲಿ ಬೆಳಗುತ್ತಿದೆ. ಅದು ಎಲ್ಲರಿಗೂ ಉಪಕಾರಕ.

**ಹೃತ್ಪದ್ಮೇ ಜ್ಯೋತಿಷಂ ಧ್ಯಾತ್ವಾ ; ನಿವಾರ್ಯ ಶತ್ರುತಾಂ ಸದಾ ।**
**ಶಕ್ತಿಂ ಮೈತ್ರೀಂ ಚ ವಿಂದೇತ, ನರಸಿಂಹ ಪ್ರಸಾದತಃ ॥**

ಹೃದಯ ಕಮಲದಲ್ಲಿ ಜ್ಯೋತಿಯನ್ನು ಧ್ಯಾನಿಸಿ ಶತ್ರುತ್ವವನ್ನು ನಿವಾರಿಸಿಕೊಳ್ಳಬಹುದಲ್ಲದೆ, ಗುರು ನರಸಿಂಹನ ಅನುಗ್ರಹದಿಂದ ವೈಯಕ್ತಿಕ ಸಾಧನೆಗೆ ಬೇಕಾದ ಶಕ್ತಿಯನ್ನು ಹಾಗೂ ವ್ಯವಹಾರ ಜಯಕ್ಕೆ ಬೇಕಾದ ಬಹುಜನರ ಮೈತ್ರಿಯನ್ನು ಗಳಿಸಿಕೊಳ್ಳಬಹುದು.

ದೇವರ ಕೋಣೆಯಲ್ಲಿ ಅಥವಾ ಶುಚಿಯಾದ ಶಾಂತವಾದ ಏಕಾಂತ ಸ್ಥಳದಲ್ಲಿ ಸುಖಾಸನದಲ್ಲಿ ಕುಳಿತುಕೊಳ್ಳಬೇಕು. ಪೂರ್ವಕ್ಕೆ ಅಥವಾ ಉತ್ತರಕ್ಕೆ ಮುಖಮಾಡಿ, ಬೆನ್ನಕೋಲು ನೆಟ್ಟಗೆ ಇರುವಂತೆ ಕುಳಿತು, ಮೂರು ಸಲ ದೀರ್ಘವಾಗಿ ಉಸಿರಾಡಬೇಕು. ದೇವರ ದೀಪ ಉರಿಯುತ್ತಿರಲಿ – ಕಣ್ಣು ಕೋರೈಸುವಂತೆಯೂ ಅಲ್ಲ, ಕುರುಡು ದೀಪವಾಗಿಯೂ ಅಲ್ಲ. ಎರಡೂ ಕೈಗಳನ್ನು ಜ್ಞಾನಮುದ್ರೆಯಲ್ಲಿ ಮೊಣಕಾಲ ಮೇಲೆ ಇರಿಸಿರಿ. ಕಣ್ಣು ತೆರೆದು ನಿಮ್ಮ ಮುಂದೆ ಉರಿಯುತ್ತಿರುವ ದೀಪದ ಜ್ಯೋತಿಯನ್ನು ಏಕಾಗ್ರತೆಯಿಂದ ನೋಡಿರಿ. ಜ್ಯೋತಿ ಅಥವಾ ದೀಪದ ಕುಡಿಯು ಕಣ್ಣಿನ ಮೂಲಕ ನಿಮ್ಮ ಶರೀರದೊಳಗೆ ಬಂದು, ಹೃದಯ ಕಮಲದಲ್ಲಿ ಪ್ರಕಾಶಮಾನವಾಗಿ ಉರಿಯುತ್ತಿದೆ ಎಂದು ಭಾವಿಸಿರಿ. ಜ್ಯೋತಿಯಿಂದ ಹೊರಹೊಮ್ಮುತ್ತಿರುವ ಕಿರಣಗಳು ನಿಮ್ಮ ದೇಹದ ಸರ್ವ ಅವಯವಗಳನ್ನು ವ್ಯಾಪಿಸುತ್ತಿವೆ. ಪ್ರೇಮಮಯವಾದ ಅಲೆಗಳನ್ನು ಎಬ್ಬಿಸುತ್ತಿವೆ. ಪ್ರೇಮವೇ ದೇವರು – ದೇವರೇ ಪ್ರೇಮ. ಭಗವಂತನ ಪ್ರೇಮದ ಅಲೆಗಳಲ್ಲಿ ಮುಳುಗಿ ಎದ್ದಂತೆ ಭಾವಿಸಿರಿ. ಇದರಿಂದ ಮನಸ್ಸು ಹಗುರಾಗುತ್ತದೆ.

ಇನ್ನು ಜ್ಯೋತಿಯನ್ನು ಹೃದಯ ಕಮಲದಿಂದ ಸ್ಥಳಾಂತರಿಸಿ ಹುಬ್ಬುಗಳ ನಡುವೆ ಇರಿಸಿರಿ. ಭ್ರೂಮಧ್ಯದಲ್ಲಿ ಜ್ಯೋತಿ ಬೆಳಗುತ್ತಿದೆ. ಇದರಿಂದ ಜ್ಞಾನದ ಕಣ್ಣು ತೆರೆಯಿತು. ಇದರಿಂದ ಮನಸ್ಸಿನ ದೋಷಗಳೆಲ್ಲ ನಿವಾರಣೆಗೊಳ್ಳಲಿ. ಇನ್ನು ಮನಸ್ಸು ಯಾವ ಕೆಟ್ಟ ಆಲೋಚನೆಯನ್ನೂ ಮಾಡದಿರಲಿ. ಮುಂದೆ ಜ್ಯೋತಿಯನ್ನು ಹುಬ್ಬುಗಳ ನಡುವಿನಿಂದ ತೆಗೆದು ಕಣ್ಣುಗಳಲ್ಲಿ ಇರಿಸಿಕೊಳ್ಳಿ. ಜ್ಯೋತಿಯು ಒಂದರ ನಂತರ ಒಂದರಂತೆ ಎರಡೂ ಕಣ್ಣುಗಳನ್ನು ಬೆಳಗಿ ಶುದ್ಧೀಕರಿಸಿತು. ಈಗ ಕಣ್ಣುಗಳ ದೋಷ ನಿವಾರಣೆಗಾಗಿ ಸುದೃಷ್ಟಿಯನ್ನು ಪಡೆದುವು. ಇನ್ನು ಅವು ಕೆಟ್ಟದ್ದನ್ನು ನೋಡಲಾರವು. ಒಳಿತನ್ನೇ

ನೋಡುತ್ತವೆ. ಯಾರನ್ನೂ ಕ್ರೂರದೃಷ್ಟಿಯಿಂದ ನೋಡಲಾರವು. ಅನಂತರ ಜ್ಯೋತಿಯನ್ನು ಕಣ್ಣುಗಳಿಂದ ತೆಗೆದು ಕಿವಿಗಳಲ್ಲಿ ಸ್ಥಾಪಿಸಿರಿ. ಜ್ಯೋತಿ ಎರಡೂ ಕಿವಿಗಳ ಶ್ರವಣ ಶಕ್ತಿ ಹೆಚ್ಚಿ, ಕೆಟ್ಟದ್ದನ್ನು, ಸುಳ್ಳನ್ನು, ಚಾಡಿಮಾತನ್ನು ಹಾಗೂ ಪರನಿಂದೆಯನ್ನು ಕೇಳದಿರಲಿ. ಒಳ್ಳೆಯ ವಿಚಾರಗಳನ್ನೇ ಕೇಳುವಂತಾಗಲಿ. ಈಗ ಜ್ಯೋತಿಯನ್ನು ಕಿವಿಗಳಿಂದ ಹಿಂತೆಗೆದು ಮೂಗಿನಲ್ಲಿ ಇಡಿರಿ. ಮೂಗಿನ ಎರಡು ರಂಧ್ರಗಳು ಶುದ್ಧವಾಗಿ ಉತ್ತಮ ಉಸಿರಾಟ ನಡೆಯುವಂತಾಗಲಿ. ಉಸಿರಿನ ಮೂಲಕ ಶ್ವಾಸಕೋಶಕ್ಕೆ ಹೋದ ಜ್ಯೋತಿಯು ಶ್ವಾಸನಾಳ ಮತ್ತು ಶ್ವಾಸಕೋಶಗಳ ದೋಷಗಳನ್ನು ನಿವಾರಿಸಿ ಶಕ್ತಿಯನ್ನು ತುಂಬಿಸಲಿ. ಜ್ಯೋತಿಯನ್ನು ಮೂಗಿನ ಮೂಲಕ ಹೊರತಂದು ಬಾಯಿಗೆ ಸ್ಥಳಾಂತರಿಸಿರಿ.

ಬಾಯಲ್ಲಿ ನಾಲಿಗೆ, ಹಲ್ಲುಗಳನ್ನು ಬೆಳಗಿದ ಜ್ಯೋತಿಯು ಗಂಟಲು, ಅನ್ನನಾಳದ ಮೂಲಕ ಜಠರ, ದೊಡ್ಡಕರುಳು, ಸಣ್ಣಕರುಳನ್ನು ಪ್ರವೇಶಿಸಿ, ಅಲ್ಲೆಲ್ಲ ಶುದ್ಧೀಕರಿಸಲಿ. ಬಾಯಿ ತಿನ್ನಬಾರದ್ದನ್ನು ತಿನ್ನದಿರಲಿ. ಕುಡಿಯಬಾರದ್ದನ್ನು ಕುಡಿಯದಿರಲಿ. ಜ್ಯೋತಿಯ ಸಂಪರ್ಕದಿಂದ ಶುದ್ಧವಾದ ನಾಲಿಗೆ ಇನ್ನು ಅಸತ್ಯವನ್ನು, ಕೆಟ್ಟ ಮಾತನ್ನು ನುಡಿಯದಿರಲಿ. ಮುಂದೆ ಜ್ಯೋತಿಯನ್ನು ಕುತ್ತಿಗೆಯ ಮೂಲಕ ಎಡಭುಜ, ತೋಳು, ಎಡಕೈಗೆ ಒಯ್ಯಿರಿ. ಮತ್ತೆ ಮೇಲೆ ತಂದು ಬಲ ಭುಜ, ತೋಳು, ಬಲಕೈಗೆ ಕೊಂಡೊಯ್ಯಿರಿ. ಜ್ಯೋತಿಯ ಸಂಪರ್ಕಕ್ಕೆ ಬಂದ ಎರಡೂ ಕೈಗಳು ಯಾವ ಕೆಟ್ಟ ಕೆಲಸವನ್ನೂ ಮಾಡದಿರಲಿ.

ಈಗ ಜ್ಯೋತಿಯನ್ನು ಕಂಠಸ್ಥಾನದಿಂದ ಕೆಳಗಿಳಿಸಿ ಹೃದಯ, ರಕ್ತನಾಳಗಳು, ಇನ್ನೂ ಕೆಳಗೆ ಪಿತ್ತಜನಕಾಂಗ, ಮೂತ್ರಪಿಂಡ, ಮೂತ್ರಕೋಶಗಳಿಗೆ ತನ್ನಿರಿ. ಬಲತೊಡೆ, ಮೊಣಗಂಟು, ಬಲಪಾದ ಹಾಗೆಯೇ ಎಡತೊಡೆ, ಎಡಮೊಣಕಾಲು, ಎಡಪಾದಗಳಿಗೆಲ್ಲ ಜ್ಯೋತಿಯು ಸಂಚರಿಸಲಿ. ಜ್ಯೋತಿಯು ಚಲಿಸಿದ ದಾರಿಯಲ್ಲಿರುವ ಅಂಗಗಳನ್ನೆಲ್ಲ ಶುದ್ಧೀಕರಿಸಿ, ದೋಷಗಳನ್ನು ನಿವಾರಿಸಲಿ. ಅವೆಲ್ಲ ಆರೋಗ್ಯಪೂರ್ಣವಾಗಲಿ. ಇಡಿ ದೇಹದ ಎಲ್ಲ ಯೋಗ ಚಕ್ರಗಳು ಕೂಡ ಜಾಗೃತವಾಗಲಿ. ಹೀಗೆ ನಿಮ್ಮ ಶರೀರವನ್ನು ಬೆಳಗಿ ಶುದ್ಧಗೊಳಿಸಿ ಆರೋಗ್ಯವನ್ನು ಉಂಟುಮಾಡಿದ ಜ್ಯೋತಿಯನ್ನು ನಿಮ್ಮ ಮನೆಮಂದಿಯ ದೇಹಗಳಿಗೆ ಒಯ್ದು, ಅವರನ್ನೆಲ್ಲ ಶುದ್ಧಗೊಳಿಸಿ, ಆರೋಗ್ಯ ಪೂರ್ಣಗೊಳಿಸಿ, ನಿಮ್ಮ ಬಗ್ಗೆ ಪ್ರೀತಿ, ಅನ್ಯೋನ್ಯತೆ ಹೆಚ್ಚುವಂತೆ ಮಾಡಿದುದಾಗಿ ಭಾವಿಸಿರಿ.

ಹಾಗೆಯೇ ಜ್ಯೋತಿಯನ್ನು ನಿಮ್ಮ ವ್ಯವಹಾರ ಕ್ಷೇತ್ರಕ್ಕೆ ಒಯ್ಯಿರಿ. ಅಲ್ಲಿನ ಜನರನ್ನು ಬೆಳಗಿ, ಹೆಚ್ಚು ಅನುಕೂಲರಾಗಿರುವಂತೆ ಮಾಡಿದ್ದಾಗಿ ಎಣಿಸಿರಿ. ಮುಂದೆ ನಿಮ್ಮ ವಿರೋಧಿಗಳ ಶರೀರವನ್ನು ಜ್ಯೋತಿಯು ಪ್ರವೇಶಿಸಿ, ಅವರಲ್ಲಿ ನಿಮ್ಮ ವಿರುದ್ಧ ಭಾವನೆಗಳು ಕಡಿಮೆಯಾಗಿ, ನಿಮ್ಮ ಪರವಾದ ಭಾವನೆಗಳು ಹೆಚ್ಚಿರುವುದಾಗಿ ಭಾವಿಸಿರಿ. ಈಗ ಪುನಃ ನಿಮ್ಮ ದೇಹಕ್ಕೆ ಬಂದ ಜ್ಯೋತಿಯ ಕಿರಣಗಳು ನಿಮ್ಮ ಮನೆ, ಮನೆಮಂದಿ, ಊರು, ರಾಜ್ಯ, ದೇಶವಷ್ಟೇ ಅಲ್ಲ ಇಡೀ ಪ್ರಪಂಚವನ್ನು ಬೆಳಗುತ್ತಿರುವುದಾಗಿ ಊಹಿಸಿರಿ. ನಿಮ್ಮ ಹೃದಯ ಕಮಲದಲ್ಲಿ ನೆಲೆನಿಂತ ಜ್ಯೋತಿಯ ನಡುವೆ ನಿಮ್ಮ ಆರಾಧ್ಯ ದೇವರು ಕುಳಿತಿರುವುದಾಗಿ ಭಾವಿಸಿರಿ. ನೀವು ನಮಸ್ಕರಿಸಿದಾಗ ನಿಮ್ಮ ಇಷ್ಟ ದೇವತೆ ನಿಮಗೆ ಪ್ರೇಮದಿಂದ ಆಶೀರ್ವಾದ ಮಾಡುತ್ತಿರುವುದಾಗಿ ಎಣಿಸಿರಿ. ಈಗ ನಿಧಾನವಾಗಿ ಕಣ್ಣು ತೆರೆಯಿರಿ.

ಓಂ ಅಸತೋ ಮಾ ಸದ್ಗಮಯ । ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂ ಗಮಯ । ಓಂ ಶಾಂತಿಃ ಶಾಂತಿಃ ಶಾಂತಿಃ ।

**ಡಾ। ವಿದ್ವಾನ್ ಕೃಷ್ಣಮೂರ್ತಿ ನಿಟಿಲಾಪುರ**

# ಮಕ್ಕಳ ಶಿಕ್ಷಣ ಹೊರೆಯಾಗದಿರಲಿ

ಮಕ್ಕಳ ಶಿಕ್ಷಣದ ಬಗ್ಗೆ ಇಂದು ಎಲ್ಲರೂ ಮಾತನಾಡುತ್ತಾರೆ. ಮಕ್ಕಳ ಶಿಕ್ಷಣ ಆನಂದದಾಯಕವಾಗಿರಬೇಕು, ಶಿಕ್ಷಣದಿಂದ ಮಕ್ಕಳ ವ್ಯಕ್ತಿತ್ವ ವಿಕಸನವಾಗಿ ಅರಳಬೇಕು ಎಂಬ ಕರೆ ಸಭೆ – ಸಮಾರಂಭಗಳಲ್ಲಿ ಆಗಾಗ ಕೇಳಿ ಬರುತ್ತಿದೆ. ಆದರೆ 21ನೇ ಶತಮಾನದ ಆರಂಭದಲ್ಲಿಯೂ ಶಾಲೆಗಳ ಪರಿಸ್ಥಿತಿ, ಶಿಕ್ಷಣದ ವಿಧಿ ವಿಧಾನಗಳು ಹೆಚ್ಚೇನೂ ಬದಲಾಗಿಲ್ಲ. ಎಷ್ಟೋ ಶಾಲೆಗಳು ಮಕ್ಕಳಿಗೆ ಹರ್ಷ, ಲವಲವಿಕೆ ಹುಟ್ಟಿಸುವ ಬದಲು ನಿರುತ್ಸಾಹ, ಅಂಜಿಕೆ ಹುಟ್ಟಿಸುವ ಸ್ಥಳಗಳಾಗಿವೆ. ಕವಿ ರವೀಂದ್ರರು ತಮ್ಮ ಬಾಲ್ಯದಲ್ಲಿ ಕಂಡ ಶಾಲೆಗಳ ಚಿತ್ರ ಇಂದಿಗೂ ಹೆಚ್ಚೇನೂ ಬದಲಾಯಿಸಿಲ್ಲ. ಎಳೆತನದಲ್ಲಿ ಶಾಲೆಯಲ್ಲಿ ತಾವು ಕಂಡ ಪ್ರಥಮ ಅನುಭವವನ್ನು ಟಾಗೋರರು ಹೀಗೆ ಚಿತ್ರಿಸಿದ್ದಾರೆ –'ಶಾಲೆಯಲ್ಲಿ ಥಕ್ಕನೆ ನನ್ನ ಪ್ರಪಂಚವನ್ನು ಕಳೆದುಕೊಂಡಂತಾಯಿತು. ಅದರ ಬದಲಿಗೆ ನಾನು ಕಂಡದ್ದು ಮರದ ಬೆಂಚುಗಳು, ಸುತ್ತಲೂ ಶೂನ್ಯ ದೃಷ್ಟಿಯನ್ನು ಬೀರುವ ನೆಟ್ಟಗೆ ನಿಂತ ಗೋಡೆಗಳು. ಕ್ಲಾಸುಗಳಲ್ಲಿ ನಡೆಯುವುದಾದರೂ ಏನು ? ಭೂಮಿಯ ಮೇಲಿನ ಪ್ರೀತಿಯಿಂದ ವಂಚಿಸುವಂತೆ ಮಾಡಿ, ಮಗುವಿಗೆ ಭೂಗೋಲ ಕಲಿಸುತ್ತೇವೆ. ಭಾಷೆಯನ್ನು ಬಿಟ್ಟು ವ್ಯಾಕರಣ ಕಲಿಸುತ್ತೇವೆ. ಸರಸವಾದ ಚಿರಸಾಹಿತ್ಯದ ಹಂಬಲವಿರುವ ಮಗುವಿಗೆ ಒಣಚರಿತ್ರೆ, ಸಂಗತಿ–ದಿನಾಂಕಗಳನ್ನು ಉರು ಹಾಕಲು ತಿಳಿಸುತ್ತೇವೆ'. ಈ ರೀತಿಯ ಶಾಲೆಯ ನೀರಸ ಶಿಕ್ಷಣದಿಂದ ಬೇಸತ್ತು ಟಾಗೋರರು, ಬಾಲ್ಯದಲ್ಲಿ ಶಾಲೆಯನ್ನು ತ್ಯಜಿಸಿದರು. ಅವರಿಗೆ ಪಶುಪಕ್ಷಿ, ಮರಗಿಡ, ಭೂಮಿ, ಬಾನು, ನಮ್ಮನ್ನಾವರಿಸಿದ ಪರಿಸರ – ಎಲ್ಲವೂ ಶಿಕ್ಷಣಕ್ಕೆ ಪ್ರೇರಕಗಳಾಗಿದ್ದವು. ಟಾಗೋರರ ಹಾಗೆ ಎಲ್ಲಾ ಶಿಕ್ಷಣ ತಜ್ಞರ ಅಭಿಮತ. ಮಕ್ಕಳ ಶಿಕ್ಷಣ ನಿಸರ್ಗ – ನಿಜ ಜೀವನಕ್ಕೆ ನಿಕಟವಾಗಿದ್ದು, ಮಕ್ಕಳಿಗೆ ಪ್ರಿಯವಾದ ವಸ್ತುಗಳಿಂದ ಕೂಡಿರಬೇಕು ಎಂಬುದಾಗಿದೆ.

ಆದರೆ ಇಂದು ಎಷ್ಟೋ ಶಾಲೆಗಳಲ್ಲಿನ ಪರಿಸ್ಥಿತಿ ಶೋಚನೀಯವಾಗಿದೆ. ಶಾಲೆಗಳು ಶಿಕ್ಷಣ ಕೇಂದ್ರಗಳಾಗುವ ಬದಲು ಶಿಕ್ಷೆ ಹಾಗೂ ಶಿಸ್ತಿನ ತಾಣಗಳಾಗಿವೆ. ಶಾಲಾದಿನಚರಿ ಕಲಿಕೆಯು ಮಕ್ಕಳಿಗೆ ಹರ್ಷವನ್ನು ಹುಟ್ಟಿಸದೆ ಹೊರೆಯಾಗಿದೆ. ಮಕ್ಕಳ ಶಿಕ್ಷಣವನ್ನು ಸುಧಾರಿಸುವ ಬಗ್ಗೆ ವಿವೇಚನೆ ನಡೆಸಿದ ಪ್ರೊ। ಯಶಪಾಲ ಸಮಿತಿ ಈ ಹೊರೆಯನ್ನು ಎರಡು ವಿಧವಾಗಿ ಗುರುತಿಸಿದೆ. ಒಂದು ಭೌತಿಕ ಹೊರೆ, ಇನ್ನೊಂದು ಮಾನಸಿಕ ಹೊರೆ, ಚಿಕ್ಕ ಮಕ್ಕಳು ಪ್ರತಿನಿತ್ಯ ಶಾಲೆಗೆ ಕೊಂಡೊಯ್ಯುವ ಪುಸ್ತಕ, ಸಾಮಾಗ್ರಿಗಳ ಗಂಟು ಭೌತಿಕ ಹೊರೆ. ಭಾರದ ಶಾಲಾ ಚೀಲವನ್ನು ಹಗುರಗೊಳಿಸುವ ಪ್ರಸ್ತಾಪ ಆರ್. ಕೆ. ನಾರಾಯಣರಂತಹ ಪ್ರಸಿದ್ಧ ಸಾಹಿತಿಗಳು ಹಿಂದೆ ಪಾರ್ಲಿಮೆಂಟಿನಲ್ಲಿ ನೀಡಿದರು. ಈ ಬಗ್ಗೆ ವ್ಯಾಪಕ ಚರ್ಚೆಯೂ ಆಯಿತು. ಆದರೆ ಇಂದಿಗೂ ಮಕ್ಕಳ ಶಾಲಾ ಚೀಲದ ತೂಕ ಏರುತ್ತಲೇ ಇದೆ.

ಭೌತಿಕ ಹೊರೆ ಮಕ್ಕಳ ದೇಹದ ಮೇಲೆ ಪರಿಣಾಮ ಮಾಡಿದರೆ, ಮಾನಸಿಕ ಹೊರೆ ಅವರ

ಮನಸ್ಸಿನ ಮೇಲೆ ಇನ್ನಿಲ್ಲದ ದುಷ್ಪರಿಣಾಮ ಮಾಡುತ್ತದೆ. ಮಾನಸಿಕ ಹೊರೆಗೆ ಮುಖ್ಯ ಕಾರಣ ಮಗುವಿಗೆ ಅರ್ಥವಾಗದ ಅಸಂಗತವಾದ ಪಠ್ಯ ವಸ್ತು, ಯಾಂತ್ರಿಕವಾದ ಬೋಧನಾ ಕ್ರಮ, ಪರಿಚಯವಿಲ್ಲದ ಕಲಿಕೆಯ ಮಾಧ್ಯಮ ಇತ್ಯಾದಿ. ತಮ್ಮ ಮಕ್ಕಳು ಟಿಪ್‌ಟೋಪ್ ಸಮವಸ್ತ್ರ ಧರಿಸಿ, ಆಂಗ್ಲ ಭಾಷೆಯ ಮೂಲಕ ಅಭ್ಯಾಸ ಮಾಡಿದರೆ ಬುದ್ಧಿವಂತರಾಗುತ್ತಾರೆಂಬ ಭ್ರಮೆ ಅನೇಕರಿಗಿದೆ. ಇಂದು ಸಹಸ್ರಾರು ಶಾಲೆಗಳಲ್ಲಿ ನಡೆಯುವ ಬೋಧನ ಕ್ರಮ, ಕವಿ ರವೀಂದ್ರರ ಅನುಭವಕ್ಕಿಂತ ಭಿನ್ನವಾಗಿಲ್ಲ. ಅದು ಮಕ್ಕಳಿಗೆ ಅರ್ಥವಿಲ್ಲದ ಮಾಹಿತಿ, ಅಂಕೆ ಸಂಖ್ಯೆಗಳನ್ನು ತಿಳಿಸುವುದೇ ಕಲಿಕೆಯ ವಿಧಾನ. ಮಕ್ಕಳು ಕೂಡ ಅವುಗಳನ್ನು ಉರು ಹಾಕಿ ಕಲಿಯುತ್ತಾರೆ.

ನೆನಪಿನ ಶಕ್ತಿಯಿಂದ ಹೆಚ್ಚು ಪ್ರಶ್ನೆಗಳಿಗೆ ಸರಿ ಉತ್ತರ ಕೊಡಬಲ್ಲ ವಿದ್ಯಾರ್ಥಿಗೆ ಅತ್ಯಧಿಕ ಗುಣಾಂಕಗಳು ಸಿಗುತ್ತವೆ. ಅವನಿಗೆ ರೇಂಕ್ ಕೂಡ ಕೊಡಲಾಗುವುದು. ಇಂತಹ ಪರಿಸ್ಥಿತಿಯಲ್ಲಿ ರೇಂಕ್ ಸಿಗದ ವಿದ್ಯಾರ್ಥಿಗಳು ದಡ್ಡರೆನಿಸಿಕೊಳ್ಳುತ್ತಾರೆ. ಅಂತಹ ವಿದ್ಯಾರ್ಥಿಗಳು ಜಾಣರಿದ್ದರೂ, ಮನೆಯಲ್ಲಿ ಹೆತ್ತವರು ರೇಂಕ್ ಪಡೆಯುವ ಉದ್ದೇಶದಿಂದ ಟ್ಯೂಶನ್ ಏರ್ಪಡಿಸುತ್ತಾರೆ. ಸಂಜೆ ಮಕ್ಕಳು ಸಂತೋಷದಿಂದ ಆಟೋಟದಲ್ಲಿ ಕಾಲಕಳೆಯುವ ಬದಲು ಮಾನಸಿಕ ಸೆಳೆತಕ್ಕೆ ಒಳಗಾಗುತ್ತಾರೆ. ಹೀಗೆ ಎಳೆಯ ಮಕ್ಕಳು ಮಾನಸಿಕ ಹೊರೆಯಿಂದ ಶಾಲೆಯಲ್ಲಿ ಮಾತ್ರವಲ್ಲ ಮನೆಯಲ್ಲಿಯೂ ನರಳುತ್ತಾರೆ.

ಮಕ್ಕಳ ಕಲಿಕೆಯ ಹೊರೆಯನ್ನು ತಗ್ಗಿಸಲು ಅವರ ಶಿಕ್ಷಣ ಆನಂದದಾಯಕವಾಗಲು ಪ್ರಗತಿಪರ ಶಾಲೆಗಳು ಕೆಲವು ಕ್ರಾಂತಿಕಾರಕ ಸುಧಾರಣೆಗಳನ್ನು ಮಾಡಿವೆ. ಈ ಸುಧಾರಣೆಗಳ ತಳಹದಿ – ಸೂತ್ರವೆಂದರೂ ಸಲ್ಲುವುದು – ಶಿಶು ಕೇಂದ್ರಿತ ಶಿಕ್ಷಣ (Child Centred Education) ಶಿಕ್ಷಣದ ಕೇಂದ್ರ ಬಿಂದು ಇಲ್ಲಿ 'ಮಗು'ವೇ ಆಗಿದೆ. ಮಗುವಿನ ಮನಸ್ಸು, ಉತ್ಸುಕತೆ, ಆನಂದವನ್ನು ಗುರಿಯಾಗಿಸಿ ಶಿಕ್ಷಣದ ಮಾರ್ಗ ವಿಧಾನಗಳು ನಡೆಯುತ್ತವೆ. ಮಕ್ಕಳ ತರಗತಿ ಕೋಣೆಗಳು ಆಕರ್ಷಣೀಯವಾಗಿದ್ದು, ಮಕ್ಕಳು 'ಮಾಡಿ–ಕಲಿ' ಅಥವಾ 'ನಲಿ–ಕಲಿ' ಸೂತ್ರದಂತೆ ಕಲಿಯುತ್ತಾರೆ. ಮಕ್ಕಳ ಅಭ್ಯಾಸದ ವೇಳಾಪಟ್ಟಿ ಕಟ್ಟು ನಿಟ್ಟಾಗಿರದೆ, ವಿವಿಧ ಚಟುವಟಿಕೆಗಳಿಂದ ಕೂಡಿದೆ. ಅಧ್ಯಾಪಕರು ಕೂಡಾ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸ್ಪರ್ಶಿಸಿ ಉತ್ತೇಜಿಸುತ್ತಾರೆ. ಇಂತಹ ಆದರ್ಶ ಶಾಲೆಯಲ್ಲಿ ರ್‍ಯಾಂಕ್ ಕೊಡುವ ಪದ್ಧತಿಯೇ ಇಲ್ಲ. ಅಲ್ಲದೆ ಅನುತ್ತೀರ್ಣತೆಯನ್ನು ಆದಷ್ಟು ಕಡಿಮೆ ಮಾಡಲಾಗುವುದು. ಅಧ್ಯಾಪಕರು ನೀಡುವ Home work ಕಲಿಕೆಗೆ ಪೂರಕವೇ ಹೊರತು, ಮಕ್ಕಳಿಗೆ ಹೊರೆಯಾಗದು. ಮಕ್ಕಳ ಶಾಲಾ ಚೀಲವೂ ಸಾಕಷ್ಟು ಹಗುರವಾಗಿರುತ್ತದೆ. ಕಾರಣ ಅವರ ಹೆಚ್ಚಿನ ಪುಸ್ತಕಗಳನ್ನು ಶಾಲೆಯಲ್ಲಿಯೇ ಇಡಲು ಅವಕಾಶವಿದೆ. ಈ ರೀತಿಯ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳು ವಸ್ತುಗಳಲ್ಲ ; ಅವರು ಜೀವಂತವಿರುವ, ಸದಾ ಬೆಳೆಯುವ, ಕಲಿಯುವ ವ್ಯಕ್ತಿಗಳು.

**ಪ್ರೊ. ಕೆ. ಆರ್. ಹಂದೆ, ಉಡುಪಿ**


★★★★

ಸಂಸ್ಮರಣೆ

# ಪಣಂಬೂರು ಶ್ಯಾನುಭಾಗ ಪದ್ಮನಾಭಯ್ಯ

ಪದ್ಮನಾಭಯ್ಯನವರು ಶ್ಯಾ.ಯಂ. ಕೃಷ್ಣಯ್ಯ ಮತ್ತು ಗೌರಮ್ಮ ದಂಪತಿಗಳ ಮಗನಾಗಿ ದಿನಾಂಕ 15-6-1909ರಲ್ಲಿ ಜನಿಸಿದರು. ಮುಂದಿನಿಂದ 5 ಜನ ಅಕ್ಕಂದಿರನ್ನೂ ಹಿಂದಿನಿಂದ ಒಬ್ಬ ತಮ್ಮನನ್ನೂ ಪಡೆದ ತುಂಬು ಸಂಸಾರ ಅವರದು. ತಮ್ಮ ಹನ್ನೆರಡನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡ ಅವರ ಕುಟುಂಬಕ್ಕೆ ಎರಡನೆಯ ಅಕ್ಕನಾದ ಪದ್ಮಾವತಿಯವರೂ ಭಾವ ಟಿ. ನರಸಿಂಹ ಕಾರಂತರೂ ದಿಕ್ಕಾದರು. ಆರು ವರ್ಷಗಳ ಬಳಿಕ ಭಾವನವರೂ ತೀರಿಕೊಂಡರು. ಆಗ ಅಕ್ಕನ ಕುಟುಂಬದ ಜವಾಬ್ದಾರಿಯೂ ಇವರ ಹೆಗಲಿಗೆ ಬಿತ್ತು. ಆದರೆ ಸುದೈವದಿಂದ ಪದ್ಮನಾಭಯ್ಯನವರು ಪಣಂಬೂರು ಶ್ಯಾನುಭಾಗರಾಗಿದ್ದರು.

ಸುತ್ತಮುತ್ತಲಿನ ಹತ್ತಾರು ಊರುಗಳಲ್ಲಿ 'ಪಣಂಬೂರು ಶ್ಯಾನುಭಾಗರು'



ತುಳುವಿನಲ್ಲಿ 'ಪಣಂಬೂರು ಸೇನೇರ್' ಪರಿಚಯ ಇರದವರೇ ಇರಲಿಲ್ಲ. ಅವರು ಅಷ್ಟು ಜನಾನುರಾಗಿಗಳಾಗಿದ್ದರು. ಅದು ಎರಡನೇ ಜಾಗತಿಕ ಮಹಾಯುದ್ಧದ ಸಮಯ. ಎಲ್ಲೆಡೆ ಆಹಾರಕ್ಕೆ ಹಾಹಾಕಾರ. ಬಡವರಂತೂ 'ತೋಡ ನೀರು ಕಾಡಸೊಪ್ಪು' ಎಂಬಂತೆ ಹಸಿವಿಗಾಗಿ ಗಡ್ಡೆ ಗೆಣಸು, ಸೊಪ್ಪಿನ ಗಟ್ಟಿ, ಹಲಸಿನ ಬೇಳೆ ಏನೇನೋ ತಿನ್ನುತ್ತಿದ್ದರು. ಇಂಥ ಕಷ್ಟಕಾಲದಲ್ಲಿ ಶ್ಯಾನುಭಾಗರು ಪಡಿತರ ವ್ಯವಸ್ಥೆಯಲ್ಲಿ ಸಿಗುತ್ತಿದ್ದ ಆಹಾರ ವಸ್ತುಗಳನ್ನು ಅದರ ಅಗತ್ಯವಿಲ್ಲದವರಿಂದ ಪಡೆದು ಅಗತ್ಯವಿದ್ದ ಕುಟುಂಬಗಳಿಗೆ ಹಂಚಿಕೊಡುವಲ್ಲಿ ಮಾಡಿದ ಸಾಹಸ ಕಾರ್ಯವಂತೂ ಅವಿಸ್ಮರಣೀಯ. ಇಂದಿಗೂ ಆ ಕುಟುಂಬಗಳವರು ಅವರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

ಮದುವೆ ಮುಂಜಿಗಳು ಮನೆಯಂಗಳದಲ್ಲೇ ನಡೆಯುತ್ತಿದ್ದ ಕಾಲವದು. ಶ್ಯಾನುಭಾಗರ

ಮನೆಯಲ್ಲಿ ಮೇ ತಿಂಗಳ ಬಿರು ಬೇಸಗೆಯಲ್ಲಿ 3 ಫರ್ಲಾಂಗ್ ದೂರದ ಬಾವಿಯಿಂದ ನೀರು ಹೊತ್ತು ತಂದು ಸಂಭ್ರಮದಿಂದ ಜರಗಿದ ಮದುವೆಗಳೆಷ್ಟೋ ! ಮುಂಜಿಗಳೆಷ್ಟೋ ! ಇದಕ್ಕೆಲ್ಲಾ ಜೀವಕ್ಕೆ ಜೀವಕೊಟ್ಟು ಸಹಕರಿಸುವ ಆಪ್ತೇಷ್ಟರ ಪಡೆಯಿದ್ದುದೇ ಮುಖ್ಯ ಕಾರಣ. ತನ್ನ ಸ್ವಂತ ಶಕ್ತಿಯಿಂದ ಆಪ್ತರ ನೆರವಿನಿಂದ ಸಂಸಾರದ ಜವಾಬ್ದಾರಿಗಳನ್ನು ನಿಭಾಯಿಸಿ ಎಲ್ಲರೂ ಅವರವರ ನೆಲೆ ಕಂಡುಕೊಳ್ಳಲು ಕಾರಣರಾದವರು ಅವರು.

**ಶ್ಯಾನುಭಾಗರಾಗಿ :** ತನ್ನ ವೃತ್ತಿಯಲ್ಲಿ ಯಾರಿಗೂ ತೊಂದರೆಯಾಗದಂತೆ ಸತ್ಯಧರ್ಮಕ್ಕೆ ಸರಿಯಾಗಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಮಹಾಸ್ವಾಭಿಮಾನಿ. ಶಿಸ್ತು, ಸಮಯ ಪಾಲನೆ ನಡೆ ನುಡಿಯಲ್ಲಿ ಅಚ್ಚುಕಟ್ಟು ಸ್ಪಷ್ಟತೆಗೆ ಹೆಸರಾದವರು. ಜಮಾಬಂದಿ ಎಂದರೆ ಶ್ಯಾನುಭಾಗರಿಗೆ ಪರೀಕ್ಷೆಯ ಸಮಯ, ಬೆವರುವ ಕಾಲ. ಆದರೆ ಪದ್ಮನಾಭಯ್ಯನರು ಇದಕ್ಕೆ ತಲೆಕೆಡಿಸಿಕೊಂಡವರೇ ಅಲ್ಲ. ಬೆಳಗ್ಗೆ ತಾಯಿ ಗೌರಮ್ಮನವರಿಗೆ ನಮಸ್ಕರಿಸಿ; ಜಮಾ ಬಂದಿಗೆ ಹೋಗುವ ವಿಷಯ ತಿಳಿಸುತ್ತಿದ್ದರು. ಸಾಯಂಕಾಲ ಮನೆಗೆ ಹಿಂದಿರುಗಿ 'ಎಲ್ಲಾ ಸರಿಯಾಯಿತಮ್ಮಾ' ಎಂದು ಮತ್ತೊಮ್ಮೆ ನಮಸ್ಕರಿಸುತ್ತಿದ್ದರು. ಅವರ ಮನೆ ಅತಿಥಿ ಅಭ್ಯಾಗತರಿಂದ ಸದಾ ಗಿಜಿಗುಟ್ಟುತ್ತಿತ್ತು. ಪತ್ನಿ ಯಮುನಮ್ಮ ನಗುಮೊಗದಿಂದಲೇ ಎಲ್ಲವನ್ನೂ ನಿಭಾಯಿಸುತ್ತಿದ್ದರು.

ಬೆಂಚ್ ಕೋರ್ಟು ಶ್ಯಾನುಭಾಗರ ಕಾರ್ಯಾಲಯ. ಇಲ್ಲಿ ಶ್ಯಾನುಭಾಗಿಕೆ ಕೆಲಸದ ಜೊತೆಗೆ ನ್ಯಾಯ ತೀರ್ಮಾನ, ಕೌಟುಂಬಿಕ ಕಲಹಗಳ ತೀರ್ಮಾನ, ಗಡಿ ನಿರ್ಣಯ, ವಿಷಯ ವಿಮರ್ಶೆ, ಪಾಲುಪಟ್ಟಿಯಂಥ ಪ್ರಮುಖ ಕಾರ್ಯಗಳೂ ನಡೆಯುತ್ತಿದ್ದವು. ಎಲ್ಲಾ ವಿಚಾರಗಳಲ್ಲೂ ಇವರ ಮಾತೇ ನಿರ್ಣಾಯಕವಾಗಿತ್ತು. ಬರಿಯ ಒಂದು ಬೀಡವನ್ನೇ ಉಡುಗೊರೆಯಾಗಿ ಸ್ವೀಕರಿಸಿ ಕಡು ಬಡವನಿಗೂ ಕೆಲಸ ಮಾಡಿಕೊಟ್ಟವರು ಇವರು. ನಾಳೆ ಬಾ ಎಂಬ ಮಾತೇ ಇಲ್ಲದೆ ತತ್ಕ್ಷಣ ಸ್ಪಂದಿಸಿದವರು. ಬಂದರು ಕಾರ್ಯಾರಂಭಕ್ಕೆ ಮೊದಲು ಪಣಂಬೂರಿನ ಗದ್ದೆಗಳಲ್ಲಿ ಯಥೇಚ್ಛ ಕಬ್ಬು, ಭತ್ತ, ತರಕಾರಿಗಳನ್ನು ಬೆಳೆಸುತ್ತಿದ್ದ ಕಾರಣ ಊರವರು ಶ್ಯಾನುಭಾಗರ ಮನೆಗೆ ಅಭಿಮಾನದಿಂದ ಅಕ್ಕಿ, ಬೆಲ್ಲ, ತರಕಾರಿ, ತೆಂಗಿನ ಕಾಯಿಗಳನ್ನು ಹೊತ್ತು ತರುತ್ತಿದ್ದರು. ಸರಕಾರವು 1963ರಲ್ಲಿ ಶ್ಯಾನುಭಾಗರ ಪದವಿ ತೆಗೆದು ವಿಲೇಜ್ ಎಕೌಂಟೆಂಟರನ್ನು ನೇಮಿಸಿದಾಗ ಪದ್ಮನಾಭಯ್ಯನವರು ನಿವೃತ್ತಿ ಘೋಷಿಸಿದರು.

**ಧಾರ್ಮಿಕ ಸೇವೆ :** ನಂದನೇಶ್ವರನ ಅನನ್ಯ ಭಕ್ತ. ಪ್ರತಿದಿನ ಬೆಳಗ್ಗೆ ಸ್ನಾನ ಮಾಡಿ, ಜಪ ಪೂಜೆ ಮುಗಿಸಿ ಶ್ರೀ ನಂದನೇಶ್ವರನ ದರ್ಶನದ ಬಳಿಕವಷ್ಟೇ ಉಪಾಹಾರ ಸೇವಿಸುತ್ತಿದ್ದರು. ದೇವಳದ ಎಲ್ಲಾ ಕಾರ್ಯಕ್ರಮಗಳೂ ಇವರ ಮುಂದಾಳುತ್ವದಲ್ಲೇ ನಡೆಯುತ್ತಿದ್ದುವು. ಜಾತ್ರೆ, ದೀಪೋತ್ಸವ, ಹೂವಿನ ಪೂಜೆ, ತುಲಸೀ ಪೂಜೆ, ಕದಿರು ಕಟ್ಟುವ ಕಾರ್ಯಕ್ರಮ, ವಾರ್ಷಿಕ ಭಜನೆ ಹೀಗೆ ಒಂದಲ್ಲ – ಎರಡಲ್ಲ. 9 ದಿನಗಳ ಜಾತ್ರೋತ್ಸವದ ಒಂದು ತಿಂಗಳ ಮೊದಲು, ಜಾತ್ರೆ ಮುಗಿದ 15 ದಿನಗಳವರೆಗೆ ಇವರಿಗೆ ಬಿಡುವಿರಲಿಲ್ಲ. ಚಪ್ಪರದ ಕೆಲಸ, ಪಾತ್ರೆ ಪಗಡಿಗಳು, ಅಂಗಡಿ ಸಾಮಾನುಗಳ ಸ್ವಚ್ಛತೆ, ಮಹಾರಥ, ಸೂರ್ಯ ಮಂಡಲ, ಚಂದ್ರಮಂಡಲ, ಪಾಲಕಿಗಳನ್ನು ಹೊರತೆಗೆದು ಸ್ವಚ್ಛ ಮಾಡಿ ಸಿಂಗರಿಸುವುದು. ಇವೆಲ್ಲಾ ಹೊರಗಿನ ಕೆಲಸ. ಹಾಗೆಯೇ ಜಾತ್ರೆಯ ನಿತ್ಯಕ್ರಮಗಳು, ಪೂಜೆ ಪುನಸ್ಕಾರಗಳು, ಬಲಿಸೇವೆ, ಪಾಲಕಿ ಸೇವೆ, ಚಾಮರಸೇವೆ ರಥಗಳ ನಿರ್ವಹಣೆ – ಈ ಎಲ್ಲಾ

ಕಾರ್ಯಗಳಿಗೆ ಆಡಳಿತ ಮೊಕ್ತೇಸರರ ಸಹಿತ ಪ್ರತಿಯೊಬ್ಬರಿಗೂ ಅವರವರ ಕರ್ತವ್ಯದ ಅರಿವು ಮೂಡಿಸಿ, ಸಾಂಗವಾಗಿ ನೆರವೇರುವಂತೆ ಮಾಡುತ್ತಿದ್ದರು. ದೇವಸ್ಥಾನದ ಕೆಲಸಗಳಿಗೆ ಒಬ್ಬರನ್ನೇ ನಂಬಿ ಕೂಡುವಂತಿಲ್ಲ. ಆಶೌಚಾರಿಗಳು ಇಂಥವರಿಗೆ ತೊಂದರೆಯಾದಾಗ ಇತರರನ್ನು ಹುಡುಕಿ ತರಬೇತಿ ಕೊಟ್ಟು ರೆಡಿಯಾಗಿಸುತ್ತಿದ್ದರು. ದೇವರನ್ನು ಹೊತ್ತು ರಥವನ್ನು ಏರುವುದು ಬಹಳ ಪ್ರಯಾಸದ ಕೆಲಸ. ಇದಕ್ಕಾಗಿ ನೀರಿನ ಕೊಡವನ್ನು ತಲೆ ಮೇಲೆ ಹೊರಿಸಿ, ರಾತ್ರಿಯ ಹೊತ್ತು ಅಭ್ಯಾಸ ಮಾಡಿಸುತ್ತಿದ್ದರಂತೆ. ಜಾತ್ರೆಯ ಸಮಯದಲ್ಲಿ ಪಸ್ಕ ವಸೂಲಿಯ ಕೆಲಸವೂ ಇವರದೇ. ತುಲಾಭಾರ ಕಾರ್ಯಕ್ರಮದಲ್ಲೂ ಇವರ ಮುಂದಾಳುತ್ವ ಇತ್ತು. ವಯೋವೃದ್ಧರಾಗಿದ್ದ ಕೇಶವತಂತ್ರಿಗಳು ತಂತ್ರ ತೂಗುವ ಕೈಬಟ್ಟಲನ್ನು ಪ್ರಾಯದಲ್ಲಿ ಚಿಕ್ಕವನಾಗಿದ್ದರೂ ಅಜ್ಜನ ಕೆಲಸವನ್ನು ಉತ್ಸಾಹ ಶ್ರದ್ಧೆಗಳಿಂದ ಗಮನಿಸುತ್ತಿದ್ದ ತಮ್ಮ ಮೊಮ್ಮಗ ನರಸಿಂಹ ತಂತ್ರಿಯವರಿಗೆ ಒಪ್ಪಿಸುವಲ್ಲಿ ಶ್ಯಾನುಭಾಗರ ಸಾಧನೆ ಇತ್ತು ಎಂಬುದನ್ನು ವೇದಮೂರ್ತಿ ತಂತ್ರಿಗಳು ಈಗಲೂ ಜ್ಞಾಪಿಸುತ್ತಿರುತ್ತಾರೆ. ಕುಡುಪು ಅನಂತ ಪದ್ಮನಾಭ ದೇವಸ್ಥಾನದಲ್ಲಿ ಹಲವು ವರ್ಷಗಳ ಕಾಲ ಶ್ರೀ ದೇವರ ಜಲವಿಹಾರದ ದೋಣಿಯನ್ನು ಶ್ಯಾನುಭಾಗರೇ ನಡೆಸುತ್ತಿದ್ದರು.

**ಸಮಾಜ ಸೇವೆ :** ಇವರು ಜಾತಿ ಮತ ಭೇದವಿಲ್ಲದೆ ಎಲ್ಲರನ್ನೂ ಗೌರವಿಸುತ್ತಿದ್ದರು. ಊರ ಹುಡುಗರು ಸ್ವಾವಲಂಬಿಗಳಾಗಿ ಬೆಳೆಯುವಲ್ಲಿ ಮುತುವರ್ಜಿ ವಹಿಸಿದ್ದರು. ಅವರಿಗೆ ಈಜು, ಸೈಕಲ್ ಸವಾರಿಗೆ ಪ್ರೋತ್ಸಾಹಿಸುತ್ತಿದ್ದರು. ಅಮಾವಾಸ್ಯೆಯ ದಿನ ಸಮುದ್ರ ಸ್ನಾನಕ್ಕೆ ಕರೆದೊಯ್ಯುತ್ತಿದ್ದರು. ನಮ್ಮ ಸಮಾಜದ ಯಾವ ವ್ಯಕ್ತಿಯಾದರೂ ಇಹಲೋಕ ತ್ಯಜಿಸಿದ ತತ್ ಕ್ಷಣ ಎಲ್ಲಾ ವ್ಯವಸ್ಥೆ ಮಾಡುವ ದೊಡ್ಡ ಗುಣ ಇವರದು. ಇತರರಿಗೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡಿಸುತ್ತಿದ್ದರು. ಯುವಕರು ಯಾವುದೇ ದುಶ್ಚಟಗಳಿಗೆ ಬಲಿಯಾಗದಂತೆ ನಿಗಾ ವಹಿಸಿದ್ದರು. ಈ ಕುರಿತು ಮುಂಬಯಿ ವೆಂಕಟ್ರಾಯ ಐತಾಳರು ಆಗಾಗ ಹೇಳುತ್ತಿದ್ದ ಮಾತು ಜ್ಞಾಪಕಕ್ಕೆ ಬರುತ್ತದೆ. ನಮ್ಮ ತಲೆಮಾರಿನವರೆಲ್ಲರೂ ಇಂದು ಈ ಸುಸ್ಥಿತಿಯಲ್ಲಿರಲು ಪಣಂಬೂರು ಶ್ಯಾನುಭಾಗರೇ ಕಾರಣ. ಅವರ ಕಾಲದಲ್ಲಿ ಶಿಸ್ತು ಇತ್ತು. ಅಂಕೆ ಇತ್ತು. ಹೀಗಿತ್ತು ಅವರ ಮಾತು. ಹುಡುಗಿಯರಿಗೆ ಯೋಗ್ಯ ವರನನ್ನು ಹುಡುಕಿ ಮದುವೆ ಕುದುರಿಸುತ್ತಿದ್ದರು. ಮದುವೆಯಲ್ಲಿ ಓಡಾಟ, ಸುಧಾರಿಕೆಯೂ ಅವರದೇ. ಉಳ್ಳವರಿಂದ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ವ್ಯವಸ್ಥೆ ಮಾಡುತ್ತಿದ್ದರು. ವರ್ಷಕ್ಕೊಮ್ಮೆ ಮಕ್ಕಳನ್ನು ಸೇರಿಸಿ ದೇವಸ್ಥಾನದ ಸುತ್ತಮುತ್ತ ಸ್ವಚ್ಛ ಮಾಡುವುದು, ದೇವಳದ ಕೆರೆಯ ಕೆಸರು ತೆಗೆಯುವುದು. ಇವಲ್ಲದೆ ಇನ್ನೆಷ್ಟೋ ಸೇವೆಗಳು ಸಮಾಜಕ್ಕೆ ಸಂದಿದ್ದವು. ಕೊನೆಯ ಒಂದೆರಡು ವರ್ಷ ದೇವಸ್ಥಾನದ ಲೆಕ್ಕಾಚಾರದ ಬಗ್ಗೆ ಬೇಸರಗೊಂಡು ಹಾಗೂ ತನ್ನ ಆರೋಗ್ಯದ ದೃಷ್ಟಿಯಿಂದ ಹಿಂದಕ್ಕೆ ಸರಿದರು.

**ಭಜನಾಸಕ್ತಿ:** ಭಜನೆಯು ಒಂದು ಆದರದ ಪ್ರವೃತ್ತಿಯಾಗಿತ್ತು. ಶ್ರೀ ನಂದನೇಶ್ವರ ದೇವಳದ ಪ್ರಮುಖ ಕಾರ್ಯನಿರ್ವಾಹಕರಾಗಿದ್ದ ಇವರಲ್ಲಿ ನಂದನೇಶ್ವರ ಭಜನಾಮಂಡಳಿಯ ಕಾರ್ಯಕ್ರಮಗಳ ಪಟ್ಟಿ ಸಾಕಷ್ಟು ದೊಡ್ಡದಾಗಿಯೇ ಇತ್ತು. ವಾರ್ಷಿಕ ಭಜನೆ, ಸವಾರಿ ಭಜನೆ, ವಾರದ ಭಜನೆ, ಅಮಾವಾಸ್ಯೆ ಭಜನೆ, ಶಿವರಾತ್ರಿ ಭಜನೆ, ಗ್ರಹಣ ಭಜನೆ ಅಲ್ಲದೆ 9 ದಿನದ ಜಾತ್ರೆಯಲ್ಲಿ ಪಾಲಕಿ ಸುತ್ತಿನ ಭಜನೆ, ತುಲಸೀಪೂಜೆಯ ಭಜನೆ ಇವೆಲ್ಲಾ ಶಿಸ್ತುಬದ್ಧವಾಗಿ ನಡೆಯಬೇಕಿತ್ತು. ಎಲ್ಲಾ

ಹಾಡುಗಳು ಕಂಠಪಾಠವಿದ್ದರೂ ಕೆಲವೇ ಹಾಡುಗಳನ್ನು ಹಾಡುತ್ತಿದ್ದರು. ತುಲಸೀ ಪೂಜೆಯ ದಿನ ರಾತ್ರಿ ಸುಮಾರು 60-65 ಮನೆಗಳಲ್ಲಿ ನಡೆಯುವ ಭಜನೆಗಳ ಪ್ರಥಮ ಉಸ್ತುವಾರಿ ಇವರದೇ ಆಗಿತ್ತು. ಶ್ಯಾನುಭಾಗರು ಭಜನೆ ಹಾಡಲು ಆರಂಭಿಸಿದ ತತ್‌ಕ್ಷಣ ಅಲ್ಲಲ್ಲಿ ಆಡುತ್ತಿದ್ದ ಮಕ್ಕಳು ಓಡೋಡಿ ಬಂದು ಭಜನೆಗೆ ಸೇರುತ್ತಿದ್ದರು. ಕಾರಣ, ಇವರು ಸ್ವತಃ ಚೆನ್ನಾಗಿ ಕುಣಿದು ಮಕ್ಕಳನ್ನು ಕುಣಿಸುತ್ತಿದ್ದರು. ಕಳವಾರು ದೇವಸ್ಥಾನದ 'ಶ್ರೀಮದ್ಧರಿನಾಮ ಸಂಕೀರ್ತನಾ ಮಂಡಳಿ'ಯವರು ತುಲಸೀ ಪೂಜೆಯ ಹಾಡಿಗೆ ತಾಳದೊಂದಿಗೆ ವಿಶೇಷ ಹೆಜ್ಜೆ ಹಾಕಿ ಕುಣಿಯುವುದನ್ನು ತಾವೂ ಕಲಿತು ನಮ್ಮವರಿಗೂ ಕುಣಿಯಲು ಪ್ರೇರಿಸುತ್ತಿದ್ದರು. ಆಸುಪಾಸಿನ ದೇವಸ್ಥಾನಗಳಲ್ಲಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಣಂಬೂರು, ಬದವಿದೆ ವಿಶ್ವನಾಥ ದೇವಸ್ಥಾನ, ಬದವಿದೆ ಗಣಪತಿ ದೇವಸ್ಥಾನ, ಕುಳಾಯಿ ವಿಷ್ಣುಮೂರ್ತಿ ದೇವಸ್ಥಾನ ಮತ್ತು ಇತರ ದೇವಸ್ಥಾನಗಳಲ್ಲಿ ವಾರ್ಷಿಕ ಭಜನೆಯಂದು ತಮ್ಮ ಆತ್ಮೀಯರನ್ನು ಕೂಡಿಕೊಂಡು ಕಾರ್ಯಕ್ರಮ ನೆರವೇರಿಸುತ್ತಿದ್ದರು.

**ಕಲಾಸಕ್ತಿ :** ಕಲಾವಿದ ಕಲಾಭಿಮಾನಿ ಕಲಾಪೋಷಕರಾಗಿದ್ದರು ಶ್ಯಾನುಭಾಗರು. ಪಣಂಬೂರಿನಲ್ಲಿ ವರ್ಷಕ್ಕೊಮ್ಮೆ ನಾಟಕ, ಮಳೆಗಾಲದಲ್ಲಿ ಯಕ್ಷಗಾನ ತಾಳಮದ್ದಳೆ ಕೂಟಗಳಿರುತ್ತಿದ್ದವು. ಇಲ್ಲಿ ಊರಿನ ಕಲಾವಿದರನ್ನೇ ಸೇರಿಸಿಕೊಳ್ಳಲಾಗುತ್ತಿತ್ತು. ಇವರನ್ನು ನೋಡಿ ಕಲಿತು ಯುವ ಪೀಳಿಗೆಯು ಸಹಜವಾಗಿ ಮುಂದೆ ಬರುತ್ತಿತ್ತು. ಇದಕ್ಕೆ ಹೆಚ್ಚಿನ ತಯಾರಿ ಬೇಕಿರಲಿಲ್ಲ. ಚಂಡೆ ಮದ್ದಳೆಗಳನ್ನು ಹೊಂದಿಸುವುದೇ ದೊಡ್ಡ ಕೆಲಸ. ನಂದನೇಶ್ವರ ನಾಟಕ ಸಂಘದವರಿಂದ ವರ್ಷಕ್ಕೊಮ್ಮೆ ನಡೆಯುವ ನಾಟಕ ಪ್ರದರ್ಶನಕ್ಕೆ ಒಂದು ತಿಂಗಳ ಮೊದಲೇ ತಾಲೀಮು ನಡೆಸಲಾಗುತ್ತಿತ್ತು (ಪಣಂಬೂರು ಶಾಲೆಯಲ್ಲಿ). ಅಭ್ಯಾಸದ ದಿನಗಳಲ್ಲಿ ಕಾಫಿ ತಿಂಡಿಗಳ ಸಮಾರಾಧನೆಯೂ ಇರುತ್ತಿತ್ತು. ಹಾಗಾಗಿ ನಾಟಕಗಳಲ್ಲಿ ಪಾತ್ರ ವಹಿಸುವ ಚಿಕ್ಕಮಕ್ಕಳು ತಪ್ಪದೆ ಬರುತ್ತಿದ್ದರು. ದೇವಸ್ಥಾನದ ಕಾರ್ಯಕ್ರಮಗಳ ಸಲುವಾಗಿ ನಾಟಕ ಪ್ರದರ್ಶನವಿದ್ದರೆ ಪ್ರವೇಶಕ್ಕೆ ಶುಲ್ಕ ವಿಧಿಸಿ ಆ ಮೊತ್ತವು ದೇವರ ಕಾರ್ಯಕ್ರಮಕ್ಕೇ ವಿನಿಯೋಗವಾಗುವಂತೆ ನೋಡಿಕೊಳ್ಳುತ್ತಿದ್ದರು. ಮಕ್ಕಳ ಉತ್ಸಾಹವನ್ನು ಕಂಡು 1953ರಲ್ಲಿ ಯಕ್ಷಗಾನ ಬಯಲಾಟಕ್ಕಾಗಿ ಅಭ್ಯಾಸ ಪ್ರಾರಂಭವಾಗಿ ಸುಮಾರು 40-50 ವಿದ್ಯಾರ್ಥಿಗಳ ಪ್ರಥಮ ಪ್ರದರ್ಶನವೇ 'ಸಂಪೂರ್ಣ ರಾಮಾಯಣ'. ಇದರಲ್ಲಿ ಶ್ಯಾನುಭಾಗರು ಕುಂಭಕರ್ಣನ ಪಾತ್ರ ಮಾಡಿದ್ದರು. ಆರಂಭದ ಈ ಹವ್ಯಾಸಿ ಯಕ್ಷಗಾನ ತಂಡವು ಮುಂದೆ ಊರು ಪರವೂರುಗಳ ಹಲವು ಹವ್ಯಾಸಿ ತಂಡಗಳ ಉದಯಕ್ಕೆ ಕಾರಣವಾಯಿತು ಎಂಬುದು ಉಲ್ಲೇಖನೀಯ. ಹಾಗೆಯೇ ಹಲವರು ಯಕ್ಷಗಾನ ಪಟುಗಳು ಇಲ್ಲಿ ರೂಪುಗೊಂಡರು. ಇದೇ 'ನಂದನೇಶ್ವರ ಯಕ್ಷಗಾನ ನಾಟಕ ಮಂಡಳಿ' ಮುಂದೆ 'ನಂದನೇಶ್ವರ ಯಕ್ಷಗಾನ ಮಿತ್ರಮಂಡಳಿ' ಆಯಿತು. 1966ರಲ್ಲಿ ಇವರ ನಿರ್ದೇಶನದ 'ತುಲಸೀ ಜಲಂಧರ' ನಾಟಕದ ಕೊನೆಯಲ್ಲಿ ಅನಾರೋಗ್ಯದಿಂದ ಕುಸಿದುಬಿದ್ದ ಇವರು ಮತ್ತೆ ಚೇತರಿಕೆ ಕಾಣಲಿಲ್ಲ.

**ಹಣಕಾಸಿನ ಲೆಕ್ಕಾಚಾರ :** ಹಣಕಾಸಿನ ಲೆಕ್ಕಾಚಾರದಲ್ಲಿ ಶ್ಯಾನುಭಾಗರು ಬಹಳ ಕಟ್ಟುನಿಟ್ಟಿನವರು. ನಿಷ್ಠುರವಾದಿ. ಸಾರ್ವಜನಿಕ ಹಣ ಎಲ್ಲಿಯೂ ಪೋಲಾಗದಂತೆ ಮತ್ತು ಯಾರಿಗೂ ಕಡಿಮೆಯಾಗದಂತೆ ಎಚ್ಚರವಹಿಸುತ್ತಿದ್ದರು. ಸಂಗ್ರಹವಾದ ಹಣದಲ್ಲಿ ಉಳಿಕೆಯಾದರೆ ದೇವರ ಭಂಡಾರಕ್ಕೆ ಹಾಕುತ್ತಿದ್ದರು. ಕಡಿಮೆಯಾದರೆ - ಆ ಮೊತ್ತವನ್ನು ನಾಲ್ಕು ಜನರಿಗೆ ಪಾಲು ಮಾಡಿ

ಸಂಗ್ರಹ ಮಾಡಿ, ಲೆಕ್ಕಾಚಾರ ಚುಕ್ತಾ ಮಾಡುವ ಬಹಳ ವಿಶೇಷ ಗುಣ ಇವರದಾಗಿತ್ತು. ಗಾದೆಯ ಮಾತಿನಂತೆ 'ಬಿಸಾಕುವ ವಸ್ತುವಾದರೂ ಅದರ ಲೆಕ್ಕ ಬೇಕು' ಎಂಬ ವಿಚಾರ ಅವರದಾಗಿತ್ತು. ಆದ್ದರಿಂದಲೇ ಯಾವನೇ ವ್ಯಕ್ತಿ ಲೆಕ್ಕಾಚಾರದ ಬಗ್ಗೆ ಇವರಲ್ಲಿ ಮಾತನಾಡಲು ಹೆದರುತ್ತಿದ್ದರು. ನಾಲ್ಕು ಜನರ ಅಭಿಪ್ರಾಯ ತಿಳಿದು ಕಾರ್ಯಪ್ರವೃತ್ತರಾದ ಮೇಲೆ ಆ ತೀರ್ಮಾನವನ್ನು ಬದಲು ಮಾಡಲು ಬಹಳ ಕಷ್ಟ ಪಡುತ್ತಿದ್ದರು.

**ಗೆಳೆಯರ ಬಳಗ :** ಶ್ಯಾನುಭಾಗರಿಗೆ ಸ್ನೇಹಿತರೂ, ಬೆಂಬಲಿಗರೂ ಆಗಿದ್ದ ಅವರ ಸಮಕಾಲೀನ ಅಭಿಮಾನಿಗಳ ದೊಡ್ಡ ಬಲವಿತ್ತು. ವಕೀಲ ಪಿ. ಶ್ರೀನಿವಾಸರಾಯರು, ಬೆಟ್ಟಿನ ರಂಗ ಐತಾಳರು, ಪಿ. ನಾರಾಯಣ ಹೆಬ್ಬಾರ್ರು, ಪಿ. ಸಿ. ಶೇಷಪ್ಪಯ್ಯ, ಎಂ. ಆರ್. ಪಣಂಬೂರು, ಪೊಳಲಿ ಶಂಕರ ನಾರಾಯಣ ಶಾಸ್ತ್ರಿಗಳು, ಡಾ। ಈಶ್ವರ ಶರ್ಮರು, ಕೊಡಿಮರ ತಿಮ್ಮಪ್ಪಯ್ಯ, ಸಣ್ಣ ತಿಮ್ಮಪ್ಪಯ್ಯ, ಬಾಬು ಯಾನೆ ನಾರಾಯಣ ಐತಾಳರು, ಮುಂಬಯಿ ರಂಗ ಐತಾಳರು, ಪಣಂಬೂರು ಕೃಷ್ಣ ಐತಾಳರು, ಎಚ್. ಬಿ. ನಾರಾಯಣ ರಾವ್, ಪಣಂಬೂರು ವೆಂಕಪ್ಪ ಪೂಜಾರಿ, ಶಾಂತ ಶೆಟ್ಟಿ, ದೆಪ್ಪುಣಿಗುತ್ತು ದಾಸ ಶೆಟ್ಟಿ, ಬೇಜಮ್ ನಾಯ್ಕ, ಕೆ. ಕೃಷ್ಣಯ್ಯ ಮಾಸ್ಟ್ರು, ಚಿತ್ರಾಪುರ ಶ್ರೀನಿವಾಸ ಆಚಾರ್ಯ, ವಕೀಲ್ ಶ್ರೀನಿವಾಸ ರಾವ್, ಪಿ. ರಾಘವ ರಾವ್, ರಝಾಕ್ ಸಾಹೇಬ್ ಇವರೆಲ್ಲಾ ಕೀರ್ತಿಶೇಷರಾಗಿದ್ದಾರೆ.

ಶ್ಯಾ. ಎಂ. ಪದ್ಮನಾಭಯ್ಯ ಇವರ ಶಿಸ್ತು, ಶ್ರದ್ಧೆ, ಗೌರವ, ಆದರ, ಕಾರ್ಯತತ್ಪರತೆ, ಹಣಕಾಸಿನಲ್ಲಿ ಶುದ್ಧಹಸ್ತ (ಶುದ್ಧ ಲೆಕ್ಕಾಚಾರ) ಪ್ರೋತ್ಸಾಹ ಮತ್ತು ಆಸಕ್ತಿಯು ಮುಂದಿನ ಪೀಳಿಗೆಗೆ ಆದರ್ಶಪ್ರಾಯವಾಗಿದೆ.

**ಶ್ರೀಮತಿ ಜಯಲಕ್ಷ್ಮೀ ಕಂದೂರು**

★★★★

ಗೀತಾ ಚಿಂತನೆ

# ಗೀತೆಯಲ್ಲಿ ಭಕ್ತಿ

ಮಾನವರಿಗೆ ಆಧ್ಯಾತ್ಮಿಕದಲ್ಲಿ ಪ್ರಗತಿಯನ್ನು ಹೊಂದಲು ಅತಿ ಸುಲಭವಾದ, ಸರಳವಾದ ಒಂದೇ ಮಾರ್ಗವೆಂದರೆ ಭಕ್ತಿ. ಭಕ್ತಿಗೆ ಪಾಂಡಿತ್ಯವಾಗಲೀ, ತಪಸ್ಸಾಗಲೀ, ತೀಕ್ಷ್ಣವಾದ ಬುದ್ಧಿಯಾಗಲೀ ಬೇಕಿಲ್ಲ. ಅದಕ್ಕೆ ಬೇಕಾದುದು ಭಾವದಿಂದ ಕೂಡಿದ ಆತ್ಮ ನಿವೇದನೆ ಮತ್ತು ಭಗವತ್ ಚಿಂತನೆ ಮಾತ್ರ. ಭಕ್ತಿ ಮಾರ್ಗವು ಇತರ ಮಾರ್ಗಗಳಿಗಿಂತ ಸುಲಭ ಮತ್ತು ಸರಳ.

ಮನುಷ್ಯನು ಕಷ್ಟಕ್ಕೆ ಸಿಲುಕಿದಾಗ ಭಗವಂತನಲ್ಲಿ ಮೊರೆ ಇಡುತ್ತಾನೆ, ಪ್ರಾರ್ಥಿಸುತ್ತಾನೆ. ಪ್ರಾರ್ಥನೆಯೆಂದರೆ ಹೃದಯವನ್ನು ಬಿಚ್ಚಿ ದುಃಖಗಳನ್ನು ಪರಮಾತ್ಮನಲ್ಲಿ ಹೇಳಿಕೊಳ್ಳುವುದು, ಆತ್ಮ ನಿವೇದನೆ ಮಾಡುವುದು ಮತ್ತು ಎಲ್ಲವನ್ನು ಆತನಿಗೇ ಒಪ್ಪಿಸುವುದು. ಆದರೆ ಈ ತರಹ ನಿವೇದನೆಯು ನಿಷ್ಕಪಟ ಹೃದಯದಿಂದ 'ನೀನೇ ಗತಿ' ಎಂಬ ಪೂರ್ಣ ನಂಬಿಕೆಯಿಂದ ಇರಬೇಕು. ಇದು ಸಾಮಾನ್ಯವಾಗಿ ಬರಬೇಕಾದರೆ ಮನುಷ್ಯರು ಅಸಹಾಯಕ ಪರಿಸ್ಥಿತಿಗೆ ಬಂದಿರಬೇಕು. ಅಂತಹ ಸಂದರ್ಭದಲ್ಲಿ ಭಗವಂತನನ್ನು ಏನೂ ಕೇಳಬೇಕಾಗಿಲ್ಲ. ನಿಮಗೆ ಏನು ಬೇಕು ಎಂಬುದು ನಿಮಗಿಂತಲೂ ಹೆಚ್ಚಾಗಿ ಆತನಿಗೇ ತಿಳಿದಿರುತ್ತದೆ.

**'ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವಚ ।**
**ನಿರ್ಮನೋ ನಿರಹಂಕಾರ ; ಸಮ ದುಃಖ ಸುಖಃ ಕ್ಷಮೀ ॥**
**ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಡನಿಶ್ಚಯಃ ।**
**ಮಯ್ಯರ್ಪಿತ ಮನೋ ಬುದ್ಧಿರ್ಯೋಃ ಮದ್ಭಕ್ತಃ ಸಮೇ ಪ್ರಿಯಃ ॥೧೨ ಅ॥**

'ಯಾವನು ಸರ್ವ ಪ್ರಾಣಿಗಳನ್ನು ದ್ವೇಷಿಸುವುದಿಲ್ಲವೋ ಮಿತ್ರ ಭಾವದಿಂದ ಕೂಡಿರುವನೋ, ಕರುಣೆಯುಳ್ಳವನೋ, ಅಹಂಕಾರ ಮಮಕಾರಗಳಿಲ್ಲದವನೋ, ಸುಖ ದುಃಖಗಳಲ್ಲಿ ಸಮನಾಗಿರುವನೋ, ಕ್ಷಮಾಶೀಲನೋ, ಯಾವಾಗಲೂ ಸಂತುಷ್ಟನೋ, ಯೋಗಿಯೋ, ಯತಾತ್ಮನೋ, ದೃಡ ನಿಶ್ಚಯನೋ ನನ್ನಲ್ಲಿ ಅರ್ಪಿಸಲ್ಪಟ್ಟ ಮನೋ ಬುದ್ಧಿಯುಳ್ಳವನೋ, ನನ್ನ ಭಕ್ತನೋ ಅವನು ನನಗೆ ಪ್ರಿಯನು'

ಶ್ರೀ ಕೃಷ್ಣನು ತನ್ನ ಭಕ್ತನ ಗುಣಗಳನ್ನು ಇಲ್ಲಿ ಹೇಳುತ್ತಾನೆ. ಭಕ್ತಿಯಿಂದ ಪರಮಾತ್ಮನನ್ನು ಪ್ರೀತಿಸುವವನನ್ನು ಯಾರೂ ದ್ವೇಷಿಸುವುದಿಲ್ಲ. ಅವನನ್ನು ದ್ವೇಷಿಸುವವನನ್ನೂ ಕೂಡ ಅವನು ಪ್ರೀತಿಸುವನು. ಏಕೆಂದರೆ ದ್ವೇಷ ನಮ್ಮ ಮನಸ್ಸಿನ ಶಕ್ತಿಯನ್ನು ವ್ಯಯ ಮಾಡುವುದು. ಇದರಿಂದ ಯಾವ ವ್ಯಕ್ತಿಯನ್ನು ದ್ವೇಷಿಸುತ್ತೇವೆಯೋ ಅವನಿಗಿಂತ ಹೆಚ್ಚಾಗಿ ಯಾರು ದ್ವೇಷಿಸುತ್ತಾರೆಯೋ ಅವರಿಗೇ ಕೇಡು. ದೇವರನ್ನು ಭಕ್ತಿಯಿಂದ ಪ್ರೀತಿಸುವುದೂ, ಇತರರನ್ನು ದ್ವೇಷಿಸುವುದೂ ಒಟ್ಟಿಗೇ ಹೋಗಲು ಆಗುವುದಿಲ್ಲ. ಆದ್ದರಿಂದ ಅವನು ಸುಖ ದುಃಖಗಳಲ್ಲಿ ಸಮನಾಗಿರುವನು. ಸುಖ ಬಂದರೆ ಹಿಗ್ಗುವುದೂ ಇಲ್ಲ ದುಃಖ ಬಂದರೆ ಕುಗ್ಗುವುದೂ ಇಲ್ಲ. ಸಂಸಾರದಲ್ಲಿ ಯಾರಿಗೇ ಆಗಲೀ ಬರಿ ಸುಖವೇ ಬರುವುದಿಲ್ಲ ಅಥವಾ ಬರೀ ದುಃಖವೇ ಬರುವುದೂ ಇಲ್ಲ. ರಾತ್ರಿಯಾದ

ಮೇಲೆ ಹಗಲು, ಹಗಲಾದ ಮೇಲೆ ರಾತ್ರಿ ಹೇಗೆ ಒಂದಾದ ಮೇಲೊಂದು ಬರುತ್ತಿದೆಯೋ ಅದೇ ರೀತಿ ಸುಖ ದುಃಖಗಳೂ ಬರುತ್ತವೆ. ಒಟ್ಟಿನಲ್ಲಿ ನಿಜವಾದ ಭಕ್ತನು ಜೀವನದಲ್ಲಿ ಯಾವಾಗಲೂ ಸಂತುಷ್ಟ.

ಗೀತೆಯ 18ನೇ ಅಧ್ಯಾಯದಲ್ಲಿ ಪರಮಾತ್ಮನು, ನೀನು ನನ್ನ ಭಕ್ತನಾಗು, ನನ್ನನ್ನೇ ಆರಾಧಿಸುವವನಾಗು. ಆಗ ನೀನು ನನ್ನನ್ನೇ ಸೇರುವೆ ಎಂದು ಹೇಳುತ್ತಾನೆ. ಅಷ್ಟೇ ಅಲ್ಲದೆ ಎಲ್ಲಾ ಧರ್ಮಗಳನ್ನೂ ಪರಿತ್ಯಾಗ ಮಾಡಿ ನನ್ನೊಬ್ಬನನ್ನೇ ಶರಣು ಹೊಂದಿದರೆ ನಾನು ನಿನ್ನನ್ನು ಸರ್ವಪಾಪಗಳಿಂದಲೂ ಪಾರು ಮಾಡುತ್ತೇನೆ ಎಂದು ಹೇಳುತ್ತಾನೆ. ಇದನ್ನು ಮಾಡುವುದು ಹೇಗೆ? ಕಿವಿಯಿಂದ ಅವನ ಮಹಿಮೆಗಳನ್ನು ಕೇಳಬೇಕು. ಬಾಯಿಂದ ಅವನ ಮಹಿಮೆಯನ್ನು ಕೊಂಡಾಡಬೇಕು, ಕಣ್ಣಿಂದ ಆ ಪರಮಾತ್ಮನನ್ನು ನಾವು ನೋಡುವ ಎಲ್ಲಾ ರೂಪಗಳ ಹಿಂದೆಯೂ ನೋಡಬೇಕು. ಮನಸ್ಸೆಲ್ಲವೂ ಅವನನ್ನೇ ತುಂಬಿಕೊಳ್ಳಬೇಕು ಮತ್ತು ನಮ್ಮ ಬುದ್ಧಿಯಿಂದ ಅವನನ್ನು ಎಲ್ಲಾ ವಿಧದಲ್ಲಿಯೂ ಸಮರ್ಥಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಆ ಭಗವಂತನೇ ನಮಗೆ ಕೊಟ್ಟಿರುವ ಕರ್ಮೇಂದ್ರಿಯ ಹಾಗೂ ಜ್ಞಾನೇಂದ್ರಿಯಗಳೆಲ್ಲವೂ ಕೂಡ ಸಾರ್ಥಕವಾಗುವುವು.

ಭಗವಂತನ ಭಕ್ತನಾಗಿರುವವನು ಮಾತ್ರ ಗೀತೆಯಲ್ಲಿ ಪರಮಾತ್ಮನೇ ಕರ್ಮಬಂಧಿತವಾಗಿರುವ ಈ ಪ್ರಪಂಚಕ್ಕೆ ನೀಡಿರುವ ಸೂಕ್ಷ್ಮ ಸಂದೇಶವನ್ನು ಗೌರವಿಸುತ್ತಾನೆ ಮತ್ತು ತನ್ಮೂಲಕ ಇಹದಲ್ಲಿ ಮನಃ ಶಾಂತಿ ಹಾಗೂ ಪರದಲ್ಲಿ ಮುಕ್ತಿಯನ್ನು ಹೊಂದುತ್ತಾನೆ. ಹೇಗೆ ಪ್ರತಿಯೊಂದು ಜೀವಿಯಲ್ಲಿಯೂ ಆ ಜೀವಿಯ ಚೇತನವಾಗಿರುವ ಪರಮಾತ್ಮನ ವಿಭಿನ್ನಾಂಶವಿದೆಯೆಂದು ನಾವು ನಂಬುತ್ತೇವೆಯೋ ಅದೇ ರೀತಿಯಾಗಿ ಇಡೀ ವಿಶ್ವಕ್ಕೇ ಚೇತನವಾಗಿರುವ ಅಂದರೆ ಆತ್ಮವಾಗಿರುವವನೇ ಆ ಪರಮಾತ್ಮ. ಇದನ್ನೇ ಮಂಕುತಿಮ್ಮನ ಕಗ್ಗದಲ್ಲಿ ಡಿ. ವಿ. ಜಿ.ಯವರು ಈ ರೀತಿ ಹೇಳಿದ್ದಾರೆ.

ಶರಣುವೊಗು ಜೀವನ ರಹಸ್ಯದಲಿ ಸತ್ತ್ವದಲಿ ।
ಶರಣು ಜೀವನವ ಸಮವೆನಿಪ ಯತ್ನದಲಿ ॥
ಶರಣಂತರಾತ್ಮ ಗಂಭೀರ ಪ್ರಶಾಂತಿಯಲಿ ।
ಶರಣು ವಿಶ್ವಾತ್ಮದಲಿ – ಮಂಕುತಿಮ್ಮ ॥

**ತೋಟದೂರು ಸೀತಾರಾಮ ಹೆಬ್ಬಾರ್, ಬೆಂಗಳೂರು**

★★★★

ಪುಸ್ತಕ ಪರಿಚಯ

# 'ಸೂಕ್ತಿ ಸಂಪದ'

ಲೇಖಕ : ಡಾ। ಎಚ್. ವಿ. ನರಸಿಂಹಮೂರ್ತಿ

ಪುಟಗಳು : 18 ಬೆಲೆ : ರೂ. 150.00

ಪ್ರಕಾಶಕರು : ವಿಕಾಸ ಪ್ರಕಾಶನ, ನೇರಂಬಳ್ಳಿ ರಸ್ತೆ, 'ಚೇತನ', ಕೋಟೇಶ್ವರ ಅಂಚೆ – 576 222
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ, ದೂರವಾಣಿ : 08254–261145

ಡಾ। ಎಚ್. ವಿ. ನರಸಿಂಹಮೂರ್ತಿಯವರ 72ನೆಯ ಕೃತಿ, ಈ 'ಸೂಕ್ತಿ ಸಂಪದ'. ಸನಾತನಧರ್ಮ ಮತ್ತು ಭಾರತೀಯ ಸಂಸ್ಕೃತಿಯ ಆಕರಗ್ರಂಥಗಳಾದ ವೇದಗಳು, ಪುರಾಣಗಳು, ರಾಮಾಯಣ, ಮಹಾಭಾರತ ಮೊದಲಾದ ಮಹಾಕಾವ್ಯಗಳು, ಸುಭಾಷಿತ ಗ್ರಂಥಗಳು ಮತ್ತು ಇತರ ಮೂಲಗಳಿಂದ ಆಯ್ದ ಸೂಕ್ತಿಗಳ ಚಿಂತನಾತ್ಮಕ ವ್ಯಾಖ್ಯಾನವನ್ನೊಳಗೊಂಡ ಇದು ಒಂದು ಅಪೂರ್ವಗ್ರಂಥ.

ಸಂಸ್ಕೃತ ವಾಙ್ಮಯವೆಂಬುದು ಒಂದು ಮಹಾಸಮುದ್ರ. ಅದರ ಆಳ ಮತ್ತು ವಿಸ್ತಾರಗಳೆರಡೂ ಊಹಾತೀತ. ಆದರೆ ಸಂಸ್ಕೃತ ಅಧ್ಯಯನ, ಬೋಧನೆ ಮತ್ತು ಪ್ರಸಾರದಲ್ಲಿ ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತಿರುವ ಡಾ। ನರಸಿಂಹಮೂರ್ತಿಯವರು ಇಲ್ಲಿನ ಸೂಕ್ತಿಗಳ ಆಯ್ಕೆಯಲ್ಲಿ ಎಚ್ಚರವಹಿಸಿದ್ದಾರೆ. ಜನಸಾಮಾನ್ಯರ ಬದುಕಿಗೆ ತೀರಾ ಅವಶ್ಯವೆನಿಸುವ ಸೂಕ್ತಿಗಳನ್ನು ಆಯ್ದು, ಅವುಗಳಲ್ಲಿ ಅಡಗಿರುವ ಅರ್ಥಸೂಕ್ಷ್ಮತೆಗಳನ್ನೂ, ಸಾರ್ವಕಾಲಿಕ ಸಂದೇಶಗಳನ್ನೂ ಸೊಗಸಾದ ಶೈಲಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇಲ್ಲಿನ ಪ್ರತಿಯೊಂದು ಲೇಖನವೂ ಸ್ವಯಂ ಪರಿಪೂರ್ಣ. ಒಂದೊಂದನ್ನೇ ಬಿಡಿ-ಬಿಡಿಯಾಗಿ ಓದಿದರೂ, ಓದುಗನಿಗೆ ತಿಳಿವಿನ ಬೆಳಕು ದೊರೆಯುತ್ತದೆ ; ಮುಂದೆ ಓದಲು ಪ್ರೇರಣೆ ಲಭ್ಯವಾಗುತ್ತದೆ.

ಲೋಕಾನುಭವ, ದೃಷ್ಟಾಂತ ಕತೆಗಳು, ವಿದೇಶೀ ವಿದ್ವಾಂಸರ ಅಭಿಪ್ರಾಯಗಳು – ಇವೆಲ್ಲ ಇಲ್ಲಿ ಮಡುಗಟ್ಟಿ ನಿಂತಿವೆ. ಎಲ್ಲಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ವ್ಯಾಖ್ಯಾನಿಸುವ ಔಚಿತ್ಯ ಪ್ರಜ್ಞೆ ಇದೆ. ಹಾಗಾಗಿ ಇಲ್ಲಿನ ಒಂದೊಂದು ವ್ಯಾಖ್ಯಾನವೂ ಅತ್ಯಂತ ಪರಿಣಾಮಕಾರಿಯಾಗಿದೆ.

ಉದಾಹರಣೆಗೆ ಪ್ರಸಿದ್ಧವಾದ ಗಾಯತ್ರೀ ಮಂತ್ರಕ್ಕೆ ಅವರು ನೀಡಿರುವ ವ್ಯಾಖ್ಯಾನವನ್ನು ಗಮನಿಸಿದರೆ ಡಾ। ಮೂರ್ತಿಯವರ ಸಮದರ್ಶಿತ್ವವನ್ನು ಅರ್ಥೈಸಿಕೊಳ್ಳಬಹುದು. ಅಸಂಖ್ಯ ವ್ಯಾಖ್ಯಾನಗಳಿಂದ ಜಟಿಲವಾಗಿರುವ ಗಾಯತ್ರೀ ಮಂತ್ರದ ಸುತ್ತ-ಮುತ್ತ ಮತ್ತಷ್ಟು ಕಂದಕಗಳನ್ನು ನಿರ್ಮಿಸದೆ, ಕಾಲ ಧರ್ಮವನ್ನು ಗಮನದಲ್ಲಿಟ್ಟುಕೊಂಡು ಅವರು ನೀಡಿರುವ ವ್ಯಾಖ್ಯಾನ ತುಂಬಾ ಸಮಂಜಸವಾದುದು. ಅದಕ್ಕೆ ಪೂರಕವಾಗಿ ಅವರು ಮದ್ರಾಸು ಉಚ್ಚನ್ಯಾಯಾಲಯದ ತೀರ್ಪಿನ ಒಂದು ಭಾಗವನ್ನು ಉದ್ಧರಿಸಿ, ಗಾಯತ್ರೀ ಮಂತ್ರದ ಧರ್ಮನಿರಪೇಕ್ಷತೆಯನ್ನು ಸಮರ್ಥಿಸಿದ್ದಾರೆ.

ಶೀರ್ಷಿಕೆಗಳ ಮೇಲೆ ಕಣ್ಣು ಹಾಯಿಸಿ, ಬದಿಗಿರಿಸುವ ಗ್ರಂಥವಲ್ಲ, ಇದು. ಒಮ್ಮೆ ಆರಂಭಿಸಿದರೆ ತಾನಾಗಿಯೇ ಓದಿಸಿಕೊಂಡು ಹೋಗುವ ಸತ್ತ್ವ ಈ ಗ್ರಂಥಕ್ಕಿದೆ. ಸನಾತನ ಧರ್ಮ ಮತ್ತು ಭಾರತೀಯ ಸಂಸ್ಕೃತಿಯ ತಿಳಿವು ನೀಡಿ, ಓದುಗರ ಅಂತರಂಗವನ್ನು ಸಂಸ್ಕರಿಸಿ, ವ್ಯಕ್ತಿತ್ವವನ್ನು ವಿಕಸನಗೊಳಿಸುವ ಗ್ರಂಥವಿದು. ಡಾ। ಮೂರ್ತಿಯವರ ಈ ಗ್ರಂಥ ಒಂದು ಬಂಗಾರದ ಆಭರಣದಂತೆ ಕೊಂಡು, ಎಚ್ಚರದಿಂದ ಸಂರಕ್ಷಿಸಿಟ್ಟು, ಮತ್ತೆ – ಮತ್ತೆ ತೆಗೆದು ಓದುವಂತಾಗಲಿ.

**ಡಾ। ಎಚ್. ಸತ್ಯನಾರಾಯಣ**

ಸ್ಪಂದನ

# ರಥೋತ್ಸವದ ಸಂದರ್ಭ ಎಂತಹ ಹಾಡು ?

ಸಾಲಿಗ್ರಾಮ ರಥೋತ್ಸವದ ಸಂದರ್ಭದಲ್ಲಿ ಬ್ಯಾಂಡ್ ಸೆಟ್ಟಿನವರು ಐಟಮ್ ಸಾಂಗ್, ಲವ್ ಸಾಂಗ್ ಹಾಗೂ ಇನ್ನಿತರ ಅಸಾಂದರ್ಭಿಕ ಹಾಡುಗಳನ್ನು ನುಡಿಸಿರುವುದು ಹಾಗೂ ರಥಬೀದಿಯಲ್ಲಿನ ವ್ಯಾಪಾರಸ್ಥರು ತಮ್ಮ ಸೌಂಡ್ - ಸಿಸ್ಟಮ್‌ನ ಮೂಲಕ ಲವ್‌ಸಾಂಗ್‌ಗಳನ್ನು ಹಾಕಿ ಭಕ್ತಿಯ ವಾತಾವರಣವನ್ನು ಹಾಳು ಮಾಡಿದ್ದಲ್ಲದೇ ನರಸಿಂಹ ದೇವರಿಗೇ ಅಪಚಾರವೆಸಗಿದ್ದಾರೆ.

ಈ ನಡವಳಿಕೆ ಭಕ್ತಜನರಿಗೆ ನೋವು ಉಂಟುಮಾಡಿದೆ ಹಾಗೂ ಪುಂಡ ಪೋಕರಿಗಳಿಗೆ ಆನಂದವನ್ನೂ ನೀಡಿದೆ. ಇದು ಆಡಳಿತ ಮಂಡಳಿಯ ಉದ್ದೇಶಪೂರ್ವಕ ನಡವಳಿಕೆಯೇ ಅಥವಾ ನಿರ್ಲಕ್ಷ್ಯದಿಂದ ನಡೆದ ಆಚಾತುರ್ಯವೇ ?

ತಟ್ಟಿರಾಯನು ಐಟಂ ಸಾಂಗ್‌ಗೆ ಹೆಜ್ಜೆ ಹಾಕುತ್ತಿರುವುದನ್ನು ನೋಡಿ ಯಕ್ಷಗಾನದ ಆಕೃತಿಯ ಬದಲು ಐಟಂ ಗರ್ಲ್‌ನ ಆಕೃತಿಯಲ್ಲ. ತಟ್ಟಿಯನ್ನು ನಿರ್ಮಿಸಿದ್ದರೇ ಯಕ್ಷಗಾನಕ್ಕೆ ಅವಮಾನ ಆಗುತ್ತಿರಲಿಲ್ಲ ಎಂದು ಯಕ್ಷಗಾನ ಪ್ರೇಮಿಗಳು ಸಲಹೆ ನೀಡಿದ್ದಾರೆ.

ಇದು ಉದ್ದೇಶಪೂರ್ವಕವಾದ ಕೃತ್ಯವಾದರೆ ಮುಂದಿನ ಬಾರಿ ಆಮಂತ್ರಣ ಪತ್ರಿಕೆಯಲ್ಲೇ ಈ ವಿಚಾರವನ್ನು ಬಹಿರಂಗ ಪಡಿಸಲಿ, ಆಸ್ತಿಕ ಬಂಧುಗಳು ಬರುವುದಿಲ್ಲ. ದಯವಿಟ್ಟು ನಮ್ಮ ಕೂಟ ಬಂಧುಗಳ ಘನತೆ, ಸಂಸ್ಕೃ ತಿಯನ್ನು ಕಾಪಾಡಿ.

**ರಾಜಶೇಖರ್ ಹೊಳ್ಳ**

**ಕುಂದಾಪುರ**

ವಾರ್ತಾಸಂಚಯ

# ೧. ಅಲ್ಲಲ್ಲಿ ನರಸಿಂಹ ಜಯಂತಿ ಆಚರಣೆ

**1. ಕಳಸ-ಬಾಳೆಹೊಳೆ ಅಂಗಸಂಸ್ಥೆಯಲ್ಲಿ :** ದಿನಾಂಕ 23-5-2013 ವೈಶಾಖ ಶುದ್ಧ ತ್ರಯೋದಶಿ ಗುರುವಾರದ ದಿನ ಬಾಳೆಹೊಳೆ ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನದಲ್ಲಿ ನರಸಿಂಹ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಗುರುನರಸಿಂಹ ದೇವರ ಚಿತ್ರಪಟ (ಫೋಟೋ) ಇಟ್ಟು ಅಲಂಕಾರ ಮಾಡಿ ಪೂಜೆ ಮಾಡಿ, ಮಂಗಳಾರತಿಯ ನಂತರ ಪ್ರಸಾದ ವಿತರಣೆ ಮಾಡಲಾಯಿತು. 30 ಜನ ಸದಸ್ಯರು ಭಾಗವಹಿಸಿದ್ದರು. ಇದೇ ರೀತಿ ಹೇರೂರು ಹೊಸಕೊಪ್ಪ ಶ್ರೀ ನರಸಿಂಹ ದೇವಸ್ಥಾನದಲ್ಲಿ ನರಸಿಂಹ ಜಯಂತಿಯನ್ನು ವಿಶೇಷವಾಗಿ ಪೂಜಾ ವಿಧಾನಗಳನ್ನು ಮಾಡಿ ಪ್ರಸಾದ ವಿತರಿಸಲಾಯಿತು. ಕಳಸ ರುದ್ರಪಾದ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿಯೂ ಸಹ ಶ್ರೀ ನರಸಿಂಹ ಜಯಂತಿಯನ್ನು ಆಚರಿಸಲಾಯಿತು.

**ವರದಿ : ಟಿ. ವಿ. ಜಯಗಣಪತಿ ಹೆಬ್ಬಾರ್**

**2. ಹಾಸನ ಅಂಗಸಂಸ್ಥೆಯಲ್ಲಿ :** ಕೂಟಮಹಾಜಗತ್ತು, ಹಾಸನ ಅಂಗಸಂಸ್ಥೆಯ ವತಿಯಿಂದ, ದಿನಾಂಕ 23-5-13ನೇ ಗುರುವಾರದಂದು ಹಾಸನದ ಶ್ರೀ ಸೀತಾರಾಮಾಂಜನೇಯ ದೇವಸ್ಥಾನದ 'ಪ್ರವಚನ ಮಂದಿರ'ದಲ್ಲಿ, 'ಶ್ರೀ ನರಸಿಂಹ ಜಯಂತಿ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಎಂ. ಎಸ್. ದಿವಾಕರ ಭಟ್ ಅವರು ಪೂಜಾಕಾರ್ಯವನ್ನು ನಡೆಸಿಕೊಟ್ಟರು. ಅಧ್ಯಕ್ಷ ಶ್ರೀ ನರಹರಿ ಹಂದೆಯವರು, ಕೂಟ ಮಹಾಜಗತ್ತಿನ ವತಿಯಿಂದ ಹಮ್ಮಿಕೊಂಡಿರುವ 'ಶ್ರೀ ನರಸಿಂಹ ಜಪ ಮತ್ತು ಶ್ರೀ ನರಸಿಂಹ ಅಷ್ಟೋತ್ತರ ಶತನಾಮ ಸ್ತೋತ್ರ ಪಾರಾಯಣ'ದ ಬಗ್ಗೆ ವಿವರಿಸಿ, ಕೂ. ಮ. ಜ. ಕೇಂದ್ರ ಸಂಸ್ಥೆ ವತಿಯಿಂದ ಕಳುಹಿಸಲಾದ ಮಾರ್ಗಸೂಚಿ ಪುಸ್ತಕವನ್ನು ವಿತರಿಸಿ, ಸದಸ್ಯರೆಲ್ಲರೂ ಈ ಅಭಿಯಾನದಲ್ಲಿ ಭಾಗವಹಿಸಿ ಶ್ರೀ ಗುರುನರಸಿಂಹ ದೇವರ ಕೃಪೆಗೆ ಪಾತ್ರರಾಗುವಂತೆ ಕರೆನೀಡಿದರು. ಇದೇ ಸಂದರ್ಭದಲ್ಲಿ ಶ್ರೀ ಗು. ನ. ಬಿಲಿಯನ್ ಫೌಂಡೇಷನ್‌ನ ಸದಸ್ಯತ್ವ ನವೀಕರಣದ (ದೇಣಿಗೆ) ಸಂಗ್ರಹ ಮಾಡಲಾಯಿತು.

ಭಜನೆ, ಮಂಗಳಾರತಿ, ತೀರ್ಥ ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ವರದಿ : ಎಚ್. ಎಸ್. ರತ್ನಾಕರ**

**3. ತುಮಕೂರು ಅಂಗಸಂಸ್ಥೆಯಲ್ಲಿ :** ದಿನಾಂಕ 23-5-13ರಂದು ಸಂಜೆ 6.30ಕ್ಕೆ ಸರಿಯಾಗಿ ಶ್ರೀ ಕೃಷ್ಣ ದೇವಸ್ಥಾನ ಕೃ. ರಾ. ಬಡಾವಣೆಯಲ್ಲಿ ಸೇರಿ ಎಲ್ಲರೂ ಕೂಡಿ ಭಜನೆಯನ್ನು ಮಾಡಿದೆವು.

ಶ್ರೀ ಜನಾರ್ದನ ಭಟ್ಟರು ನರಸಿಂಹ ಅವತಾರದ ಸಂದೇಶ ಎಂಬ ಪ್ರವಚನವನ್ನು ಮನಮುಟ್ಟುವಂತೆ ನೀಡಿರುತ್ತಾರೆ.

ಅನಂತರ ನರಸಿಂಹದೇವರಿಗೆ ಪೂಜೆ ನಡೆದು ಪ್ರವಚನ ನೀಡಿದವರಿಗೆ ಗೌರವ ಸಲ್ಲಿಸಲಾಯಿತು. ಶ್ರೀ ಕೃಷ್ಣ ದೇವರಿಗೆ ಮಹಾ ಮಂಗಳಾರತಿಯ ನಂತರ ಪ್ರಸಾದ ಹಾಗೂ ಉಪಾಹಾರ ಸ್ವೀಕರಿಸಿದೆವು. ಕೆಲವು ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿದ್ದು ಅವರೆಲ್ಲರೂ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಸುಮಾರು 80 ಜನ ಭಾಗವಹಿಸಿದ್ದು ಕಾರ್ಯಕ್ರಮ




ಪ್ರಶಂಸೆಗೆ ಪಾತ್ರವಾಯಿತು.

**ವರದಿ : ಎಂ. ಪಿ. ಗಣೇಶ ಉರಾಳ**

**4. ಹುಬ್ಬಳ್ಳಿ ಧಾರವಾಡ ಅಂಗಸಂಸ್ಥೆಯಲ್ಲಿ :** ಹುಬ್ಬಳ್ಳಿ-ಧಾರವಾಡ ಅಂಗಸಂಸ್ಥೆಯಲ್ಲಿ ತಾ. 23-5-2013ರ ಗುರುವಾರದಂದು ನರಸಿಂಹ ಜಯಂತಿಯನ್ನು ನರಸಿಂಹ ದೇವರ ಪೂಜೆಯೊಂದಿಗೆ ಶ್ರೀ ಸತ್ಯನಾರಾಯಣ ಕಾರಂತರ ಹೊಸ ಮನೆಯಲ್ಲಿ ಶ್ರದ್ಧೆ ಮತ್ತು ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಮಹಿಳಾ ಸದಸ್ಯರಿಂದ ಭಜನೆ, ವಿಷ್ಣುಸಹಸ್ರನಾಮ ಪಠನ ಹಾಗೂ ನರಸಿಂಹ ಸ್ತೋತ್ರ ಹಾಗೂ ಓಂ ಶ್ರೀ ನರಸಿಂಹಾಯ ನಮಃ ಸಾಮೂಹಿಕ ಪಠನದೊಂದಿಗೆ ನರಸಿಂಹ ಜಯಂತಿಯನ್ನು ಆಚರಿಸಲಾಯಿತು. ಅಲ್ಪೋಪಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ವರದಿ : ಯು. ಕೆ. ಮಯ್ಯ**

**5. ಪುತ್ತೂರು ಅಂಗಸಂಸ್ಥೆಯಲ್ಲಿ :** ತಾ. 23-5-2013ನೆಯ ಗುರುವಾರ ಸಂಜೆ ನಮ್ಮ ಅಂಗ ಸಂಸ್ಥೆಯ ಅಧ್ಯಕ್ಷ ಶ್ರೀ ಬಿ. ಪಿ. ಮಯ್ಯರ ನೇತೃತ್ವದಲ್ಲಿ, ವೇದಮೂರ್ತಿ ಕುಂಜಾರು ನರಸಿಂಹ ಮಯ್ಯರ ಮಾರ್ಗದರ್ಶನದಲ್ಲಿ ಅಧ್ಯಕ್ಷರ ಮನೆ 'ಕಮಲಶಿಲೆ'ಯಲ್ಲಿ ಶ್ರೀ ಗುರುನರಸಿಂಹ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಶ್ರೀ ಗುರುನರಸಿಂಹ ಜಯಂತಿಯ ಅಂಗವಾಗಿ ಶ್ರೀ ಗುರುನರಸಿಂಹ ಅಷ್ಟೋತ್ತರ ಹಾಗೂ ಶ್ರೀ ವಿಷ್ಣುಸಹಸ್ರನಾಮ ಪಠನದೊಂದಿಗೆ, ಶ್ರೀ ಕುಂಜಾರು ನರಸಿಂಹ ಮಯ್ಯರಿಂದ ಶ್ರೀ ನರಸಿಂಹ ಪೂಜೆ ಮತ್ತು ಮಹಾಪೂಜೆ ನೆರವೇರಿತು. ಮಹಾಪೂಜೆಯ ಬಳಿಕ ಪ್ರಸಾದ ಹಾಗೂ ಹಣ್ಣುಹಂಪಲು ಸಹಿತ ಉಪಾಹಾರವನ್ನು ನೀಡಲಾಯಿತು. ಸುಮಾರು 100ಕ್ಕೂ ಹೆಚ್ಚು ಸಮಾಜ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹಿರಿಯರಾದ ಟಿ. ನಾರಾಯಣ ಮಯ್ಯ, ಸರಪಾಡಿ ರಾಮಕೃಷ್ಣ ಐತಾಳ್, ಶ್ರೀ ನಾರಾಯಣ ಐತಾಳ್, ಶ್ರೀ ಬಾಲಕೃಷ್ಣ ಮಯ್ಯ, ಶ್ರೀಮತಿ ಸೀತಮ್ಮ, ಮಹಿಳಾ ವೇದಿಕೆಯ ಅಧ್ಯಕ್ಷೆ ಕವಿತಾ ಕೃಷ್ಣಮೂರ್ತಿ, ಮಾಜಿ ಅಧ್ಯಕ್ಷ ಶ್ರೀ ರಘುನಾಥಯ್ಯ, ಶ್ರೀ ಹರಿನಾರಾಯಣ ಹೊಳ್ಳ, ನರಸಿಂಹ ದಳದ ಶ್ರೀ ಅನಂತೇಶ್ ಮಯ್ಯ, ಸ್ವರೂಪ್, ಸಂದೀಪ್ ಮುಂತಾದವರು ಸಹಕರಿಸಿದರು, ಇದೇ ಸಂದರ್ಭದಲ್ಲಿ ಶ್ರೀ ಗುರುನರಸಿಂಹ ಬಿಲಿಯನ್ ಫೌಂಡೇಶನ್ ಬಾಬ್ತು

ದೇಣಿಗೆಯನ್ನು ಸಂಗ್ರಹಿಸಲಾಯಿತು. **ವರದಿ : ಬಿ. ಪಿ. ಮಯ್ಯ**

**6. ದಾವಣಗೆರೆ ಅಂಗಸಂಸ್ಥೆಯಲ್ಲಿ :** ಶ್ರೀ ಗುರುನರಸಿಂಹ ಜಯಂತಿಯನ್ನು ದಿನಾಂಕ 23-5-2013ನೇ ಗುರುವಾರದಂದು ಶ್ರೀ ಕೃಷ್ಣ ವಿದ್ಯಾರ್ಥಿನಿಲಯದ ವಾಚನಾಲಯದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಮಹಿಳೆಯರ ಭಜನೆಯು ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿತ್ತು.




ಅಂಗಸಂಸ್ಥೆಯ ಅಧ್ಯಕ್ಷ ಶ್ರೀ ಡಿ. ಅನಂತಯ್ಯ, ಕಾರ್ಯದರ್ಶಿ ಶ್ರೀ ಶಿವರಾಮ ಕಾರಂತ, ಸಹ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಹೊಳ್ಳ, ಶ್ರೀ ಮೋತಿ ಪರಮೇಶ್ವರ ರಾವ್, ಶ್ರೀ ಮೋತಿ ಸುಬ್ರಮಣ್ಯ ರಾವ್, ಶ್ರೀ ಬಾಲಕೃಷ್ಣ ವೈದ್ಯ, ಶ್ರೀ ಆನಂದ ಉಪಾಧ್ಯ, ಶ್ರೀ ಕಾವೇರಿ ಎನ್. ಪ್ರಕಾಶ್, ಶ್ರೀ ಟಿ. ದಿನಕರ ರಾವ್, ಶ್ರೀ ಕೃಷ್ಣ ಮಿತ್ರವೃಂದದ ಪ್ರವರ್ತಕ ಶ್ರಿ ಎಚ್. ಬಿ. ಮಂಜುನಾಥ್, ಶ್ರೀಮತಿಯವರಾದ ಶಾರದಾ ಅನಂತಯ್ಯ, ಶ್ರೀಮತಿ ಅಡಿಗ, ರೋಹಿಣಿ ಸುಬ್ರಹ್ಮಣ್ಯ, ಅಶ್ವಿನಿ ಆನಂದ್, ಲಲಿತಾ ಕಾರಂತ್, ಜಯಶ್ರೀ ಗೋಪಾಲರಾವ್, ಮಕ್ಕಳು ಮತ್ತು ಮಹಿಳೆಯರು ಹಾಗೂ ಶ್ರೀ ಕೃಷ್ಣ ಮಿತ್ರವೃಂದದ ಗಣ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಶ್ರೀ ಹರೀಶ್ ಹೊಳ್ಳ ಮತ್ತು ವೇದಮೂರ್ತಿ ವಾಸುದೇವ ಭಟ್ ಪೂಜೆಯನ್ನು ನೆರವೇರಿಸಿದರು.

ಭಜನೆ, ಅಷ್ಟೋತ್ತರ, ಮಂಗಳಾರತಿ, ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. **ವರದಿ : ಡಿ. ಅನಂತಯ್ಯ**

**7. ಕುಂದಾಪುರ ಅಂಗಸಂಸ್ಥೆಯಲ್ಲಿ :** ಕೂಟಮಹಾಜಗತ್ತು ಕುಂದಾಪುರ ಅಂಗಸಂಸ್ಥೆ ವತಿಯಿಂದ ಶ್ರೀ ಗುರು ನರಸಿಂಹ ಜಯಂತಿ/ಗುರುವಂದನ ಕಾರ್ಯಕ್ರಮವನ್ನು ಉಪ್ಪಿನಕುದ್ರು ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಆಚರಿಸಲಾಯಿತು.

ಸಭಾಧ್ಯಕ್ಷತೆಯನ್ನು ಊರಿನ ಹಿರಿಯ ವ್ಯಕ್ತಿ, ನಿವೃತ್ತ ಪ್ರಾಂಶುಪಾಲ ಶ್ರೀ ರಾಮಕೃಷ್ಣ ಐತಾಳರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸದಾಶಿವ ಐತಾಳ್ (ನಿವೃತ್ತ ಉಪನ್ಯಾಸಕ) ಭಾಗವಹಿಸಿದ್ದರು. ಅವರು ತಮ್ಮ ವಿಶೇಷ ಉಪನ್ಯಾಸದಲ್ಲಿ ಶ್ರೀ ಗುರುನರಸಿಂಹ ಜಯಂತಿಯ ಮಹತ್ವವನ್ನು ತಿಳಿಸುತ್ತಾ, ಭಗವಂತನು ಭಕ್ತವತ್ಸಲ. ಭಕ್ತಿಯಿಂದ ಮುಕ್ತಿಯನ್ನು ಪಡೆಯಲು ಸಾಧ್ಯ, ನವವಿಧ ಭಕ್ತಿಯಿಂದ – ಶ್ರವಣ, ಮನನ, ಸ್ಮರಣ, ಕೀರ್ತನ ವಂದನ, ಪಾದ ಸೇವನ, ಅರ್ಚನ

ಸಖ್ಯ. ಆತ್ಮನಿವೇದನೆಯಿಂದ ಭಗವಂತನನ್ನು ಸೇವಿಸಲು ಸಾಧ್ಯವೆಂದರು.

ಬಿಲಿಯನ್ ಫೌಂಡೇಶನಿನ ಪ್ರತಿನಿಧಿ ಶ್ರೀ ಲಕ್ಷ್ಮೀನಾರಾಯಣ ವೈದ್ಯರು, ಬಿಲಿಯನ್ ಫೌಂಡೇಶನಿನ ವಿವರವನ್ನು ತಿಳಿಸುತ್ತಾ ದೇಣಿಗೆಯ ಮಹತ್ವವನ್ನು ಸಭೆಗೆ ತಿಳಿಸಿದರು.

ಅಂಗಸಂಸ್ಥೆ ವತಿಯಿಂದ ಶ್ರೀ ಲಕ್ಷ್ಮೀನಾರಾಯಣ ಭಟ್ ಮತ್ತು ಮುಖ್ಯ ಅತಿಥಿಗಳನ್ನು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು

ಅಂಗಸಂಸ್ಥೆಯ ಕಾರ್ಯದರ್ಶಿ ಪಿ. ವೆಂಕಟರಮಣ ರಾವ್ ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು. ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**8. ಮೈಸೂರು ಅಂಗಸಂಸ್ಥೆಯಲ್ಲಿ :** ದಿನಾಂಕ 23-5-13ನೇ ಗುರುವಾರ ಕೂಟಮಹಾಜಗತ್ತು ಮೈಸೂರು ಅಂಗಸಂಸ್ಥೆಯಿಂದ ನರಸಿಂಹ ಜಯಂತಿ ಪೂಜೆಯನ್ನು ಶ್ರೀಮತಿ ಮತ್ತು ಶ್ರೀ ಮಹೇಶ ಹೊಳ್ಳರ ಸ್ವಗೃಹದಲ್ಲಿ ವೇದಮೂರ್ತಿ ಶ್ರೀ ಉದಯ ಅಡಿಗರಿಂದ ನೆರವೇರಿಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಕೂಟಬಂಧುಗಳು ಪೂಜೆಯಲ್ಲಿ ಪಾಲ್ಗೊಂಡಿದ್ದರು. ಬಿಲಿಯನ್ ಪೌಂಡೇಶನ್‌ಗಾಗಿ ನೆರೆದ ಕೂಟಬಂಧುಗಳಿಂದ ಶ್ರೀ ನರಸಿಂಹ ಹೊಳ್ಳರು ಹಣ ಸಂಗ್ರಹಿಸಿದರು. ಕೇಂದ್ರಸಂಸ್ಥೆಯಿಂದ ಬಂದ ಕೆಲವು ಮಾಹಿತಿಗಳನ್ನು ಓದಿ ಮತ್ತು ಕೂಟಬಂಧು ಪತ್ರಿಕೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಲು ಶ್ರೀ ಎನ್. ಜಿ. ಕಾರಂತರು ವಿನಂತಿಸಿಕೊಂಡರು. ನಂತರ ಅಂದಿನ ಕಾರ್ಯಕ್ರಮದ ವ್ಯವಸ್ಥೆಯನ್ನು ವಹಿಸಿಕೊಂಡ ಶ್ರೀ ಮಹೇಶ ಹೊಳ್ಳರಿಗೆ ಹಾಗೂ ನೆರೆದ ಕೂಟಬಂಧುಗಳಿಗೆ ಅಧ್ಯಕ್ಷರು ಧನ್ಯವಾದ ಅರ್ಪಿಸಿದರು.

**ವರದಿ : ಪಿ. ನರಸಿಂಹ ಹೊಳ್ಳ**

**9.ಹಬ್ಬಗಳ ಆಚರಣೆಯು ಪಾರಮಾರ್ಥಿಕ ಸಾಧನೆಗೆ ಸಹಕಾರಿ - ಲಕ್ಷ್ಮೀನಾರಾಯಣ ಹಂದೆ**

ಬನ್ನೂರು : ಹಬ್ಬ ಹರಿದಿನಗಳ ಆಚರಣೆಯ ಸಂತೋಷಕ್ಕೆ ಮಾತ್ರವೇ ಇರುವುದಲ್ಲ, ಬದಲಾಗಿ ಪಾರಮಾರ್ಥಿಕ ಸಾಧನೆ ಹಾಗೂ ಆತ್ಮಶೋಧನೆಗೆ ಸಹಕಾರಿಯಾಗಿದೆ ಎಂಬುದಾಗಿ ಪುರೋಹಿತ ಲಕ್ಷ್ಮೀನಾರಾಯಣ ಹಂದೆ ಎಡನೀರು ಅವರು ಅಭಿಪ್ರಾಯ ಪಟ್ಟರು. ಶ್ರೀಯುತರು ಕಾಸರಗೋಡು ಅಂಗಸಂಸ್ಥೆಯ ಶ್ರೀ ನೃಸಿಂಹ ಜಯಂತಿ ಆಚರಣೆಯ ಸಂದರ್ಭದಲ್ಲಿ ಹಮ್ಮಿಕೊಳ್ಳಲಾದ ಧಾರ್ಮಿಕ ಸತ್ಸಂಗದಲ್ಲಿ ಮುಖ್ಯ ಭಾಷಣ ಮಾಡಿ ಮಾತನಾಡುತ್ತಿದ್ದರು. ಇಲ್ಲಿನ ಬಿ. ಕೃಷ್ಣಕಾರಂತರ ಮನೆಯಲ್ಲಿ ಜರಗಿದ ಪ್ರಸ್ತುತ ಕಾರ್ಯಕ್ರಮದಲ್ಲಿ ಅಂಗಸಂಸ್ಥೆಯ ಅಧ್ಯಕ್ಷ ಬಿ. ನಾರಾಯಣ ಮಯ್ಯ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ಅಂಗಸಂಸ್ಥೆಯ ಕಾರ್ಯಗಳನ್ನು ಉತ್ತಮ ಪಡಿಸುವಲ್ಲಿ ಸಮಾಜಬಾಂಧವರ ಹೆಚ್ಚಿನ ಸಹಾಯ ಸಹಕಾರಗಳನ್ನು ಕೋರಿದರು.

ನೃಸಿಂಹ ಜಯಂತಿಯ ಪ್ರಯುಕ್ತ ಶ್ರೀ ವಿಷ್ಣುಸಹಸ್ರನಾಮ ಪಠನ ಹಾಗೂ ಭಜನಾಕಾರ್ಯಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಬಿ. ಕೃಷ್ಣಕಾರಂತ ಸ್ವಾಗತಿಸಿ, ನರಸಿಂಹ ಮಯ್ಯ ಎಂ. ವಂದಿಸಿದರು. ಎಂ. ನರಸಿಂಹ ರಾಜ್ ನಿರೂಪಿಸಿದರು.

**ವರದಿ : ನರಸಿಂಹ ಮಯ್ಯ ಎಂ.**

**10. ಮಂಗಲ್ಪಾಡಿಯಲ್ಲಿ :** ಕೂಟ ಮಹಾಜಗತ್ತು ಮಂಗಲ್ಪಾಡಿ, ಯುವ ವೇದಿಕೆ ಮತ್ತು ಮಹಿಳಾ ವೇದಿಕೆಯ ವತಿಯಿಂದ ತಾರೀಕು 23-5-2013ನೇ ಗುರುವಾರ ವೇದಮೂರ್ತಿ ಮುಳಿಂಜ ಶ್ರೀ ಅಶೋಕ ನಾವಡರ ಪೌರೋಹಿತ್ಯದಲ್ಲಿ ಶ್ರೀ ನರಸಿಂಹ ಜಯಂತಿ ಪೂಜೆಯು ಜರಗಿತು.

ಭಜನೆ ಸಂಯೋಜಕಿ ಶ್ರೀಮತಿ ಲೀಲಾ ಎಸ್. ಹೊಳ್ಳ ಇವರ ನೇತೃತ್ವದಲ್ಲಿ ಭಜನೆಯು

ಜರಗಿತು. ಮಹಾಪೂಜೆಯ ನಂತರ ದೇವರಿಗೆ ಅಷ್ಟಾವಧಾನ ಸೇವೆಯು ಜರಗಿತು. ಮಹಿಳಾ ವೇದಿಕೆಯ ಅಧ್ಯಕ್ಷೆ, ಕಾರ್ಯದರ್ಶಿ, ಯುವ ವೇದಿಕೆಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಅಂಗಸಂಸ್ಥೆಯ ಸದಸ್ಯರು, ಮಹಿಳಾ ವೇದಿಕೆ ಮತ್ತು ಯುವ ವೇದಿಕೆಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪೂಜೆಯ ನಂತರ ಪ್ರಸಾದ ವಿತರಣೆಯೊಂದಿಗೆ ಅಂದಿನ ಕಾರ್ಯಕ್ರಮವು ಸಂಪನ್ನಗೊಂಡಿತು.

**ವರದಿ : ಯಂ. ಪರಮೇಶ್ವರ ಹೊಳ್ಳ, ಕಯ್ಯಾರು**

**11. ಕೃಷ್ಣಾಪುರದಲ್ಲಿ ರಜತ ಸಂಭ್ರಮದ ನರಸಿಂಹ ಜಯಂತಿ**

ಕೂಟಮಹಾಜಗತ್ತು ಅಂಗಸಂಸ್ಥೆ : ಕಾಟಿಪಳ್ಳ ಕೃಷ್ಣಾಪುರ ಇದರ ಆಶ್ರಯದಲ್ಲಿ ಇಪ್ಪತ್ತೈದನೇ ವರ್ಷದ ಗುರುನರಸಿಂಹ ಜಯಂತಿ ಆಚರಣೆಯನ್ನು ಶ್ರೀ ಗುರುನರಸಿಂಹ ಸಭಾಭವನದಲ್ಲಿ ಆಚರಿಸಲಾಯಿತು.

ರಜತ ವರ್ಷದ ಅಂಗವಾಗಿ ಹಮ್ಮಿಕೊಂಡಿದ್ದ ಏಕಾಹ ಭಜನಾ ಕಾರ್ಯಕ್ರಮ ಶ್ರೀ ಚಂದ್ರಶೇಖರ ಐತಾಳ್ ದಂಪತಿಗಳು ದೀಪ ಬೆಳಗಿಸುವುದರ ಮೂಲಕ ಪ್ರಾರಂಭಗೊಂಡು ವಿವಿಧ ಭಜನಾ ತಂಡಗಳ ಪಾಲ್ಗೊಳ್ಳುವಿಕೆಯಿಂದ ಸಂಪನ್ನಗೊಂಡಿತು. ಗಣಯಾಗ ಮತ್ತು ನರಸಿಂಹ ಹೋಮಗಳನ್ನು ವೇ। ಮೂ। ಪಿ. ವೆಂಕಟರಮಣ ಐತಾಳ ನೆರವೇರಿಸಿಕೊಟ್ಟರು. ಈ ಸಂದರ್ಭದಲ್ಲಿ ರುದ್ರಾಸಕ್ತ ಬಳಗ ಸುರತ್ಕಲ್ ಇವರಿಂದ ಅಥರ್ವ ಶೀರ್ಷ ಮತ್ತು ರುದ್ರ ಪಾರಾಯಣ ಜರುಗಿತು. ಮಧ್ಯಾಹ್ನ ಬ್ರಾಹ್ಮಣ ಸುವಾಸಿನಿ ಆರಾಧನೆ ಅನ್ನ ಸಂತರ್ಪಣೆ ಜರುಗಿ ಸಂಜೆ ಶ್ರೀ ಜಯರಾಮ ಐತಾಳರ ಪೌರೋಹಿತ್ಯದಲ್ಲಿ ಕಲಶ ಪ್ರತಿಷ್ಠೆ ಕಲ್ಪೋಕ್ತ ಪೂಜೆ, ವಸಂತ ಇತ್ಯಾದಿಗಳು ಸುಮಾರು ಐನೂರು ಜನ ಬ್ರಾಹ್ಮಣ ಬಂಧುಗಳ ಕೂಡುವಿಕೆಯಿಂದ ವಿಧ್ಯುಕ್ತವಾಗಿ ಆಚರಿಸಲ್ಪಟ್ಟಿತು.

ಈ ಸಂದರ್ಭದಲ್ಲಿ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಕೂಟ ಮಹಾಜಗತ್ತಿನ ಕೇಂದ್ರಾಧ್ಯಕ್ಷ ಶ್ರೀ ಪಿ. ವೆಂಕಟ್ರಾವ್, ಅವಿಭಜಿತ ದ. ಕ. ಜಿಲ್ಲೆಯ ಬ್ರಾಹ್ಮಣ ಮಹಾಸಭಾದ ಗೌರವಾಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಂಸ್ಥೆಗೆ ಶುಭ ಹಾರೈಸಿದರು. ಅಂಗಸಂಸ್ಥೆಯ ಸ್ಥಾಪಕಾಧ್ಯಕ್ಷ ಶ್ರೀ ಕೆ. ಎಸ್. ಮಯ್ಯ ಮತ್ತು ಸಭಾಭವನದ ನಿರ್ವಹಣಾ ಸಮಿತಿ ಸದಸ್ಯ ಶ್ರೀ ಬಿ. ಸದಾನಂದ ಸೋಮಯಾಜಿಯವರನ್ನು ಗೌರವಿಸಲಾಯಿತು. ಅಂಗಸಂಸ್ಥೆಯ ಅಧ್ಯಕ್ಷ ಶ್ರೀ ಪಿ. ಕೆ. ಉಪಾಧ್ಯಾಯ, ಮಹಿಳಾವೇದಿಕೆಯ ಅಧ್ಯಕ್ಷೆ ಶ್ರೀಮತಿ ಗುಣಪೂರ್ಣಾ ಐತಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗುರುನರಸಿಂಹ ಯುವ ಬಳಗದ ಸಂಚಾಲಕ ಮಹೇಶ್ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಕೇಂದ್ರ ಸಂಸ್ಥೆಯ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಪಿ. ಪುರುಷೋತ್ತಮ ರಾವ್ ವಂದಿಸಿದರು.

**12. ಉತ್ತರಹಳ್ಳಿ ಅಂಗಸಂಸ್ಥೆಯಲ್ಲಿ ಶ್ರೀ ಗುರುನರಸಿಂಹ ಜಯಂತಿ ಆಚರಣೆ :**

ದಿನಾಂಕ 23-5-2013ರ ಗುರುವಾರದಂದು ಬೆಂಗಳೂರಿನ ಗೋವಿಂದರಾಜನಗರ, ನಾಗರಬಾವಿ ಮುಖ್ಯರಸ್ತೆಯಲ್ಲಿರುವ ಶ್ರೀ ಯೋಗಾನಂದ ಪ್ರಾರ್ಥನಾ ಮಂದಿರದಲ್ಲಿ ವಿಜೃಂಭಣೆಯಿಂದ ಶ್ರೀ ಗುರುನರಸಿಂಹ ಜಯಂತಿಯನ್ನು ಆಚರಿಸಲಾಯಿತು. ಸಂಜೆ 4.30 ಗಂಟೆಗೆ ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಎ. ರಮೇಶ ಮಯ್ಯರ ನೇತೃತ್ವದ ಋತ್ವಿಜರು ಪೂಜಾ-ಕೈಂಕರ್ಯಗಳನ್ನು ಶ್ರದ್ಧಾಪೂರ್ವಕವಾಗಿ



ನಡೆಸಿಕೊಟ್ಟರು. ಮಹಿಳಾ ವೇದಿಕೆಯ ಸದಸ್ಯರು ದೇವರನಾಮ ಮತ್ತು ಭಜನೆಯನ್ನು ನಡೆಸಿ ಕಾರ್ಯಕ್ರಮಕ್ಕೆ ಮೆರುಗನ್ನು ತಂದರು. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಶ್ರದ್ಧಾ-ಭಕ್ತಿಗಳಿಂದ ಭಾಗವಹಿಸಿ ಶ್ರೀ ಗುರುನರಸಿಂಹನ ಕೃಪೆಗ ಪಾತ್ರರಾದರು. ಮಹಾಮಂಗಳಾರತಿ ನಂತರ ಪ್ರಸಾದ ವಿತರಣೆ ಮಾಡಲಾಯಿತು. ನಂತರ ಆಗಮಿಸಿದ್ದ ಸದಸ್ಯರೆಲ್ಲರಿಗೂ ಲಘು ಉಪಹಾರದ ವ್ಯವಸ್ಥೆಯನ್ನು ಸದಸ್ಯರಾದ ಶ್ರೀ ಜಯಪ್ರಕಾಶ ನಾವಡರು ಏರ್ಪಡಿಸಿದ್ದರು.

**ವರದಿ : ಉಮೇಶ್ ಶಾಸ್ತ್ರಿ (ಕಾರಂತ)**

**12. ಸಾಲಿಗ್ರಾಮ ಅಂಗಸಂಸ್ಥೆಯಲ್ಲಿ ಶ್ರೀ ಗುರುನರಸಿಂಹ ಜಯಂತಿ ಆಚರಣೆ :**

ನಮ್ಮ ಅಂಗಸಂಸ್ಥೆಯ ನರಸಿಂಹ ಜಯಂತಿಯು ನಮ್ಮ ಅಂಗಸಂಸ್ಥೆಯ ಅಧ್ಯಕ್ಷರಾದ ಅನಂತರಾಜ ನಾವಡರ ಮನೆಯಲ್ಲಿ ಜರಗಿತು. ವಿಷ್ಣುಸಹಸ್ರನಾಮ ಪಠನ, ಗುರುನರಸಿಂಹ ಅಷ್ಟೋತ್ತರ ಶತನಾಮ ಸ್ತೋತ್ರ ಪಠಣ ಮತ್ತು ಮಹಿಳಾ ವೇದಿಕೆಯ ಸದಸ್ಯರಿಂದ ಭಜನೆ ನಡೆಯಿತು. ಸದಾನಂದ ಹೊಳ್ಳ ಅವರ ನಿರ್ದೇಶನದಲ್ಲಿ ಅನಂತರಾಜ ನಾವಡರು ನರಸಿಂಹ ಪೂಜೆಯನ್ನು ಮಾಡಿದರು. ಸೇರಿದ ಸದಸ್ಯರೆಲ್ಲರೂ ನರಸಿಂಹ ಮಂತ್ರವನ್ನು ಹೇಳಿದರು. ನಂತರ ಫಲಾಹಾರದೊಂದಿಗೆ ಧನ್ಯವಾದವನ್ನು ಸಮರ್ಪಿಸಲಾಯಿತು. **ವರದಿ : ಶಶಿಧರ ನಾವಡ ಕಾಜೂರು**

**13. ಪುತ್ತೂರು ಅಂಗಸಂಸ್ಥೆಯಲ್ಲಿ ಶ್ರೀ ಗುರುನರಸಿಂಹ ಜಯಂತಿ ಆಚರಣೆ :**

ತಾ. 23-5-2013ನೆಯ ಗುರುವಾರ ಸಂಜೆ ನಮ್ಮ ಅಂಗಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ. ಪಿ. ಮಯ್ಯರ ನೇತೃತ್ವದಲ್ಲಿ, ವೇದಮೂರ್ತಿ ಶ್ರೀ ಕುಂಜಾರು ನರಸಿಂಹ ಮಯ್ಯರ ಮಾರ್ಗದರ್ಶನದಲ್ಲಿ ಅಧ್ಯಕ್ಷರ ಮನೆ ಕಮಲಶಿಲೆಯಲ್ಲಿ ಶ್ರೀ ಗುರುನರಸಿಂಹ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಶ್ರೀ ಗುರುನರಸಿಂಹ ಜಯಂತಿಯ ಅಂಗವಾಗಿ ಶ್ರೀ ಗುರುನರಸಿಂಹ ಅಷ್ಟೋತ್ತರ ಹಾಗೂ ಶ್ರೀ ವಿಷ್ಣು ಸಹಸ್ರನಾಮ ಪಠಣದೊಂದಿಗೆ, ಶ್ರೀ ವೇದಮೂರ್ತಿ ಕುಂಜಾರು ನರಸಿಂಹ ಮಯ್ಯರಿಂದ ಶ್ರೀ ನರಸಿಂಹ ಪೂಜೆ ಮತ್ತು ಮಹಾಪೂಜೆ ನೆರವೇರಿತು. ಮಹಾಪೂಜೆಯ ಬಳಿಕ ಪ್ರಸಾದ ಹಾಗೂ ಹಣ್ಣುಹಂಪಲು ಸಹಿತ ಉಪಾಹಾರವನ್ನು ನೀಡಲಾಯಿತು. ಸುಮಾರು 100ಕ್ಕೂ ಹೆಚ್ಚು ಸಮಾಜ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹಿರಿಯರಾದ ಟಿ. ನಾರಾಯಣ ಮಯ್ಯ, ಸರಪಾಡಿ ರಾಮಕೃಷ್ಣ ಐತಾಳ್, ಶ್ರೀ

ನಾರಾಯಣ ಐತಾಳ್, ಶ್ರೀ ಬಾಲಕೃಷ್ಣ ಮಯ್ಯ, ಶ್ರೀಮತಿ ಸೀತಮ್ಮ, ಮಹಿಳಾ ವೇದಿಕೆಯ ಅಧ್ಯಕ್ಷರಾದ ಕವಿತಾ ಕೃಷ್ಣಮೂರ್ತಿ, ಮಾಜಿ ಅಧ್ಯಕ್ಷರಾದ ಶ್ರೀ ರಘುನಾಥಯ್ಯ, ಶ್ರೀ ಹರಿನಾರಾಯಣ ಹೊಳ್ಳ, ನರಸಿಂಹ ದಳದ ಶ್ರೀ ಅನಂತೇಶ್ ಮಯ್ಯ, ಸ್ವರೂಪ್, ಸಂದೀಪ್ ಮುಂತಾದವರು ಸಹಕರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಗುರುನರಸಿಂಹ ಬಿಲಿಯನ್ ಫೌಂಡೇಶನ್ ಬಾಬ್ತು ದೇಣಿಗೆಯನ್ನು ಸಂಗ್ರಹಿಸಲಾಯಿತು.

**ಅಧ್ಯಕ್ಷರು**

## ೨. ಕೂಟಬಂಧುಗಳಿಗೆ ಅಧಿಕಾಂಕ, ರ್‍ಯಾಂಕ್, ಸಮ್ಮಾನ ಇತ್ಯಾದಿ



**1. ಕು। ಶ್ರೀಜಯಾಗೆ ಸಂಗೀತದಲ್ಲಿ ಅಧಿಕಾಂಕ :** ಕರ್ನಾಟಕ ಸರಕಾರ ನಡೆಸಿರುವ 2012ನೆಯ ಸಾಲಿನ ಕರ್ನಾಟಕ ಶಾಸ್ತ್ರೀಯ ಸಂಗೀತ (ಹಾಡುಗಾರಿಕೆ, ಜೂನಿಯರ್ ವಿಭಾಗ) ಪರೀಕ್ಷೆಯಲ್ಲಿ ಶ್ರೀಜಯಾ ಕಾರಂತ ಶೇ. 84.5 ಅಂಕಗಳಿಸಿ ಉತ್ತೀರ್ಣಳಾಗಿರುತ್ತಾಳೆ. ಇವಳು ಕಾಂತಾವರ ಜಯರಾಮ ಕಾರಂತ ಹಾಗೂ ಗಾಯತ್ರಿ ಕಾರಂತ ಇವರ ಪುತ್ರಿಯಾಗಿದ್ದು ಸಂಗೀತ ವಿದುಷಿ ಪೆರ್ಣಂಕಿಲ ಮಾಧವಿ ಭಟ್ ಅವರ ಶಿಷ್ಯೆ.



**2. ಸುಶಾಂತ್ ಹೊಳ್ಳನಿಗೆ ಸಂಗೀತದಲ್ಲಿ ವಿಶಿಷ್ಟ ಶ್ರೇಣಿ :** 2012-13ರಲ್ಲಿ ನಡೆದ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಡುಗಾರಿಕೆ ಜೂನಿಯರ್ ವಿಭಾಗದಲ್ಲಿ ಸುಶಾಂತ ಹೊಳ್ಳನು ಶೇ. 92.5% ಅಂಕಗಳನ್ನು ಪಡೆಯುವುದರೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ. ಇವನು, ಮಂಗಳೂರಿನ ಶ್ರೀಮತಿ ಜಯಲಕ್ಷ್ಮಿ ಪಿ. ಭಟ್ ಇವರು ನಡೆಸುವ 'ಶ್ರೀ ಸದ್ಗುರು ಸಂಗೀತ ಶಾಲೆ'ಯ ವಿದ್ಯಾರ್ಥಿ. ಈತ ಮಂಗಳೂರಿನ ಬೆಸೆಂಟ್ ಆಂಗ್ಲ ಶಾಲೆಯ 6ನೇ ತರಗತಿಯ ವಿದ್ಯಾರ್ಥಿ. ಶ್ರೀ ಡಿ. ಕೃಷ್ಣಮೂರ್ತಿ ಹೊಳ್ಳ ಮತ್ತು ಶ್ರೀಮತಿ ಲೀಲಾ ಹೊಳ್ಳ ಇವರ ಪುತ್ರ ಹಾಗೂ ಕನ್ನಡ ಪಂಡಿತ ದಿ। ಡಿ. ಸುಬ್ರಾಯ ಹೊಳ್ಳರ ಮೊಮ್ಮಗ.

**3. ಪ್ರಭವ ಸಾಯಿ ನಾರಾಯಣನಿಗೆ ವಿದೇಶೀ ಶಿಷ್ಯವೇತನ :** ಡಬ್ಲಿನ್‌ನಲ್ಲಿರುವ 450 ವರ್ಷ ಹಳೆಯ ಟ್ರಿನಿಟಿ ಕಾಲೇಜಿನಲ್ಲಿ (ಡಬ್ಲಿನ್ ಯುನಿವರ್ಸಿಟಿ) ಸೆಂಟರ್ ಫಾರ್ ರಿಸರ್ಚ್ ಆನ್ ಎಡಾಪ್ಟಿವ್ ನ್ಯಾನೋ ಸ್ಟ್ರಕ್ಚರ್ಸ್ ಎಂಡ್ ನ್ಯಾನೋ ಡಿವೈಸಸ್ (ಸಿಆರ್‌ಎಎನ್ ಎನ್)ನಲ್ಲಿ ಪಿಎಚ್‌ಡಿ ಮಾಡಲು ಬೆಳ್ತಂಗಡಿಯ ಶ್ರೀ ಪ್ರಭವ ಸಾಯಿ ನಾರಾಯಣನಿಗೆ ನಾಲ್ಕು ವರ್ಷದ ಸ್ಕಾಲರ್‌ಶಿಪ್ ಸಿಕ್ಕಿದೆ.



ಆಳಿಕೆಯ ಶ್ರೀ ಸತ್ಯಸಾಯಿ ಪದವೀಪೂರ್ವ ಕಾಲೇಜಿನ ವಿದ್ಯಾರ್ಥಿಯಾದ ಈತ ಮೈಸೂರು ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದ ಇಂಟೆಗ್ರೇಟೆಡ್ ಎಂಎಸ್‌ಸಿ ಮಾಡಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) ಫೆಸಿಲಿಟಿ ಟೆಕ್ನಾಲಜಿಸ್ಟ್ ಆಗಿ ಮೂರು ವರ್ಷ ದುಡಿದಿದ್ದ. ಇವನು ಬೆಳ್ತಂಗಡಿಯ ಕೂ. ಮ. ಜ. ಅಧ್ಯಕ್ಷ ಡಾ। ಬಿ. ರತ್ನಾಕರ ರಾವ್ ಮತ್ತು ಶ್ರೀಮತಿ ಲಲಿತಾಂಬಾ ರಾವ್ ದಂಪತಿಗಳ ಪುತ್ರ.

**4. ನವೀನ್ ಹೊಳ್ಳನಿಗೆ ಪಿಯುಸಿಯಲ್ಲಿ ಅಧಿಕಾಂಕ :**



ಯು. ನವೀನ್ ಹೊಳ್ಳನು 2013ರ ಪಿಯುಸಿ ಪರೀಕ್ಷೆಯ ಪಿ.ಸಿ.ಎಂ.ಇ. ವಿಭಾಗದಲ್ಲಿ ಶೇ. 96ರ ಅಧಿಕಾಂಕ ಪಡೆದಿದ್ದಾನೆ. ಇವನು ತುಮಕೂರು ಅಂಗಸಂಸ್ಥೆಯ ಗೌರವಾಧ್ಯಕ್ಷ ಶ್ರೀ ಯು. ಸುರೇಶ ಹೊಳ್ಳರ ಮಗ.

**5. ಕು। ಅಕ್ಷತಾಗೆ ಎಸ್.ಎಸ್.ಎಲ್.ಸಿ.ಯಲ್ಲಿ ಹೆಚ್ಚು ಅಂಕ :**



ಹಾಸನ, ಜೂ. 10 : ಈ ಬಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಕು। ಅಕ್ಷತಾ ರಾವ್ ಶೇ. 96.8 ಅಂಕ ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಹಾಸನ ಅಂಗಸಂಸ್ಥೆಯ ಸದಸ್ಯರಾದ ಇಸ್ರೋ ಎಂಸಿಎಫ್ (ಮಾಷ್ಟರ್ ಕಂಟ್ರೋಲ್ ಫೆಸಿಲಿಟಿ) ಉದ್ಯೋಗಿ ಶ್ರೀಮತಿ ಶಶಿಕಲಾ ಮತ್ತು ಪಣಂಬೂರು ಎಂಸಿಎಫ್ (ಮಂಗಳೂರು ಕೆಮಿಕಲ್ಸ್ ಎಂಡ್ ಫರ್ಟಿಲೈಸರ್ಸ್)ಉದ್ಯೋಗಿ ಶ್ರೀ ಎಂ. ಶಂಕರನಾರಾಯಣ ದಂಪತಿಗಳ ಪುತ್ರಿ ಹಾಗೂ ವಿಜಯ ಪ್ರೌಢಶಾಲೆಯ ವಿದ್ಯಾರ್ಥಿನಿ.

**6. ಕು। ಶ್ರೀಲೇಖಾಗೆ ಪಿ. ಯು. ಸಿ. ಯಲ್ಲಿ ಅಧಿಕ ಅಂಕ :**



ಈ ಬಾರಿಯ ದ್ವಿತೀಯ ಪಿ. ಯು. ಸಿ. ಪರೀಕ್ಷೆಯಲ್ಲಿ ಕು। ಶ್ರೀಲೇಖಾ ಕಾರಂತ ಶೇ 96.5 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣೆಯಾಗಿದ್ದಾಳೆ. ಈಕೆ ಪಿಸಿಎಂ.ಬಿ.ಯಲ್ಲಿ ಶೇ 98ಅಂಕ ಗಳಿಸಿದ್ದು, ಸಿ.ಇ.ಟಿ.ಯ ಎಂಜಿನಿಯರಿಂಗ್‌ನಲ್ಲಿ 855ನೇ ರ್‍ಯಾಂಕ್ ಹಾಗೂ ಮೆಡಿಕಲ್‌ನಲ್ಲಿ 1304ನೇ ಸ್ಥಾನ ಗಿಟ್ಟಿಸಿದ್ದಾಳೆ. ಇವಳು ಹಾಸನ ಅಂಗಸಂಸ್ಥೆಯ ಸದಸ್ಯರಾದ ಹಾಸನ ಆಕಾಶವಾಣಿಯ ಉದ್ಯೋಗಿ ಶ್ರೀಮತಿ ಸುಜಾತಾ ಮತ್ತು ಇಸ್ರೋ ಎಂಸಿಎಫ್ (ಮಾಷ್ಟರ್ ಕಂಟ್ರೋಲ್ ಫೆಸಿಲಿಟಿ) ಉದ್ಯೋಗಿ ಶ್ರೀ ಬಿ. ನಾಗೇಶ ರಾವ್ ಕಾರಂತ ದಂಪತಿಗಳ ಪುತ್ರಿ ಹಾಗೂ ಸಂತ ಜಾಸೆಫ್ ಪಿ. ಯು. ಕಾಲೇಜಿನ ವಿದ್ಯಾರ್ಥಿನಿ.

**ವರದಿ : ಎಚ್.ಎಸ್. ರತ್ನಾಕರ**

**7. ಶ್ರೀಧರ ಐತಾಳರಿಗೆ ಸಮ್ಮಾನ :** ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಯಕ್ಷಗಾನ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಶ್ರೀ ಪಣಂಬೂರು ಶ್ರೀಧರ ಐತಾಳ್ ಇವರಿಗೆ ತಾ. 7-4-2013ನೇ ರವಿವಾರ ಕುಳಾಯಿಯಲ್ಲಿರುವ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ



ಶ್ರೀಮತಿ ಲೀಲಾವತಿ ಎಸ್. ರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಶಾಲು ಹೊದಿಸಿ ಫಲ ತಾಂಬೂಲಾದಿಯೊಂದಿಗೆ ಸಮ್ಮಾನ ಪತ್ರ ನೀಡಿ ಗೌರವಿಸಿದೆ.

**ವರದಿ : ನಿತ್ಯಾನಂದ ಕಾರಂತ ಪೊಳಲಿ**



**8. ಕು। ಅನನ್ಯಾಗೆ ಪಿಯುಸಿಯಲ್ಲಿ ಅಧಿಕಾಂಕ :** ಮೂಡಬಿದಿರೆಯ ಆಳ್ವಾಸ್ ಪಿ. ಯು. ಕಾಲೇಜಿನ ವಿದ್ಯಾರ್ಥಿನಿ ಕು। ಎಸ್. ಎನ್. ಅನನ್ಯಾ ಈ ಸಲದ ದ್ವಿತೀಯ ಪಿ. ಯು. ಸಿ. ಪರೀಕ್ಷೆಯಲ್ಲಿ ಶೇಕಡ 94 ಅಂಕ ಪಡೆದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಕಳಸ-ಬಾಳೆಹೊಳೆ ಅಂಗಸಂಸ್ಥೆಯ ಸದಸ್ಯ ಶಂಭುವಿನಹಿತ್ಲು ಎಸ್. ಜೆ. ನಾಗಭೂಷಣ ಹೊಳ್ಳ ಮತ್ತು ಶ್ರೀಮತಿ ಶಾಂತಾ ದಂಪತಿಗಳ ಪುತ್ರಿ.



**9. ಶಶಿಕಿರಣನಿಗೆ ಪಿ.ಯು.ಸಿ.ಯಲ್ಲಿ ಹೆಚ್ಚು ಅಂಕ :** ಮಂಗಳೂರಿನ ಶಾರದಾ ಪಿ.ಯು. ಕಾಲೇಜಿನ ವಿದ್ಯಾರ್ಥಿ ಶ್ರೀ ಶಶಿಕಿರಣ್ ಕೆ. ಆರ್. ಈ ಸಲದ ದ್ವಿತೀಯ ಪಿ. ಯು.ಸಿ. ಪರೀಕ್ಷೆಯಲ್ಲಿ ಶೇ 93 ಅಂಕ ಗಳಿಸಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ. ಇವನು ಕಳಸ-ಬಾಳಹೊಳೆ ಅಂಗಸಂಸ್ಥೆಯ ಸದಸ್ಯ ತೋಟದೂರು ಕಲ್ಲಾರೆ ಶ್ರೀ ಕೆ. ಕೆ. ರವಿ ಪ್ರಕಾಶ ಹೊಳ್ಳ ಮತ್ತು ಶ್ರೀಮತಿ ಶಾಲಿನಿಯವರ ಪುತ್ರ

.

**ವರದಿ : ಟಿ. ವಿ. ಜಯಗಣಪತಿ ಹೆಬ್ಬಾರ್**

**10. ಹೀಗೊಂದು ಗುರುವಂದನೆ :** ಯಕ್ಷಗಾನದ ಹಳೆಯ ಸಂಪ್ರದಾಯದ ತಿಟ್ಟು-ಮಟ್ಟುಗಳ ಪರಿಚಯವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಹಾಗೂ ಉತ್ತಮ ಪ್ರೇಕ್ಷಕರನ್ನು ಸಿದ್ಧಗೊಳಿಸುವ ಉದ್ದೇಶದಿಂದ ಆರಂಭಗೊಂಡ ಕಾರ್ಕಡ ಶ್ರೀನಿವಾಸ ಉಡುಪ ಮತ್ತು ಎಚ್. ಶ್ರೀಧರ ಹಂದೆ ಇವರ ಕನಸಿನ ಕೂಗು ಸಾಲಿಗ್ರಾಮ ಮಕ್ಕಳ ಮೇಳಕ್ಕೆ ಇಂದೀಗ 39ನೆಯ ವರುಷದ ನಡುಪ್ರಾಯ. ನಲವತ್ತು ವರುಷಗಳ ಹಿಂದೆ ಈ ಗುರುಗಳಿಂದ ಯಕ್ಷಗಾನದ ಕೌಶಲಗಳನ್ನು ಕಲಿತ ಅಂದಿನ ಬಾಲ ಕಲಾವಿದರು ಇಂದು 50 ವರುಷ ವಯಸ್ಸು ದಾಟಿದ ಹೆಸರಾಂತ ವೈದ್ಯರು, ಇಂಜಿನಿಯರು, ಉದ್ಯಮಿಗಳು ಆಗಿ ದೇಶ ವಿದೇಶಗಳಲ್ಲಿ ತಮ್ಮ ಬದುಕನ್ನು ಸಾಗಿಸುತ್ತಿರುವ



ಪ್ರೌಢರು. ಇತ್ತೀಚೆಗೆ ಅವರೆಲ್ಲರೊಂದಾಗಿ ತಾವು ಅಂದು ಕಲಿತ ಅದೇ ಕುಣಿತ, ಗತ್ತು ಗಾಂಭಿರ್ಯ ಇತ್ಯಾದಿಗಳನ್ನು ಮರೆಯದೆ ಅದೇ ಶೈಲಿಯಲ್ಲಿ 'ವೀರ ವೃಷಸೇನ' ಮತ್ತು 'ಕೃಷ್ಣಾರ್ಜುನ ಕಾಳಗ' ಪ್ರಸಂಗಗಳನ್ನು ಕೋಟ ಹಿರೇ ದೇವಸ್ಥಾನದ ಆವರಣದಲ್ಲಿ ಅಸಂಖ್ಯ ಅಭಿಮಾನಿಗಳ ಮುಂದೆ ಆಡಿ ತೋರಿಸಿದರು. ಮಯ್ಯಾಸ್ ಖ್ಯಾತಿಯ ಶ್ರೀ ಪಿ. ಸದಾನಂದ ಮಯ್ಯ ಮತ್ತು ಶ್ರೀ ಕೆ. ಎಂ. ಉಡುಪ ಇವರ ಉಪಸ್ಥಿತಿಯಲ್ಲಿ ಗುರುಗಳಾದ ಎಚ್. ಶ್ರೀಧರ ಹಂದೆ ದಂಪತಿಗಳನ್ನು ದೊಡ್ಡ ಮೊತ್ತದ ಗೌರವಧನ ನೀಡಿ ಗೌರವಿಸಿದುದು ಹೃದಯಸ್ಪರ್ಶಿಯಾಗಿತ್ತು. 'ನಲವತ್ತು ವರುಷಗಳ ನಂತರ ತಾವು ಕಲಿಸಿದ ಶೈಲಿಯನ್ನು ಮರೆಯದೆ ಅದೇ ಗತ್ತು ಗಾಂಭೀರ್ಯಗಳಲ್ಲಿ ಗುಣಮಟ್ಟದ ಪ್ರದರ್ಶನ ನೀಡಿದುದು ನನಗೆ ಅತಿ ಆನಂದ ತಂದಿದೆ. ಬದುಕು ಸಾರ್ಥಕವೆನಿಸಿತು. ಇದಕ್ಕಿಂತ ಹೆಚ್ಚಿನ ಪ್ರಶಸ್ತಿ ನನಗಿನ್ನೇನು ಬೇಕು' ಎಂದು ಹೇಳುತ್ತ ಹಂದೆಯವರು ಕಣ್ಣೊರಸಿಕೊಂಡರು.

ಉಡುಪಿಯ ಪೇಜಾವರ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ತಮ್ಮ ಹುಟ್ಟು ಹಬ್ಬದ ಸಂದರ್ಭ ಯಕ್ಷ ಶಿಕ್ಷಕರಾದ ಶ್ರೀ ಹಂದೆ ಇವರನ್ನು ಶ್ರೀ ರಾಮ ವಿಠಲ ಪ್ರಶಸ್ತಿ ನೀಡಿ ಆಶೀರ್ವದಿಸಿದ್ದಾರೆ ಹಾಗೂ ಇವರ ಸಾಲಿಗ್ರಾಮ ಮಕ್ಕಳ ಮೇಳ (ರಿ.)ಇದಕ್ಕೆ ಈಗಾಗಲೇ ಉತ್ತಮ ಕಲಾ ಸಂಸ್ಥೆಯ ನೆಲೆಯಲ್ಲಿ ಪ್ರಶಸ್ತಿ ನೀಡಿರುತ್ತಾರೆ ಎನ್ನುವುದು ಗಮನಾರ್ಹ.

**ವರದಿಗಾರ**



**11. ಪವಿತ್ರ ಕಾರಂತಳಿಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 95.36 ಅಂಕ :** ಪವಿತ್ರ ಕಾರಂತ ಎಪ್ರಿಲ್ 2013ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೂಡಬಿದ್ರೆಯ ಜೈನ್ ಹೈಸ್ಕೂಲ್ ಶಾಲೆಯಲ್ಲಿ ಓದಿ ಶೇ. 95.36 ಅಂಕಗಳಿಸಿದ್ದಾಳೆ. ಇವಳು ನೃತ್ಯ ಜೂನಿಯರ್ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಪೊಳಲಿ ಅಂಗಸಂಸ್ಥೆಯ ಸದಸ್ಯರಾದ ನರಸಿಂಹ ಕಾರಂತ ಮತ್ತು ಗೀತಾ ಕಾರಂತರವರ ಪುತ್ರಿ.



**12. ಕು। ಶ್ರೀಲತಾಳಿಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 94.24 ಅಂಕ :** ಕುಮಾರಿ ಶ್ರೀಲತಾ ಇವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಒಟ್ಟು 625ರಲ್ಲಿ 589 ಅಂಕಗಳನ್ನು ಪಡೆದು 94.24% ಗಳಿಸಿರುತ್ತಾರೆ. ಸರಕಾರಿ ಪ್ರೌಢಶಾಲೆ ಉಪ್ಪಿನಕುದ್ರು ಇಲ್ಲಿ ವ್ಯಾಸಂಗ ಮಾಡಿರುತ್ತಾರೆ. ಇವರ ತಂದೆ ಶ್ರೀ ಯಜ್ಞನಾರಾಯಣ ಐತಾಳ್ ಮತ್ತು ಶ್ರೀಮತಿ ಕಮಲಾಕ್ಷಿಯವರ ಮಗಳು.



**13. ಕು। ಮಹಾಲಕ್ಷ್ಮಿಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 92.48 ಅಂಕ :** ಕುಮಾರಿ ಮಹಾಲಕ್ಷ್ಮಿ ಇವರು ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625ರಲ್ಲಿ 578 ಅಂಕಗಳನ್ನು ಪಡೆದು 92.48% ಗಳಿಸಿರುತ್ತಾಳೆ. ಮೂಡಬಿದರೆ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿಯುತ್ತಿದ್ದಾಳೆ. ಇವರು ಕುಂದಾಪುರ ತಾಲೂಕು ಉಪ್ಪಿನಕುದ್ರು ಗ್ರಾಮದ ಕೂಟಬಂಧು ಯು. ಮುರಗೇಶ ಮಯ್ಯ ಮತ್ತು ಶ್ರೀಮತಿ ವಿಮಲಾ ಮಯ್ಯರವರ ಪುತ್ರಿ.

**14. ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕಾಂಕ :** ಕುಮಾರಿ ಸಹನಾ ಕೆ. ಇವರು ಈ ಬಾರಿಯ



ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625ರಲ್ಲಿ 603 ಅಂಕಗಳನ್ನು ಪಡೆದು 96.48% ಗಳಿಸಿರುತ್ತಾರೆ. ಎಸ್.ಎಲ್.ಎನ್.ಪಿ. ಆಂಗ್ಲ ಮಾಧ್ಯಮ ಶಾಲೆ ಪಾಣೆಮಂಗಳೂರು ಇಲ್ಲಿ ವ್ಯಾಸಂಗ ಮಾಡಿರುತ್ತಾರೆ. ಇವಳು ಅಮ್ಟೂರು ಕೆದ್ಲ ಕೆ. ಕೃಷ್ಣಮೂರ್ತಿ ಮತ್ತು ಕೆ. ಭಾರತಿ ಇವರ ಪುತ್ರಿ. ಇವಳು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಶೇ. 94 ಅಂಕ ಪಡೆದು ಜ್ಯೂನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾಳೆ. ಚದುರಂಗ ಸ್ಪರ್ಧೆಯಲ್ಲಿ ಸತತ ನಾಲ್ಕು ವರ್ಷ ತಾಲೂಕು ಮಟ್ಟದಲ್ಲಿ ಬಹುಮಾನ ಗಳಿಸಿ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾಳೆ. ಕಳೆದ 6 ವರ್ಷಗಳಿಂದ ಯಕ್ಷಗಾನದಲ್ಲಿ ವಿಷ್ಣು, ರಾಮ, ಕೃಷ್ಣ ಅರ್ಜುನ, ದೇವೇಂದ್ರ, ಬಬ್ರುವಾಹನ, ಕರ್ಣ ಮುಂತಾದ ಪಾತ್ರಗಳನ್ನು ವಿವಿಧ ಕಡೆ ನಿರ್ವಹಿಸಿ ಯಶಸ್ವಿಯಾಗಿದ್ದಾಳೆ.

**15. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತಿರುವ ಎಂ. ಸುಬ್ರಹ್ಮಣ್ಯ ಭಟ್‌ರಿಗೆ ಸಮ್ಮಾನ :** ತಾ. 13-2-2013ರಂದು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಪೆದಮಲೆ ಬಂಟ್ವಾಳ ದ. ಕ. ಇಲ್ಲಿ ಶ್ರೀ ಆದಿ ಗೋಕರ್ಣ ವೇದ ವಿಜ್ಞಾನ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭದಲ್ಲಿ ಆಚಾರ್ಯ ಅಭಿನಂದನಾ ಕಾರ್ಯಕ್ರಮದಲ್ಲಿ ಬಂಟ್ವಾಳ ತಾಲೂಕು ಸಜೀಪಮುನ್ನೂರು ಗ್ರಾಮದ ಮಂಚಿನಡ್ಕ ಸುಬ್ರಹ್ಮಣ್ ಭಟ್ಟರನ್ನು ಶ್ರೀ ದೇವಾಲಯದ ಟ್ರಸ್ಟಿ ಡಾ. ವಸಂತ ಬಾಳಿಗಾ ಶಾಲು ಹೊದೆಸಿ ಫಲ ತಾಂಬೂಲ ಸ್ಮರಣಿಕೆ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಜೆಪ್ಪು ಸತೀಶ ರಾವ್ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಶಂಕರ ಭಟ್, ವೇ. ಮೂ. ಮಿತ್ತೂರು ಶಂಕರ ಭಟ್ ದೇವಾಲಯದ ಆಡಳಿತ ಮಂಡಳಿಯ ಸದಸ್ಯರು ವೈದಿಕ ವೃಂದದವರು ಉಪಸ್ಥಿತರಿದ್ದರು.



## ೩. ಮೈಸೂರಲ್ಲಿ ವಿಷು ಆಚರಣೆ

ದಿನಾಂಕ 14-4-2013ನೇ ಭಾನುವಾರದಂದು ಕೂಟಮಹಾಜಗತ್ತು ಮೈಸೂರು ಅಂಗಸಂಸ್ಥೆಯಿಂದ ಸೌರಮಾನ ಯುಗಾದಿಯನ್ನು ಆಚರಿಸಲಾಯಿತು. ದೇವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿ, ಮಹಿಳಾ ವೇದಿಕೆಯ ಸದಸ್ಯೆಯರೆಲ್ಲರೂ ಸಾಮೂಹಿಕವಾಗಿ ವಿಷ್ಣುಸಹಸ್ರನಾಮವನ್ನು ಪಠಿಸಿದರು.

ಶ್ರೀ ಯಜ್ಞೇಶ್ವರ ಐತಾಳರು ಪಂಚಾಂಗ ಪೂಜೆ, ದೇವರ ಪೂಜೆಯ ನಂತರ ಈ ವರ್ಷದ ಫಲಾಫಲಗಳನ್ನು ಓದಿ ತಿಳಿಸಿದರು. ಮಹಿಳಾವೇದಿಕೆ ಸದಸ್ಯೆಯರೆಲ್ಲರಿಂದ ವಿಷು ಕಣಿಯನ್ನು ಇಡಲಾಗಿತ್ತು. ನೆರೆದ ಸದಸ್ಯರೆಲ್ಲರಿಗೂ ಶ್ರೀ ಗುರುದೇವರ ಅನುಗ್ರಹವಿರಲೆಂದು ಅಧ್ಯಕ್ಷರು ಹಾರೈಸಿದರು. ಎಲ್ಲರಿಗೂ ಹಬ್ಬದ ಊಟವನ್ನು ಏರ್ಪಡಿಸಲಾಗಿತ್ತು. **ವರದಿ : ನರಸಿಂಹ ಹೊಳ್ಳ ಪಿ.**

## ೪. ಮಂಗಳೂರಲ್ಲಿ ವಸಂತ ವೇದ ಶಿಬಿರದ ಪ್ರಾರಂಭೋತ್ಸವ

ಕೂಟ ಮಹಾಜಗತ್ತು ಮಂಗಳೂರು ಅಂಗಸಂಸ್ಥೆಯ ವತಿಯಿಂದ ಶ್ರೀ ಮಂಗಳಾದೇವಿ ದೇವಸ್ಥಾನದ ಸಹಯೋಗದೊಂದಿಗೆ ಉಚಿತ ವಸಂತ ವೇದ ಶಿಬಿರದ ಪ್ರಾರಂಭೋತ್ಸವವು ಇತ್ತೀಚೆಗೆ ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ ಅಂಗಸಂಸ್ಥೆಯ ಅಧ್ಯಕ್ಷ ಶ್ರೀ ಪಿ. ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಯದರ್ಶಿ ಪರಮೇಶ್ವರ ನಾವಡರು ಸ್ವಾಗತಿಸಿದರು. ಪ್ರಧಾನ ಅರ್ಚಕ ಶ್ರೀ ರಘುರಾಮ ಉಪಾಧ್ಯಾಯರು ದೀಪ ಬೆಳಗಿಸುವ ಮೂಲಕ ಶಿಬಿರಕ್ಕೆ ಚಾಲನೆಯನ್ನು ನೀಡಿದರು. ಉಪಾಧ್ಯಕ್ಷ ಶ್ರೀ ಐ. ರಘುರಾಮ ರಾಯರು ಪ್ರಸ್ತಾವನೆಯನ್ನು ಮಾಡಿ ಶಿಬಿರದ ಧ್ಯೇಯೋದ್ದೇಶಗಳನ್ನು ತಿಳಿಸಿದರು. ಬೆಳ್ತಂಗಡಿ ಅಂಗಸಂಸ್ಥೆಯ ಕಾರ್ಯದರ್ಶಿ ಶ್ರೀ ವೆಂಕಟ್ರಮಣರು ಈ ಶಿಬಿರದಿಂದ ಆಗುವ ಪ್ರಯೋಜನಗಳನ್ನು ತಿಳಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಿಬಿರದ ರೀತಿ ನೀತಿಗಳನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು. ಕಾರ್ಯದರ್ಶಿ ವಂದನಾರ್ಪಣೆ ಮಾಡಿದರು. ಈ ಶಿಬಿರದಲ್ಲಿ 22 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದಾರೆ.

**ವರದಿ : ಎ. ಪರಮೇಶ್ವರ ನಾವಡ**

## ೫. ಬಾಳೆಹೊಳೆಯಲ್ಲಿ ವಸಂತ ವೇದ ಶಿಬಿರ ಸಮಾರೋಪ ಹಾಗೂ ವಾರ್ಷಿಕ ಮಹಾಸಭೆ

ಕೂಟ ಮಹಾಜಗತ್ತು ಕಳಸ ಬಾಳೆಹೊಳೆ ಅಂಗಸಂಸ್ಥೆಯ ವತಿಯಿಂದ ವಸಂತ ವೇದ ಶಿಬಿರವು ಬಾಳೆಹೊಳೆ ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನದಲ್ಲಿ ದಿನಾಂಕ 15-4-2013ರಂದು ಪ್ರಾರಂಭವಾಗಿ 21 ದಿನ ಶಿಬಿರ ನಡೆದು ದಿನಾಂಕ 7-5-2013ರಂದು ಶಿಬಿರ ಸಮಾರೋಪ ಸಮಾರಂಭ ಹಾಗೂ ವಾರ್ಷಿಕ ಮಹಾಸಭೆ ನಡೆಯಿತು. ವೇದ ಶಿಬಿರದಲ್ಲಿ 30 ಜನ ಶಿಕ್ಷಾರ್ಥಿಗಳು ಭಾಗವಹಿಸಿದ್ದು ಇಬ್ಬರು ಗುರುಗಳು, ಒಬ್ಬರು ಸಂಸ್ಕೃ ತ ಪಾಠ ಕಲಿಸುವ ಶಿಕ್ಷಕರು ಮತ್ತು ಒಬ್ಬರು ಯೋಗ ಶಿಕ್ಷಕರಿದ್ದು ಉತ್ತಮ ರೀತಿಯಲ್ಲಿ ಪಾಠ ಪ್ರವಚನ ಬೋಧಿಸಲಾಯಿತು. ಶಿಬಿರದಲ್ಲಿ ಮೊದಲನೇ ವರ್ಗದ ಶಿಕ್ಷಾರ್ಥಿಗಳಿಗೆ ಸಂಧ್ಯಾವಂದನೆ ಹೇಳಿಕೊಡಲಾಯಿತು. ಎರಡನೆಯ ವರ್ಗದ ಶಿಕ್ಷಾರ್ಥಿಗಳಿಗೆ ದೇವರ ಪೂಜೆ ಮತ್ತು ಕೆಲವು ಸೂಕ್ತಗಳನ್ನು ಹೇಳಿಕೊಡಲಾಯಿತು. ಶಿಕ್ಷಾರ್ಥಿಗಳಿಗೆ ಸಂಸ್ಕೃ ತ ಪಾಠ



ಮತ್ತು ಯೋಗವನ್ನು ಕಲಿಸಿಕೊಟ್ಟು ಉತ್ತಮ ತರಬೇತಿ ನೀಡಲಾಯಿತು.

ವಸಂತ ವೇದ ಶಿಬಿರದ ಸಮಾರೋಪ ಸಮಾರಂಭ ಹಾಗೂ ವಾರ್ಷಿಕ ಮಹಾಸಭೆಯು ಅಂಗಸಂಸ್ಥೆಯ ಅಧ್ಯಕ್ಷ ಶ್ರೀ ರಾಮಚಂದ್ರ ನಾವುಡರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೂಟಮಹಾಜಗತ್ತಿನ ಕೇಂದ್ರ ಸಂಸ್ಥೆಯ ಅಧ್ಯಕ್ಷ ಶ್ರೀ ವೆಂಕಟರಾವ್, ಜೊತೆ ಕಾರ್ಯದರ್ಶಿ ಶ್ರೀ ರಮೇಶ್ ಮಯ್ಯ ಹಾಗೂ ಉತ್ತರಹಳ್ಳಿ ಅಂಗಸಂಸ್ಥೆಯ ಕಾರ್ಯಾಧ್ಯಕ್ಷ ಬಿ. ಎಸ್. ಐತಾಳರು ಉಪಸ್ಥಿತರಿದ್ದರು. ಅಂಗಸಂಸ್ಥೆಯ ಸ್ಥಾಪಕ ಅಧ್ಯಕ್ಷ ಶ್ರೀ ಟಿ. ಎಸ್. ಶಾಮಣ್ಣ, ಶ್ರೀ ಜಯಕುಮಾರ ನಾವುಡ ಹಾಗೂ ಶ್ರೀ ಎಚ್.ವಿ.ಸುಬ್ರಹ್ಮಣ್ಯ ಭಟ್ಟರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರಾರ್ಥಿಗಳಿಂದ ವೇದಘೋಷಗಳೊಂದಿಗೆ ಸಭೆ ಪ್ರಾರಂಭವಾಯಿತು. ಶ್ರೀ ಎಸ್. ಜೆ. ನಾಗಭೂಷಣ ಹೊಳ್ಳರು ಸ್ವಾಗತಿಸಿದರು. ಅಂಗಸಂಸ್ಥೆಯ ಕಾರ್ಯದರ್ಶಿ ಶ್ರೀ ಜಿ. ಎನ್. ವೆಂಕಟೇಶಭಟ್ಟರು ವಾರ್ಷಿಕ ವರದಿ, ಲೆಖ್ಖಪತ್ರಗಳನ್ನು ಮಂಡಿಸಿದರು. ಶ್ರೀ ಜಿ. ಸಿ. ಜಯಕುಮಾರ ನಾವುಡರು ಪ್ರಾಸ್ತಾವಿಕ ಭಾಷಣ ಮಾಡಿದರು. ಕೇಂದ್ರ ಸಂಸ್ಥೆಯ ಅಧ್ಯಕ್ಷ ಶ್ರೀ ವೆಂಕಟರಾವ್ ಮಾತನಾಡುತ್ತಾ ಕೇಂದ್ರ ಸಂಸ್ಥೆಯ ಹಿಂದಿನ ಅಧ್ಯಕ್ಷ ಶ್ರೀ ಕೆ. ಪಿ. ಹೊಳ್ಳರು ಮಾಡಿರುವ ಸಾಧನೆಯನ್ನು ನೆನಪಿಸಿ ಸಾಲಿಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಕೂಟ ಭವನಕ್ಕೆ ಅಂಗಸಂಸ್ಥೆಯ ಸದಸ್ಯರು ಹೆಚ್ಚಿನ ದೇಣಿಗೆ ನೀಡುವಂತೆ ಹಾಗೂ ಪ್ರತೀ ಮನೆಯವರೂ 'ಕೂಟ ಬಂಧು' ಪತ್ರಿಕೆಯ ಚಂದಾದಾರರಾಗುವಂತೆ ಮನವಿ ಮಾಡಿದರು. ಅಲ್ಲದೇ ಬಿಲಿಯನ್ ಫೌಂಡೇಶನ್ ನಿಧಿ ಬಗ್ಗೆ ಹೆಚ್ಚಿನ ಸಂಖ್ಯೆಯ ಸದಸ್ಯರು ಸೇರ್ಪಡೆಯಾಗುವಂತೆ ವಿನಂತಿಸಿದರು. ಉತ್ತರಹಳ್ಳಿ ಅಂಗಸಂಸ್ಥೆಯ ಕಾರ್ಯಾಧ್ಯಕ್ಷರು ಮತ್ತು ಕೇಂದ್ರ ಸಂಸ್ಥೆಯ ಸಹ ಕಾರ್ಯದರ್ಶಿಗಳು ಮಾತನಾಡಿದರು. ಶ್ರೀ ಎಚ್. ವಿ. ಸುಬ್ರಹ್ಮಣ್ಯ ಭಟ್ಟರು ಶಿಕ್ಷಾರ್ಥಿಗಳಿಗೆ ಹಿತವಚನ ಹೇಳುತ್ತಾ ವಯಸ್ಕರು ಮನೆಯಲ್ಲಿ ನಿತ್ಯ ಸಂಧ್ಯಾವಂದನೆ, ದೇವರ ಪೂಜೆ ಮಾಡಿದಲ್ಲಿ ಮಕ್ಕಳೂ ಸಹ ಅದನ್ನೇ ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುತ್ತದೆ. ಆದರೆ ಎಷ್ಟೋ ಮನೆಗಳಲ್ಲಿ ವಯಸ್ಕರಿಗೆ ಸಂಧ್ಯಾವಂದನೆ ದೇವರಪೂಜೆ ಬರುವುದಿಲ್ಲ. ನಾವು ಈ ವಿಚಾರ ಮನಗಂಡು ನಮ್ಮ ಅಂಗಸಂಸ್ಥೆಯಲ್ಲಿ ಈ ಹಿಂದೆ ವಯಸ್ಕರಿಗೆ ಪ್ರತ್ಯೇಕ ಶಿಬಿರ ನಡೆಸಿ ಸಂಧ್ಯಾವಂದನೆ ದೇವರಪೂಜೆ ಸೂಕ್ತಗಳು ರುದ್ರ ಇತ್ಯಾದಿಗಳನ್ನು ಹೇಳಿಕೊಟ್ಟು ತುಂಬಾ ಜನರು ಕಲಿತು ಹೆಚ್ಚಿನ ಉಪಯೋಗ ಪಡೆದುಕೊಂಡಿರುತ್ತಾರೆ ಎಂದು ತಿಳಿಸುತ್ತಾ ಶಿಬಿರಾರ್ಥಿಗಳಿಗೂ ಶುಭ ಹಾರೈಸಿದರು.

ಅಧ್ಯಕ್ಷ ಶ್ರೀ ರಾಮಚಂದ್ರ ನಾವುಡರು ಎಲ್ಲಾ ಕೂಟ ಬಂಧುಗಳೂ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸಹಕರಿಸುವಂತೆ ಮನವಿ ಮಾಡಿಕೊಂಡರು. ಅಂಗಸಂಸ್ಥೆಯ ಕಾರ್ಯದರ್ಶಿ ಶ್ರೀ ಜಿ. ಎನ್. ವೆಂಕಟೇಶ ಭಟ್ಟರು ವಂದನೆ ಸಲ್ಲಿಸಿದರು. ಬಿಲಿಯನ್ ಫೌಂಡೇಶನ್ ಪ್ರತಿನಿಧಿಗಳಾದ ಶ್ರೀ ಟಿ. ಎ. ಅರುಣ್‌ಕುಮಾರ್ ಹೊಳ್ಳರು ಕಾರ್ಯಕ್ರಮ ನಿರೂಪಿಸಿದರು.

## ೬. ಬೆಂಗಳೂರು ಅಂಗಸಂಸ್ಥೆಯ ನೂತನ ಕಟ್ಟಡದ 'ಭೂಮಿ ಪೂಜೆ'

ಕೂಟ ಮಹಾಜಗತ್ತು ಬೆಂಗಳೂರು ಸಂಸ್ಥೆಯು ದಿನಾಂಕ 31-3-2013 ಭಾನುವಾರ ಬೆಳಗ್ಗೆ 10 ಗಂಟೆಗೆ ದಿ। ನಾಗವೇಣಿಯಮ್ಮ ಸ್ಮರಣಾರ್ಥವಾಗಿ ಶ್ರೀ ಪಿ. ಸುರೇಶ್ ಹಂದೆ



ದಂಪತಿಗಳಿಂದ ಭೂದಾನವಾಗಿ ಪಡೆದ ಖಾಲಿ ನಿವೇಶನದಲ್ಲಿ ಭವ್ಯವಾಗಿ ನಿರ್ಮಿಸಿದ ವೇದಿಕೆ ಮತ್ತು ಸಭಾಂಗಣದಲ್ಲಿ 'ಯೋಜಿತ ನೂತನ ಕಟ್ಟಡದ 'ಭೂಮಿ ಪೂಜೆ'ಯನ್ನು ವೇದಮೂರ್ತಿ ಜಿ. ಅನಂತಪದ್ಮನಾಭ ಉಪಾಧ್ಯರ ನೇತೃತ್ವದಲ್ಲಿ ವ್ಯವಸ್ಥಿತವಾಗಿ ನಡೆಸಿತು.

ಮುಖ್ಯ ಅತಿಥಿಗಳಾದ ಶ್ರೀ ರಾಮಚಂದ್ರಗೌಡ, ಉಪಾಧ್ಯಕ್ಷರು, ರಾಜ್ಯ ಯೋಜನ ಮಂಡಳಿ, ಕರ್ನಾಟಕ ಸರ್ಕಾರ, ಶ್ರೀ ಎಂ. ಕೃಷ್ಣಪ್ಪ, ಶಾಸಕರು, ಬೆಂಗಳೂರು ದಕ್ಷಿಣ ಹಾಗೂ ಉಪಾಧ್ಯಕ್ಷರು, ಬೆಂ.ಮ.ನ.ಸಾ. ಸಂಸ್ಥೆ, ಶ್ರೀ ಪುಂಡಲೀಕ ಹಾಲಂಬಿ, ರಾಜ್ಯಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಡಾ। ಪಿ. ವಿಷ್ಣುಮೂರ್ತಿ ಐತಾಳ್, ಅಧ್ಯಕ್ಷರು, ದಕ್ಷಿಣ ಕನ್ನಡ ಕೂಟ ಬ್ರಾಹ್ಮಣರ ಮಿತ್ರ ಮಂಡಳಿ, ಬೆಂಗಳೂರು ಮತ್ತು ಅಂಗಸಂಸ್ಥೆಯ ಅಧ್ಯಕ್ಷ ಶ್ರೀ ಜಿ. ಮಂಜುನಾಥ್ ಮಯ್ಯರು ಹಾಗೂ ಕೂಟಮಹಾಜಗತ್ತಿನ ಬೆಂಗಳೂರು ಅಂಗಸಂಸ್ಥೆಯ ಪದಾಧಿಕಾರಿಗಳು, ಕಾರ್ಯಕಾರಿ ಮಂಡಳಿಯ ಸದಸ್ಯರು ಭಾಗವಹಿಸಿದ್ದರು. ಬೆಂಗಳೂರು ಅಂಗಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಘವೇಂದ್ರ ಕಾರಂತರು ಸ್ವಾಗತಿಸಿದರು.

ಅಂಗಸಂಸ್ಥೆಯ ಅಧ್ಯಕ್ಷ ಶ್ರೀ ಮಂಜುನಾಥ ಮಯ್ಯರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಬೆಂಗಳೂರು ಅಂಗಸಂಸ್ಥೆಗೆ ಭೂದಾನ ನೀಡಿದ ಶ್ರೀ ಪಿ. ಸುರೇಶ್ ಹಂದೆ ದಂಪತಿಗಳನ್ನು ಮತ್ತು ಕುಟುಂಬದವರನ್ನು ಶ್ಲಾಘಿಸಿದರಲ್ಲದೆ, ಕೊಡುಗೆ ನೀಡಿದ ಸದಸ್ಯರನ್ನು ಅಭಿನಂದಿಸಿದರು. ಭೂದಾನದ ದಾನಿಗಳಾದ ಶ್ರೀ ಪಿ. ಸುರೇಶ್ ಹಂದೆ ಮತ್ತು ಶ್ರೀಮತಿ ಆಶಾಹಂದೆ ಮತ್ತು ಅವರ ಮಕ್ಕಳನ್ನು ಮುಖ್ಯ ಅತಿಥಿಗಳಿಂದ ಸಮ್ಮಾನಿಸಲಾಯಿತು.

ಮುಖ್ಯ ಅತಿಥಿ ಶ್ರೀ ರಾಮಚಂದ್ರಗೌಡರು ಮಾತಾನಾಡುತ್ತಾ ಕೂಟ ಸಮಾಜವು ಒಂದು 'ವಿಶೇಷವಾದ ಸಮಾಜ'ವೆಂದು ಬಣ್ಣಿಸಿದರು ಮತ್ತು ಶ್ರೀ ಪಿ. ಸುರೇಶ್ ಹಂದೆ ದಂಪತಿಯವರು ಈ ಸಂಸ್ಥೆಗೆ ನೀಡಿದ ಭೂದಾನದ ಕೊಡುಗೆಯನ್ನು ಶ್ಲಾಘಿಸಿದರು. ಶ್ರೀ ಎಂ. ಕೃಷ್ಣಪ್ಪನವರು ತಮ್ಮ ಭಾಷಣದಲ್ಲಿ ಯೋಜಿತ ನೂತನ ಕಟ್ಟಡವನ್ನು ಒಂದು 'ಮಾದರಿ ಕಟ್ಟಡ' ಮಾಡುವುದಕ್ಕೆ ಸಹಾಯ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟರು. ಅನಂತರ ಇವರಿಬ್ಬರನ್ನು ಸಂಸ್ಥೆ ವತಿಯಿಂದ

ಅಭಿನಂದಿಸಲಾಯಿತು.


ಯೋಜಿತ ನೂತನ ಕಟ್ಟಡಕ್ಕೆ ಅನೇಕ ಸದಸ್ಯರು ವೇದಿಕೆಗೆ ಬಂದು ತಮ್ಮ ದೇಣಿಗೆಯನ್ನು ಘೋಷಿಸಿದರು. ಅವರಲ್ಲಿ ಶ್ರೀ ಪುಂಡಲೀಕ ಹಾಲಂಬಿ, ಡಾ| ವಿಷ್ಣುಮೂರ್ತಿ ಐತಾಳ್ ಹಾಗೂ ಶ್ರೀ ಜಿ. ಮಂಜುನಾಥ ಮಯ್ಯರು ಸೇರಿದ್ದರು. ಒಟ್ಟು ಸುಮಾರು 15 ಲಕ್ಷ ರೂಪಾಯಿ ಕಟ್ಟಡದ ನಿರ್ಮಾಣಕ್ಕೆ ಘೋಷಣೆಯಾಯಿತು.

ಅಂಗಸಂಸ್ಥೆಯ ಉಪಾಧ್ಯಕ್ಷ ಶ್ರೀ ಶ್ರೀಧರ ಕಾರಂತರು ವಂದನೆಗಳನ್ನು ಸಲ್ಲಿಸಿದರು. ಕಾರ್ಯಕ್ರಮದ ನಂತರ ಸುಮಾರು 700 ಜನರಿಗೆ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು.

**ಬಾತ್ಮೀದಾರ : ಪಿ. ಸತ್ಯನಾರಾಯಣ ಉಪಾಧ್ಯ**

## ೭. ಕುಂದಾಪುರ ಅಂಗಸಂಸ್ಥೆಯಲ್ಲಿ ಸಂತಾಪ ಸೂಚಕ ಸಭೆ

ಕೂಟ ಮಹಾಜಗತ್ತು ಕುಂದಾಪುರ ಅಂಗಸಂಸ್ಥೆಯ ಸ್ಥಾಪಕ ಅಧ್ಯಕ್ಷ ಶ್ರೀ ಸೋಮನಾಥಯ್ಯಾ ಹಲ್ಸನಾಡು ತಾ. 30-3-2013ರಂದು ಸ್ವರ್ಗಸ್ಥರಾದ ಪ್ರಯುಕ್ತ ತಾ. 9-4-2013ರಂದು ಸತ್ಯಮಾನಸ ಕುಂದಾಪುರದಲ್ಲಿ ಕೂಟ ಮಹಾಜಗತ್ತು ಕುಂದಾಪುರ ಅಂಗಸಂಸ್ಥೆಯ ಕಾರ್ಯಕಾರಿಣಿ ಸಮಿತಿ ಸಭೆ ಮತ್ತು ಕೂಟ ಬಂಧುಗಳ 'ಸಂತಾಪ ಸೂಚಕ ಸಭೆ' ಕರೆಯಲಾಯ್ತು.



ಸಭೆಯಲ್ಲಿ ಹಿರಿಯ ಸದಸ್ಯ ಶ್ರೀ ನಾರಾಯಣ ಕಾರಂತ, ವಡೇರಹೋಬಳಿಯವರು, ಶ್ರೀ ಸೋಮನಾಥಯ್ಯರು ಅಂಗಸಂಸ್ಥೆಯನ್ನು ಸಂಘಟಿಸಿದ ರೀತಿಯನ್ನು ಶ್ಲಾಘಿಸಿದರು. ಶ್ರೀ ವೆಂಕಟರಮಣ ಹೊಳ್ಳ ಉಪ್ಪಿನಕುದ್ರು ಅವರೊಬ್ಬ ಪ್ರಾಮಾಣಿಕ ವ್ಯಕ್ತಿ ಎಂದರು. ಡಾ| ಕೆ. ಎಸ್. ಕಾರಂತರು ಅವರು ಅನೇಕ ಸಂಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಮತ್ತು ನೇರವಾಗಿ ನುಡಿಯುತ್ತಿದ್ದರೆಂದರು. ಡಾ| ನರಸಿಂಹ ಮೂರ್ತಿಯವರು ನೇರ ನುಡಿವ ವ್ಯಕ್ತಿ ಎಂದು ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕೂಟ ಮಹಾಜಗತ್ತಿನ ಅಧ್ಯಕ್ಷ ಶ್ರೀ ರಾಜಗೋಪಾಲಕೃಷ್ಣ ಹೊಳ್ಳರು ತಮ್ಮ ಮಾತಿನಲ್ಲಿ ಶ್ರೀ ಸೋಮನಾಥಯ್ಯನವರು ಸಂಸ್ಥೆಯನ್ನು ಪ್ರಾರಂಭ ಮಾಡುವಾಗ ಸಹಕರಿಸಿದ ರೀತಿಯನ್ನು ಮತ್ತು ಅವರ ಉದಾರತೆಯನ್ನು ತಿಳಿಸಿದರು.

ಕಾರ್ಯದರ್ಶಿ ಪಿ. ವೆಂಕಟರಮಣರಾವ್ ಅವರು ಶ್ರೀಮತಿ ಮಾಲಿನಿ ಸೋಮನಾಥಯ್ಯನವರಿಗೆ ಬರೆದ ಸಂತಾಪಸೂಚಕ ಪತ್ರವನ್ನು ಓದಿ ತಿಳಿಸಿದರು.

ಶ್ರೀ ಸೋಮನಾಥಯ್ಯ ಹಲ್ಸನಾಡು ಅವರ ಆತ್ಮಕ್ಕೆ ಮೌನ ಶ್ರದ್ಧಾಂಜಲಿಯನ್ನು ಅರ್ಪಿಸಲಾಯ್ತು. ಕೊನೆಗೆ ಶಾಂತಿ ಮಂತ್ರದೊಂದಿಗೆ ಸಭೆಯು ಮುಕ್ತಾಯವಾಯಿತು.

**ವರದಿ : ಪಿ. ವೆಂಕಟರಮಣರಾವ್**

## ೮. ನರಸಿಂಹ ಜಯಂತಿಯಂದು ಕೂಟ ಬಂಧು ಪತ್ರಿಕೆಯ ಸದಸ್ಯತ್ವದ ನೋಂದಾವಣೆಯ ಬೃಹತ್ ಆಂದೋಲನ

ಕೂಟ ಮಹಾಜಗತ್ತು ಸಾಲಿಗ್ರಾಮ, ಬೆಂಗಳೂರು ಅಂಗಸಂಸ್ಥೆ ವತಿಯಿಂದ ದಿನಾಂಕ



23-5-2013ರಂದು ಗುರುನರಸಿಂಹ ಕಲ್ಯಾಣಮಂದಿರದಲ್ಲಿ ನಡೆದ ನರಸಿಂಹ ಜಯಂತಿಯಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಶ್ರೀ ಪುಂಡಲೀಕ ಹಾಲಂಬಿಯವರು ಮತ್ತು ಕೂಟ ಮಹಾಜಗತ್ತು ಸಾಲಿಗ್ರಾಮ ಬೆಂಗಳೂರು ಅಂಗಸಂಸ್ಥೆಗೆ ಭೂದಾನ ಮಾಡಿದ ಶ್ರೀ ಪಿ. ಸುರೇಶ ಹಂದೆಯವರು ಒಡಗೂಡಿ ಕೂಟಬಂಧು ಪತ್ರಿಕೆಯ ಸದಸ್ಯತ್ವದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಆ ಸಮಯದಲ್ಲಿ ಹಲವಾರು ಕೂಟ ಬಂಧುಗಳು ತಮ್ಮ ಸದಸ್ಯತ್ವವನ್ನು ನೊಂದಾಯಿಸಿಕೊಂಡರು ಹಾಗೂ ತಮ್ಮ ಬಂಧುಗಳನ್ನು ಕರೆದು ತಂದು ನೊಂದಾಯಿಸಲು ಹುರಿದುಂಬಿಸಿದರು.

ಈ ಕಾರ್ಯಕ್ರಮವನ್ನು ಕೂಟಬಂಧು ಟ್ರಸ್ಟಿನ ಕಾರ್ಯಕಾರಿ ಮಂಡಳಿಯ ಸಕ್ರಿಯ ಸದಸ್ಯ ಬೆಂಗಳೂರಿನ ಶ್ರೀ ಚಂದ್ರಶೇಖರ ಕಾರಂತರು ನಿಯೋಜಿಸಿದರು.

ಆತ್ಮೀಯ ಕೂಟ ಸದಸ್ಯರೇ ಪ್ರತಿಮನೆ, ಮನಗಳಲ್ಲಿ ಇರಬೇಕಾದ ಕೂಟ ಬಂಧು ಪತ್ರಿಕೆಯ ಸದಸ್ಯತ್ವವನ್ನು ನೋಂದಾಯಿಸಲು ಮತ್ತು ಜಾಹಿರಾತುಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ.

**ಚಂದ್ರಶೇಖರ ಕಾರಂತ**

ಕೂಟಬಂಧು ಟ್ರಸ್ಟ್ ಕಾರ್ಯಕಾರಿ ಮಂಡಳಿ ಸದಸ್ಯರು

ಸಂತೃಪ್ತಿ, 40, ಮೊದಲನೇ ಅಡ್ಡರಸ್ತೆ, ಚೌಡಯ್ಯ ಬ್ಲಾಕ್, ಎಚ್‌ಎಂಟಿ ಲೇಔಟ್

ಆರ್.ಟಿ.ನಗರ, ಬೆಂಗಳೂರು - 560 032, ಮೊ : 9448686862

## ೯. ನಮ್ಮ ಆಚಾರ ವಿಚಾರಗಳನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸಬೇಕಾದುದು ಅಗತ್ಯ

ಮಧೂರು : ನಮ್ಮ ಸಮಾಜದಲ್ಲಿ ಅನಾದಿಕಾಲದಿಂದಲೇ ಆಚರಿಸಿಕೊಂಡು ಬರುತ್ತಿರುವ ಆಚಾರ-ವಿಚಾರಗಳನ್ನು, ಸಂಪ್ರದಾಯಗಳನ್ನು, ಅವುಗಳ ಮಹತ್ವವನ್ನು ತಿಳಿದು ಮುಂದಿನ ತಲೆಮಾರಿಗೆ ಹಸ್ತಾಂತರಿಸಬೇಕಾದ ಗುರುತರವಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂಬುದಾಗಿ ಕೂಟ ಮಹಾಜಗತ್ತು ಇದರ ಕಾಸರಗೋಡು ಅಂಗಸಂಸ್ಥೆಯ ಮಹಿಳಾ ವೇದಿಕೆಯ ನಿಕಟಪೂರ್ವ ಅಧ್ಯಕ್ಷೆ ದೇವಕಿ ವಿ. ಹೊಳ್ಳ ಅವರು ಅಭಿಪ್ರಾಯಪಟ್ಟರು. ಕಾಸರಗೋಡು ಅಂಗಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾದ ನೈತಿಕ ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.



ಕಾರ್ಯಕ್ರಮದಲ್ಲಿ ಕಾಸರಗೋಡು ಅಂಗಸಂಸ್ಥೆಯ ಅಧ್ಯಕ್ಷ ಬಿ. ನಾರಾಯಣ ಮಯ್ಯ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಸಾಲಿಗ್ರಾಮದ ಶ್ರೀ ಗುರುನರಸಿಂಹ ದೇವಾಲಯದ ಧರ್ಮದರ್ಶಿ ನೀರಾಳ ಕೃಷ್ಣ ಹೊಳ್ಳ, ಮಂಗಲ್ಪಾಡಿ ಅಂಗಸಂಸ್ಥೆಯ ಶಶಿಕಲಾ ಜಿ. ಮಯ್ಯ, ಕಾಸರಗೋಡು ಅಂಗಸಂಸ್ಥೆಯ ಕಾರ್ಯದರ್ಶಿ ಎಂ. ನರಸಿಂಹರಾಜ್ ಮುಂತಾದವರು ಉಪಸ್ಥಿತರಿದ್ದರು.

ನೈತಿಕ ಶಿಬಿರದ ಅಂಗವಾಗಿ ನಮ್ಮ ಸಂಪ್ರದಾಯಗಳು, ಚಿತ್ರಕಲೆ, ನೀತಿ ಕಥೆ, ಭಜನಾ ಹಾಡು ಮುಂತಾದ ವಿಷಯಗಳ ಕುರಿತಾಗಿ ತರಗತಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ ಎಂ. ನಾರಾಯಣ ಅಡಿಗ, ಬಿ. ಕೃಷ್ಣ ಕಾರಂತ, ಭಾರತಿ ಎನ್., ಜಯಲಕ್ಷ್ಮಿ ಹೊಳ್ಳ, ಗೀತಾ ಕಾರಂತ, ಸುಶೀಲಾ ಮಯ್ಯ, ಮೀನಾಕ್ಷಿ ಯು. ಕಾರಂತ, ಸಂತೋಷ್ ಹೊಳ್ಳ ಮುಂತಾದವರು ತರಗತಿಗಳನ್ನು ನಡೆಸಿಕೊಟ್ಟರು. ಸುಮಾರು ಐವತ್ತರಷ್ಟು ಶಿಬಿರಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

ಅಪರಾಹ್ನ ಜರಗಿದ ಸಮಾರೋಪ ಸಮಾರಂಭದಲ್ಲಿ ಕಾಸರಗೋಡು ಅಂಗಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಮಾಧವ ಹೊಳ್ಳ ಅವರು ಮಾತನಾಡಿ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮಹಿಳೆಯರು ಹೆಚ್ಚು ಮುತುವರ್ಜಿ ವಹಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಈ ಸಂದರ್ಭದಲ್ಲಿ ಡಾ। ಎಸ್. ಎನ್. ರಾವ್ ಹಾಗೂ ಸುಶೀಲಾ ಕಾರಂತ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಅಧ್ಯಾಪಕರಾದ ನರಸಿಂಹ ಮಯ್ಯ ಎಂ. ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾರಂಭದಲ್ಲಿ ಮಹಿಳಾ ವೇದಿಕೆಯ ಅಧ್ಯಕ್ಷೆ ನಿರ್ಮಲಾ ಜಿ. ತುಂಗ ಸ್ವಾಗತಿಸಿ, ಕೊನೆಯಲ್ಲಿ ಸುಮಿತ್ರಾ ಆರ್. ಮಯ್ಯ ವಂದಿಸಿದರು. ಮಹಿಳಾ ವೇದಿಕೆಯ ಕಾರ್ಯದರ್ಶಿನಿ ಜಯಶೀಲಾ ಎಸ್ ಹೊಳ್ಳ ನಿರೂಪಿಸಿದರು.

**ವರದಿ : ನರಸಿಂಹ ಮಯ್ಯ ಎಂ.**

## ೧೦. ಪರಿಶ್ರಮದಿಂದ ಯಶಸ್ಸು ಸಾಧ್ಯ : ಪಿ. ಪಿ. ಉಪಾಧ್ಯಾಯ

ಕೃಷ್ಣಾಪುರ : 'ಬ್ರಾಹ್ಮಣರಲ್ಲಿ ಪ್ರತಿಭೆ ಇದೆ. ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು. ಸಂಘಟನೆಗಳು ಬ್ರಾಹ್ಮಣ್ಯವನ್ನು ಉಳಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಬೇಕು. ಕಠಿನವಾದ ಪರಿಶ್ರಮದಿಂದ ಖಂಡಿತವಾಗಿಯೂ ಯಶಸ್ಸು ಸಾಧ್ಯವಿದೆ. ಈ ನಿಟ್ಟಿನಲ್ಲಿ ಎಲ್ಲರೂ ಒಂದಾಗಿ ಸಂಘಟನೆಯನ್ನು ಬಲಪಡಿಸೋಣ. ಸಮಾಜದ ಉನ್ನತಿಗೆ ಶ್ರಮಿಸೋಣ' ಎಂಬುದಾಗಿ ಎಂ. ಆರ್. ಪಿ. ಎಲ್.ನ

ಮೇನೇಜಿಂಗ್ ಡೈರೆಕ್ಟರ್ ಶ್ರೀ ಪಿ. ಪಿ. ಉಪಾಧ್ಯಾಯ ನುಡಿದರು.

ಇವರು ಕೂಟ ಮಹಾ ಜಗತ್ತು ಸಾಲಿಗ್ರಾಮ (ರಿ.) ಅಂಗಸಂಸ್ಥೆ ಕಾಟಿಪಳ್ಳ ಕೃಷ್ಣಾಪುರ ಇದರ ಇಪ್ಪತ್ತೈದನೇ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ತನಗಿತ್ತ ಸಮ್ಮಾನಕ್ಕೆ ಉತ್ತರವಾಗಿ ಮಾತನಾಡಿ ಸಂಸ್ಥೆಗೆ ಶುಭ ಹಾರೈಸಿದರು.

ಗುರುನರಸಿಂಹ ಸಭಾಭವನ-ಕೃಷ್ಣಾಪುರ ಇಲ್ಲಿ ನಡೆದ ಈ ಸಮಾರಂಭದಲ್ಲಿ ಅಂಗಸಂಸ್ಥೆಯ ಅಧ್ಯಕ್ಷ ಶ್ರೀ ಪಿ. ಕೆ. ಉಪಾಧ್ಯಾಯ ಅಧ್ಯಕ್ಷತೆ ವಹಿಸಿದ್ದು ಮುಖ್ಯ ಅತಿಥಿಗಳಾಗಿ ಕೇಂದ್ರ ಸಂಸ್ಥೆಯ ಉಪಾಧ್ಯಕ್ಷ ಪಿ. ಶೇಷಗಿರಿ ರಾವ್, ಕೇಂದ್ರ ಸಂಸ್ಥೆಯ ಕೋಶಾಧಿಕಾರಿ ಶ್ರೀ ಕೆ. ತಾರನಾಥ ಹೊಳ್ಳ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಗುಣಪೂರ್ಣಾ ಸಿ. ಐತಾಳ್, ಯುವ ಬಳಗದ ಸಂಚಾಲಕ ಮಹೇಶ್ ಮೂರ್ತಿ, ವಿವಿದೋದ್ದೇಶ ದತ್ತಿ ಮಂಡಳಿಯ ಅಧ್ಯಕ್ಷ ಶ್ರೀ ಕೆ. ಎಸ್. ಮಯ್ಯ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಗಣಯಾಗ, ಪ್ರಾರ್ಥನೆ ಜರುಗಿ ಅಂಗಸಂಸ್ಥೆಯ ಅಧ್ಯಕ್ಷ ಪಿ. ಕೆ. ಉಪಾಧ್ಯಾಯ  ಸ್ವಾಗತಿಸಿದರು. ಮಹಿಳಾ ವೇದಿಕೆ, ಗುರುನರಸಿಂಹ ಯುವ ಬಳಗ, ಗುರುನರಸಿಂಹ ವಿವಿದೋದ್ದೇಶ ದತ್ತಿ ಮಂಡಳಿ ಇವುಗಳ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದಿಟ್ಟು ಅನುಮೋದನೆಗೊಳಿಸಲಾಯಿತು. ಇಪ್ಪತ್ತೈದು ವರ್ಷಗಳಲ್ಲಿ ಸಂಸ್ಥೆ ನಡೆದು ಬಂದ ಹಾದಿಯನ್ನು ಸಿಂಹಾವಲೋಕನದ ಮೂಲಕ ಶ್ರೀ ಪಿ. ಪುರುಷೋತ್ತಮ ರಾವ್ ಸಭೆಯ ಮುಂದಿಟ್ಟರು. ಗತ ವರ್ಷದಲ್ಲಿ ನಮ್ಮನ್ನಗಲಿದ ಸಮಾಜ ಬಾಂಧವರಿಗೆ ಒಂದು ನಿಮಿಷದ ಮೌನ ಪ್ರಾರ್ಥನೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ತನ್ನ ಕರ್ತವ್ಯ ಪರತೆ, ಪರಿಶ್ರಮ, ನಿಷ್ಠೆ ಮುಂತಾದ ವಿಶೇಷ ಸಾಧನೆಯಿಂದ MRPLನ ಪ್ರತಿಷ್ಠಿತ M.D. ಸ್ಥಾನಕ್ಕೇರಿದ ಕೂಟ ಸಮಾಜದ ಹೆಮ್ಮೆಯ ಸುಪುತ್ರ ಶ್ರೀ ಪಿ. ಪಿ. ಉಪಾಧ್ಯಾಯ ಇವರನ್ನು ಶಾಲು ಹೊದಿಸಿ ಫಲಪುಷ್ಪ, ಸ್ಮರಣಿಕೆ ಗೌರವ ಫಲಕಗಳೊಂದಿಗೆ ಅಂಗಸಂಸ್ಥೆಯ ವತಿಯಿಂದ ಸಮ್ಮಾನಿಸಲಾಯಿತು.

ಸಹಸ್ರಚಂದ್ರದರ್ಶನಗೈದ ಹಿರಿಯ ಕೂಟಬಂಧು ಶ್ರೀ ಸುಬ್ರಾಯ ನಾವಡ, ಶ್ರೀಮತಿ ಶಾರದಾ ಕಾರಂತ ಇವರಿಗೆ ಗೌರವಾರ್ಪಣೆ ಹಾಗೂ S.S.L.C. ಮತ್ತು ಪದವಿ ವಿಭಾಗಗಳಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಅಂಕಗಳಿಸಿದ 9 ಜನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಪ್ರತಿ ವರ್ಷ ನಡೆಸುವ ವಸಂತ ವೇದ ಪಾಠ ಶಿಬಿರದ ಸಮಾರೋಪ ಸಮಾರಂಭವನ್ನು ಈ ಸಂದರ್ಭದಲ್ಲಿ ನಡೆಸಲಾಯಿತು. ಶ್ರೀ ವಿಶ್ವೇಶ್ವರ ಕಾರಂತರು ವಸಂತ ವೇದ ಪಾಠ ಶಿಬಿರದ ವರದಿಯನ್ನು ಸಭೆಯ ಮುಂದಿಟ್ಟರು. ಗುರುಗಳಾಗಿ ಸಹಕರಿಸಿದ್ದ ಶ್ರಿ ಗುರುಪ್ರಸನ್ನ ಉಳ್ಳೂರು ಮತ್ತು ಶ್ರೀ ಸುದರ್ಶನ ಉಪಾಧ್ಯಾಯ ಇವರಿಗೆ ಗುರುಕಾಣಿಕೆ ನೀಡಿ ಗೌರವಿಸಲಾಯಿತು. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ವೇ. ಮೂರ್ತಿ ಕೋಡಿಮಜಲು ಅನಂತ ಪದ್ಮನಾಭ ಉಪಾಧ್ಯಾಯ ತಮ್ಮ ಆಶೀರ್ವಚನದಲ್ಲಿ ಸಮಾಜದ ಉನ್ನತಿಗಾಗಿ ನಿತ್ಯಜೀವನದಲ್ಲಿ ಅನುಸರಿಸಬೇಕಾದ ಆಚರಣೆಗಳು ಮತ್ತು ಅದರ ಮಹತ್ವವನ್ನು ವಿವರಿಸಿ ಶುಭಾಶಂಸನೆಗೈದರು.

ಕಾರ್ಯದರ್ಶಿ ನಾರಾಯಣ ನಾವಡ ವಂದಿಸಿದರು. ಶ್ರೀಮತಿ ಯಮುನಾ ಪಿ. ರಾವ್

ಕಾರ್ಯಕ್ರಮ ನಿರೂಪಿಸಿದರು.

